
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


23 ಏಪ್ರಿಲ್, 2014 ಪುಟ 20 ರೂ. 15/-

ಬ್ರಾಹ್ಮಣಿಕೆ ವಿರುದ್ಧ ಸಿಡಿದೆದ್ದ ಶರಣರು





ಅನಂತ್‌ಗೆ ಕಾದಿದೆ ಅವನತಿ

ನಿಲೇಕಣಿ ಎಂಬ ಹೊಸ ಗಾಳಿ




ಬಾಗಲಕೋಟೆ
ದ್ದುಗೆಯಿಂದ
ದ್ದಿ ಔಟ್!






ಚಾಮರಾಜನಗರ
ಸಿದ್ದುಗೆ ಬೆಲೆ

ದಾವಣಗೆರೆ
ಂಗಾಯತರ
ಹಾಸಮರ





ಉಡುಪಿ-ಚಿಕ್ಕಮಗಳೂರು
ಜೆಪಿಗೆ ಜಯ
ಶೋಭಾಗೆ ಮನೆ

ಧಾರವಾಡ
ಲಕರ್ಣಿಗೆ
ಗಾಯತ ಮತಗಳು






ಮಂಡ್ಯ : ರಮ್ಯಾ
ಮಂಡೆ ಬಿಸಿ


ಹಾವೇರಿ
ರಿ ಉದಾಸಿಗೂ
ಸೋಲು





ದಕ್ಷಿಣಕನ್ನಡ
ಮಿಂಚುತ್ತಿರುವ
ಪೂಜಾರಿ

ಮೋದಿ ಮಡದಿ ಪ್ರತ್ಯಕ್ಷ



ಅಭಿವೃದ್ಧಿ ಮತ್ತು ರಾಜಕೀ...

ಯೂನಿವರ್ಸಿಟಿ ಪ್ರೊಫೆಸರ್‌ರೊಬ್ಬರು ಬರೆದ ಜನತೆಯ ಪ್ರ...

ಚುನಾವಣೆಗಳ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಿಗೆ ಪ್ರತಿಯಾಗಿ, ಜನತೆಯ ಪ್ರಣಾಳಿಕೆ ಎಂದು ಬಿಡುಗಡೆ ಮಾಡುವ ವಾಡಿಕೆ ಸಾಕಷ್ಟು ಕಾಲದಿಂದ ಜಾರಿಯಲ್ಲಿದೆ. ಈ ವರ್ಷವಂತೂ ಮಹಿಳೆಯರ ಪ್ರಣಾಳಿಕೆ, ವಿದ್ಯಾರ್ಥಿಗಳ ಪ್ರಣಾಳಿಕೆ ಎಂದೆಲ್ಲಾ ಬಿಡುಗಡೆಯಾಗಿವೆ. ಪಕ್ಷಗಳ ಪ್ರಣಾಳಿಕೆಗಳಲ್ಲಿ 'ಜನಪ್ರಿಯ'ವೆಂದು ತೋರುವ ಹಲವು ಘೋಷಣೆಗಳಿರುತ್ತವಾದರೂ, ಅವು ನಿಜಾರ್ಥದಲ್ಲಿ ಜನರ ಬದುಕನ್ನು ಬದಲಿಸುವುದಿಲ್ಲ; ಬದಲಿಗೆ ಓಟು ಕಸಿಯುವ ಪೊಳ್ಳು ಘೋಷಣೆಗಳಾಗಿರುತ್ತವೆ ಎಂಬುದನ್ನು ಹೇಳುವುದು ಸಾಮಾನ್ಯವಾಗಿ ಇಂತಹ ಪ್ರಣಾಳಿಕೆಗಳ ಉದ್ದೇಶವಾಗಿರುತ್ತದೆ. ಸಹಜವಾಗಿ ಅವು ಸಾಮಾನ್ಯ ಜನರ ಬದುಕನ್ನು ಮೂಲಭೂತವಾಗಿ ಬದಲಿಸಬಲ್ಲ ಕೆಲವು ಕ್ರಮಗಳಿಗಾಗಿ ಒತ್ತಾಯಿಸುತ್ತವೆ. ಆದರೆ ಅದಕ್ಕಿಂತ ಹೆಚ್ಚಾಗಿ ಇಂದಿನ ಒಟ್ಟು ಅಭಿವೃದ್ಧಿ ಮಾದರಿಯನ್ನು ವಿವರವಾಗಿ ಬಿಡಿಸಿಡುವ, ಸೈದ್ಧಾಂತಿಕ ನೆಲೆಯಿಂದ, ತಾರ್ಕಿಕವಾಗಿ ವಿಶ್ಲೇಷಣೆ ಮಾಡುವ ಪುಸ್ತಕಗಳಾಗಿರುವುದಿಲ್ಲ; ಅವುಗಳ ಉದ್ದೇಶವೂ ಅದಾಗಿರುವುದಿಲ್ಲ.

ಚುನಾವಣೆಯ ಸಂದರ್ಭದಲ್ಲಿ ಹೆಚ್ಚೆಚ್ಚು ಕೇಳಿಬರುತ್ತಿರುವ 'ಅಭಿವೃದ್ಧಿ'ಗೂ ರಾಜಕಾರಣಕ್ಕೂ ಇರುವ ನಂಟನ್ನು ಬಿಡಿಸಿಡುವುದು ಈ ಚುನಾವಣೆಯಲ್ಲಿ ಇನ್ನೊಂದು ಕಾರಣಕ್ಕೂ ಮುಖ್ಯವಾದುದಾಗಿದೆ. ಮೋದಿಯ ಗುಜರಾತ್ ಮಾದರಿ ಅಪಾಯಕಾರಿ ಅಭಿವೃದ್ಧಿಯ ಕುರಿತಾದ ಪ್ರಚಾರ, ಜನರನ್ನು ಯಾವ ರೀತಿ ಮೂರ್ಖರನ್ನಾಗಿಸಬಹುದು ಎಂಬುದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಇಂತಹ ಮೂರ್ಖತನದಿಂದ ಜನರನ್ನು ಹೊರತರಲು ಮುಂದಿಡಲಾಗುತ್ತಿರುವ ಅಂಕಿ-ಅಂಶಗಳು ಮತ್ತು ಗುಜರಾತ್‌ನ ನಿಜ ಚಿತ್ರಣದ ಕಥಾನಕಗಳಿಂದ ನಿರೀಕ್ಷಿತ ಪ್ರಯೋಜನವಾಗುತ್ತಿಲ್ಲ. ಇದರ ಜೊತೆಗೆ ಇನ್ನೆರಡು ಅಭಿವೃದ್ಧಿಯ ಮಾದರಿಗಳಿವೆ. ಆಮ್ ಆದ್ಮಿಯ 'ಪರ'ವಾಗಿರುವವು. ಅವೆರಡೂ ವಿಶ್ವಬ್ಯಾಂಕ್ ಮಾದರಿ ಅಭಿವೃದ್ಧಿಗಳು. ಒಂದು, ಕಾಂಗ್ರೆಸ್‌ದು. ಇನ್ನೊಂದು ಆಮ್‌ಆದ್ಮಿ ಪಕ್ಷದ್ದು. ನರೇಗಾ, ಮಾಹಿತಿ ಹಕ್ಕು, ಶಿಕ್ಷಣದ ಹಕ್ಕು, ಆರೋಗ್ಯದ ಹಕ್ಕು, ಆದಿವಾಸಿಗಳಿಗೆ ರಕ್ಷಣೆ, ಬೀದಿ ವ್ಯಾಪಾರಿಗಳಿಗೆ ರಕ್ಷಣೆ, ರೈತರ ಭೂಮಿ ವಶಪಡಿಸಿಕೊಳ್ಳುವಾಗ ಭೂಮಿಯ ಒಡೆಯರ ಮಾತಿಗೂ ಕಿಮ್ಮತ್ತು ತಂದುಕೊಡುವ ಕಾಯ್ದೆ, ಅಸಂಘಟಿತ ಕಾರ್ಮಿಕರ ಕಲ್ಯಾಣ ಇತ್ಯಾದಿ ಇತ್ಯಾದಿ ಯೋಜನೆಗಳ ಮೂಲಕ ಮಾತನಾಡುವುದು ಕಾಂಗ್ರೆಸ್‌ನ ಮಾದರಿ.

ಇದೇ ಮಾದರಿಯಲ್ಲಿ, ಆದರೆ ಇನ್ನೂ ಒಂದಷ್ಟು ಹಕ್ಕಿನ ಪರಿಭಾಷೆಯಲ್ಲಿ ಮಂಡಿತವಾದ, ಸ್ಥಳೀಯ ಜನರ ಅಭಿಪ್ರಾಯಗಳೇ ಮುಖ್ಯ ಎನ್ನುವ, ಸ್ವರಾಜ್ ಶೀರ್ಷಿಕೆಯಡಿ ಮುಂದಿಡಲಾದ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಭ್ರಷ್ಟಾಚಾರದ ವಿರುದ್ಧ ಗಟ್ಟಿಯಾಗಿ ದಬಾಯಿಸುವ ಪ್ರಣಾಳಿಕೆ. ಹೌದು, ನಿಮಗೆ ಆಶ್ಚರ್ಯವೆನಿಸಿದರೂ ನಿಜ, ಇದು ಆಮ್‌ಆದ್ಮಿ ಪಕ್ಷದ ಪ್ರಣಾಳಿಕೆಯೂ ಹೌದು, ವಿಶ್ವಬ್ಯಾಂಕ್ ಬಯಸುವ ಪ್ರಣಾಳಿಕೆಯೂ ಹೌದು.


ಮೋದಿಯ ಅಪಾಯಕಾರಿ ಅಭಿವೃದ್ಧಿಯ ಹಿಂದಿನ ಮೋಸ, ವಂಚನೆಗಳನ್ನೇ ಅರ್ಥ ಮಾಡಿಸುವುದು ಅಷ್ಟು ಸುಲಭವಾಗಿಲ್ಲ. ಹೀಗಿರುವಾಗ 'ಪ್ರತಿ ಕೈಗೆ ಶಕ್ತಿ ಕೊಡುವ, ಪ್ರತಿ ಕೈನ ಪ್ರಗತಿ ಬಯಸುವ' ಕಾಂಗ್ರೆಸ್‌ನ ಮಾದರಿಯೂ ಕಾರ್ಪೊರೇಟ್ ಉದ್ದಿಮೆದಾರರ ಪರವಾಗಿಯೇ ಇದೆ ಎನ್ನುವುದನ್ನು ತಿಳಿಸುವುದು ಇನ್ನೂ ಕಷ್ಟ. ಮೇಲ್ನೋಟಕ್ಕೆ ಜನಪರವಾದ ಪ್ರಣಾಳಿಕೆಯೆಂದು ಕಂಡುಬರುವ ಆಮ್‌ಆದ್ಮಿ ಪ್ರಣಾಳಿಕೆಯನ್ನು ವಿರೋಧಿಸುವುದಂತೂ ಸಾಧ್ಯವಿಲ್ಲ ಎನ್ನಿಸಿಬಿಡಬಹುದು. ಆದರೆ ಅದರಲ್ಲಿನ ಸಮಸ್ಯೆಯನ್ನೂ ಬಿಡಿಸಿಟ್ಟು ಸತ್ಯ ಸಂಗತಿಯನ್ನು ಮನವರಿಕೆ ಮಾಡಿಕೊಡುವ ಅಗತ್ಯವಂತೂ ಇದೆ.

ಈ ಅಗತ್ಯವನ್ನು ಈಡೇರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯದ ಪ್ರೊಫೆಸರ್‌ರೊಬ್ಬರು ಗಂಭೀರ ಪ್ರಯತ್ನ ಮಾಡಿದ್ದಾರೆ. ಸದ್ಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಎಂ.ಚಂದ್ರ ಪೂಜಾರಿಯವರ 'ಅಭಿವೃದ್ಧಿ ಮತ್ತು ರಾಜಕೀಯ' ಪುಸ್ತಕ ಇತರ ಕಾರಣಗಳ ಜೊತೆಗೆ, ಇಂದಿನ ಈ ಸಂದರ್ಭದ ಹಿನ್ನೆಲೆಯಲ್ಲಿ ಮಹತ್ವಪೂರ್ಣ ಕೃತಿಯಾಗಿದೆ. ಕೆಲವೆಡೆ ಇದ್ದಕ್ಕಿದ್ದಂತೆ ಅಕ್ಯಾಡೆಮಿಕ್ ಭಾಷೆಗೆ ಹೊರಳಿಕೊಳ್ಳುವ ವಾಕ್ಯಗುಚ್ಛಗಳು ಅಲ್ಲಲ್ಲಿ ಬಂದುಬಿಡುತ್ತವೆ ಎಂಬುದನ್ನು ಬಿಟ್ಟರೆ, ಅಕ್ಯಾಡೆಮಿಕ್ ಅಲ್ಲದ ಸಾಮಾನ್ಯ ಓದುಗರಿಗೂ ಅರ್ಥವಾಗುವ ಮಟ್ಟಿಗೆ ಈ ಪುಸ್ತಕ ಸರಳವಾಗಿದೆ. ಈ ಸರಳತೆಯು ಪುಸ್ತಕದ ಎರಡನೇ ಮುಖ್ಯ ಸಂಗತಿಯಾಗಿದೆ.

ಮಾಧ್ಯಮಗಳು ತಮಗೆ ಬೇಕಾದ್ದನ್ನು ಮುನ್ನೆಲೆಗೆ ತರುವ, ಬೇಡವಾದದ್ದನ್ನು ಅಂಚಿನಲ್ಲೇ ಉಳಿಸುವ ಕೌಶಲ್ಯವನ್ನು ಸಾಧಿಸಿಕೊಂಡಿರುವುದರ ಬಗ್ಗೆ ಹೇಳುತ್ತಲೇ ಈ ಪುಸ್ತಕ, ಪರ್ಯಾಯ ಅಭಿವೃದ್ಧಿಯ ನೆಲೆಗಳನ್ನು ಮಂಡಿಸುತ್ತದೆ. ಈ ರೀತಿಯ ವಾದಸರಣಿಯನ್ನು ನಾವೆಲ್ಲರೂ ಮುಂದಿಡುವ ಧೈರ್ಯ ತೋರಬೇಕಾದ್ದು ಪ್ರಸ್ತುತ ಕಾಲಘಟ್ಟದ ಮುಖ್ಯ ಅಗತ್ಯಗಳಲ್ಲೊಂದಾಗಿದೆ.

ಆಮ್‌ಆದ್ಮಿ ವಿದ್ಯಮಾನದ ಕುರಿತು ಪ್ರಶ್ನೆಗಳನ್ನೆತ್ತುವ ಮೂಲಕ ಶುರುವಾಗುವ ಪುಸ್ತಕವು, ಆಮ್‌ಆದ್ಮಿ ಪಕ್ಷವು ಬದಲಿ (ಪರ್ಯಾಯ) ಅಭಿವೃದ್ಧಿ ರಾಜಕಾರಣವನ್ನೇನೂ ಮಾಡುತ್ತಿಲ್ಲ ಎಂದು ವಿಶ್ಲೇಷಿಸುತ್ತಾ ಕೊನೆಯಾಗುತ್ತದೆ. ಇವೆರಡರ ಮಧ್ಯೆ ನಮ್ಮ ಮುಖ್ಯವಾಹಿನಿ ರಾಜಕೀಯ ಪಕ್ಷಗಳ ಅಭಿವೃದ್ಧಿಯ ರಾಜಕಾರಣವನ್ನು ವಿವಿಧ ನೆಲೆಗಳಿಂದ ಅಡ್ರೆಸ್ ಮಾಡಲಾಗಿದೆ. ಈ ಪುಸ್ತಕದ ವಿಶೇಷವಿರುವುದು ರಾಜಕೀಯಾರ್ಥಿಕ ಶಾಸ್ತ್ರದ ಬೇಸಿಕ್ಸ್‌ಅನ್ನು ಅಭಿವೃದ್ಧಿಯ ರಾಜಕಾರಣದ ಇಂದಿನ ಸಮಸ್ಯೆಗಳ ಜೊತೆಜೊತೆಗೇ ಅನ್ವಯಿಸುತ್ತಾ ವಿವರಿಸುವುದರಲ್ಲಿ. ಇದು ಯಾಕೆ ಮುಖ್ಯವಾಗುತ್ತದೆಂದರೆ, ರಾಜಕೀಯಾರ್ಥಿಕತೆಯ ಬೇಸಿಕ್ಸ್‌ಅನ್ನು ಬಿಟ್ಟು ಮಾಡಲಾಗುತ್ತಿರುವ ಚರ್ಚೆಯು ನಮ್ಮನ್ನು ದಾರಿತಪ್ಪಿಸುತ್ತದೆ. ಕಳೆದ ೨೦ ಚಿಲ್ಲರೆ ವರ್ಷಗಳಲ್ಲಿ ಈ ದೇಶ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ನಡೆಯುತ್ತಿರುವ ಚರ್ಚೆ ಹಾಗೂ ಸಂವಾದಗಳಲ್ಲಿ ಆಗಿರುವ, ಆಗುತ್ತಿರುವ ದೊಡ್ಡ ಲೋಪವು ಇದೇ ಆಗಿದೆ. ಐಡೆಂಟಿಟಿ ರಾಜಕಾರಣ ಮತ್ತು ಸಂಸ್ಕೃತಿಯನ್ನು ಮಾತ್ರ ಕೇಂದ್ರದಲ್ಲಿಟ್ಟು ಚರ್ಚಿಸುವ ಚಿಂತನೆಗಳಲ್ಲಿ ಈ ಸಮಸ್ಯೆಯು ಹೆಚ್ಚಾಗಿರುತ್ತದೆ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ಜಾಗತೀಕರಣ ನೀತಿಗಳು, ಹೆಚ್ಚುತ್ತಿರುವ ನಗರೀಕರಣ, ಮನುಷ್ಯ ಸಂಬಂಧಗಳಲ್ಲಿ ಬರುತ್ತಿರುವ ಬದಲಾವಣೆ ಇಂತಹವನ್ನೂ ರಾಜಕೀಯಾರ್ಥಿಕ ಶಾಸ್ತ್ರದ ಮೂಲಭೂತ ಪರಿಕರಗಳನ್ನು ಬಿಟ್ಟು ಚರ್ಚಿಸುವುದು ಸಾಕಷ್ಟು ನಡೆದಿದೆ. ಇದಕ್ಕೆ ಇನ್ನೊಂದು ಕಾರಣ ನಮ್ಮಲ್ಲಿ ಹೆಚ್ಚಾಗಿ ಸಾಹಿತಿಗಳು, ಸಂಸ್ಕೃತಿ ಚಿಂತಕರು, ವಿಮರ್ಶಕರೇ ರಾಜಕಾರಣ, ಆರ್ಥಿಕತೆ ಇತ್ಯಾದಿ ವಿಚಾರಗಳಿಗೂ ಮಾರ್ಗದರ್ಶಕರಾಗಿಬಿಟ್ಟಿರುವುದು.

ಅಕ್ಯಾಡೆಮಿಕ್ ವಲಯದಲ್ಲಿ ಈಗಾಗಲೇ ಸ್ಥಾಪಿತಗೊಂಡಿರುವ ಇನ್ನೊಂದು ಕಾಯಿಲೆ ಇದೆ. ಯಾವುದಾದರೂ ಸಂಗತಿಯನ್ನು ಅರ್ಥಮಾಡಿಕೊಳ್ಳಲು ಬಳಕೆಗೆ ಬರುವ ಬೌದ್ಧಿಕ ಮಾರ್ಗದರ್ಶಕರಲ್ಲಿ ಏಕಕಾಲದಲ್ಲಿ ಆಡಂ ಸ್ಮಿತ್ತನೂ ಇರುತ್ತಾನೆ, ಮಾರ್ಕ್ಸ್-ಎಂಗೆಲ್ಸರೂ ಇರುತ್ತಾರೆ. ಪರಸ್ಪರ ವಿರುದ್ಧ ಹಿತಾಸಕ್ತಿಗಳು, ಚಿಂತನೆಗಳು ಇರುವವರು ಏಕಕಾಲದಲ್ಲಿ ಇರಲು ಹೇಗೆ ಸಾಧ್ಯ? ಇಂತಹ ಕಾಯಿಲೆಯ ಮುಂದುವರಿಕೆಯಾಗಿ ಒಂದು 'ನ್ಯೂಟ್ರಲ್' ಪರಿಭಾಷೆಯನ್ನೂ ಬೆಳೆಸಲಾಗಿದೆ. ಬಂಡವಾಳಶಾಹಿಯನ್ನು ಬಂಡವಾಳಶಾಹಿ ಎನ್ನದಿರುವುದು. ಅದನ್ನು ಮಾರುಕಟ್ಟೆ ಶಕ್ತಿಗಳು ಎಂದು ಕರೆಯುವುದು ಅಂತಹದಕ್ಕೊಂದು ಉದಾಹರಣೆ. ಆ ಮೂಲಕ ಬಂಡವಾಳಶಾಹಿ ಆರ್ಥಿಕತೆಯನ್ನೂ 'ಒಂದು ರೀತಿಯ ನ್ಯೂಟ್ರಲ್ ಸ್ಪೇಸ್' ಎಂಬಂತೆ ಪರಿಗಣಿಸುವುದು. ಇದನ್ನು ಚಂದ್ರ ಪೂಜಾರಿಯವರು ಪ್ರಶ್ನಿಸುತ್ತಾರೆ. ಸಮಾಜಶಾಸ್ತ್ರೀಯ ವಿಶ್ಲೇಷಣೆಗಳಲ್ಲಿ ಮಾರ್ಕ್ಸ್‌ವಾದಿ ಪರಿಕರಗಳನ್ನು, ಸಮಾಜವನ್ನು ಬದಲಿಸುವ ಮಾರ್ಕ್ಸ್‌ವಾದೀ ಉದ್ದೇಶ ಹಾಗೂ ಗುರಿಸಾಧನೆಗೆ ಬಳಸಬೇಕು. ಆದರೆ ಹಾಗೆ ಬಳಸುತ್ತಿದ್ದೇವೆ ಎಂಬ ಪ್ರಜ್ಞಾಪೂರ್ವಕ ತಿಳಿವಳಿಕೆಯ ಜೊತೆಗೆ ಗಟ್ಟಿಯಾಗಿ



ಪ್ರದರ್ಶಿಸುವುದು ನಾನ್-ಅಕ್ಯಾಡೆಮಿಕ್ ಆಗಿ ಕಂಡುಬಿಡುತ್ತದೆಂಬ ಹೆದರಿಕೆ ಎಡಪಂಥೀಯ ವಿದ್ವಾಂಸರಲ್ಲೂ ಕಂಡುಬರುತ್ತದೆ. ಈ ಸಮಸ್ಯೆಯಿಂದ ಈ ಪುಸ್ತಕವೂ ಸಂಪೂರ್ಣವಾಗಿ ಹೊರತಾಗಿಲ್ಲ, ಆದರೆ ತನ್ನ ಒಳ ಹೂರಣದಲ್ಲಿ ಆ ರೀತಿಯ ವಿಶ್ಲೇಷಣಾ ಕ್ರಮವನ್ನು ಪೂಜಾರಿಯವರ ಪುಸ್ತಕ ಪ್ರಶ್ನಿಸುತ್ತಾ ಹೋಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ 'ಅಭಿವೃದ್ಧಿ ಮತ್ತು ರಾಜಕೀಯ' ಪುಸ್ತಕವು ಎಲ್ಲಾ ಸಾಮಾಜಿಕ ಕಾರ್ಯಕರ್ತರು ಮತ್ತು ಸಮಾಜ ಶಾಸ್ತ್ರವನ್ನು ಅಧ್ಯಯನ ಮಾಡುತ್ತಿರುವವರಿಬ್ಬರೂ ಓದಬೇಕಾದ ಕೃತಿಯಾಗಿದೆ.

ಜಾಗತೀಕರಣದ ಪರಿಣಾಮಗಳನ್ನು ವಿಶ್ಲೇಷಿಸುವ ಇವತ್ತಿನ ಹೆಚ್ಚಿನ ಚರ್ಚೆಗಳು ಒಂದು ಸಿದ್ಧ ಮಾದರಿಯಲ್ಲಿ ಸುತ್ತುತ್ತಿರುವುದನ್ನು ಕಾಣಬಹುದು. ಚರ್ಚೆಯ ದಿಕ್ಕನ್ನು ಬದಲಿಸದೇ, ಹಳೆಯ ಚೌಕಟ್ಟಿನಲ್ಲೇ ಗಿರಕಿ ಹೊಡೆಯುವುದರಿಂದ ನಾವು ಹೊಸ ವಾಗ್ವಾದವನ್ನು ಹುಟ್ಟಿ ಹಾಕಲಾಗದು. ಹಾಗೆ ನೋಡಿದರೆ ಈ ಪುಸ್ತಕದಲ್ಲಿ ಪೂಜಾರಿಯವರು ಅಭಿವೃದ್ಧಿಯ ಕುರಿತು ಮಂಡಿಸಿರುವ ಮೀಮಾಂಸೆಯು ಇನ್ನೂ ಹಳೆಯ ವಿಶ್ಲೇ... ಆಗಿದೆ. ಆದರೆ ಎಡಪಂಥೀಯ ವಿಶ್ಲೇಷ... ಕಾಣುತ್ತಿದ್ದ ಪಠ್ಯನಿಷ್ಠ ಪದಪುಂಜಗಳು, ಕೇವ... ಕ್ರಮದಲ್ಲಿ ಮಾತ್ರವಲ್ಲದೇ ಚಿಂತನೆಯ... ಒಳಪಡಿಸಿತ್ತು, ಪೂಜಾರಿಯವರ ಬರವಣಿ... ಬಿಡಿಸಿಕೊಳ್ಳಲು ಯಶಸ್ವಿಯಾಗಿದೆ. ಆದ... ಬಿಟ್ಟುಕೊಟ್ಟಿಲ್ಲದಿರುವುದು ಇದರ ಸಕಾರಾತ್...

ಆದರಲ್ಲಿ ಒಂದು ಸಂಪತ್ತಿನ ಒಡೆತನ... ಇದನ್ನು ಬದಲಿಸದ ರಾಜಕಾರಣವು ಹ... ರಾಜಕಾರಣದ ಮುಂದುವರಿಕೆಯಾಗಿದೆ ... ಪುಸ್ತಕ ಮನದಟ್ಟು ಮಾಡಿಕೊಡಲು... ಉತ್ಪಾದನಾ ಸಾಧನಗಳ ಒಡೆತನದ ಪ್ರ... ಬಳಕೆಯ ಪ್ರಶ್ನೆಯೇ ಆಪ್‌ಗೆ ಮುಖ್ಯವಾಗಿ... ಆಪ್ ಸಹ ಯಥಾಸ್ಥಿತಿ ರಾಜಕಾರಣ... ರೂಪವಾಗಿದೆ ಎಂದು ಪೂ... ಮಂಡಿಸುತ್ತಾರೆ. ಆಪ್ ವಿದ್ಯಮಾನ... ತಪ್ಪಬಾರದು ಎಂಬ ಅವರ ಆತಂಕ ... ಭಾರತದ ಪ್ರಜಾತಂತ್ರದ ಇನ್ನಿತರ ... ಇನ್ನೂ ಖಚಿತ ಮಾತುಗಳು ಅಗತ್ಯ...

ಭಾರತದಲ್ಲಿ '90ರ ದಶಕಕ್ಕಿಂತ ... ಅರೆ ಸೋಷಿಯಲಿಸ್ಟ್ ಆರ್ಥಿಕ ನೀತಿ... ಮಾತು ಪುಸ್ತಕದುದ್ದಕ್ಕೂ ಬರುತ್ತದೆ... ನೀತಿಗಳ ಜಾರಿಯೊಂದಿಗೆ ಹಿ... ಜಾರಿಯಲ್ಲಿದ್ದ ಆರ್ಥಿಕ ನೀತಿಯ... ಆಕ್ರಮಣಕಾರಿಯಾಯಿತಷ್ಟೇ ಹೊರತು... ಸೋಷಿಯಲಿಸ್ಟ್ ಎನ್ನಲು ಹೇಗೆ ಸಾಧ್ಯ... ನೀತಿಯ ಮಿತಿಗಳ ಕುರಿತು ಸ್ವತಃ ಪೂ... ಬೇರೆ ಕಡೆ ಬರೆದಿದ್ದಾರೆ. ಅದರಾಚೆಗೆ... ಭಾರತ ಸರ್ಕಾರ ಅನುಸರಿಸುತ್ತಾ ಬ... ಜನಪರ ಕ್ರಮಗಳು, ಬಂಡವಾಳಶಾಹಿ... ರಾಜ್ಯದ ಕ್ರಮಗಳು ಆಗಿದ್ದವೆ... ಸೋಷಿಯಲಿಸ್ಟ್ ಆಗಿರಲಿಲ್ಲ.

ಜನರನ್ನು ಮೆಚ್ಚಿಸಲು ಆಡಲಾಗು... ಗಿಳಿಪಾಠಕ್ಕೂ, ಸಂಸದೀಯ ರಾಜಕಾರ... ಮಾಡುವ ಅನಿವಾರ್ಯತೆಗೂ ಹತ್ತಿರದ... ಇದು ಚಳವಳಿ ರಾಜಕಾರಣವನ್ನೇ ... ಕೊಳ್ಳಬೇಕಾದ ಆದರೆ ಚುನಾ... ಪ್ರಧಾನವನ್ನಾಗಿಸಿ ಕೊಂಡ ಎಡ ಹಾ... ಶಕ್ತಿಗಳನ್ನೂ ಬಾಧಿಸಿರುವ ಸಂಗತಿಯ... ಪೂಜಾರಿಯವರ ಪುಸ್ತಕ ಈ ಮುಖ್ಯ ಅಂಶ... ಮುಂದಿಡದಿರುವುದು ಅವರ ದ... ಕಾರಣದಿಂದಾಗಿಯೋ ಅಥವಾ ಈ ಪುಸ್ತಕ... ಗೊತ್ತಿಲ್ಲ.

ಸರಳವಾಗಿರುವ ಕಾರಣಕ್ಕೋ ಏನೋ... ಕೆಲವು ಅಂಶಗಳು ಪದೇಪದೇ ಪುನರಾವ... ಇನ್ನಷ್ಟು ಸಂಗ್ರಹವಾಗಿ ಇವೇ ವಿಚಾರವನ್ನು ... ಎಂತಲೂ ಅನ್ನಿಸುತ್ತದೆ. ಪೂಜಾರಿ... ಚುನಾವಣೆಗೆ ಮುಂಚೆ ಇದು ಹೆಚ್ಚು ಜನರನ... ಎನ್ನುವ ತಹತಹವೂ ಸಾಕಷ್ಟಿದೆ; ಫೇಸ್‌ಬು... ಬರಹಗಳಿಗೇ ಹೆಚ್ಚಿನ ಓದುಗರಿರುವ ... ಪುಟಗಳಷ್ಟಿರುವ ಪುಸ್ತಕವನ್ನು ಓದುವ ... ನಮ್ಮ ಯುವಜನರು ಎಷ್ಟು ತೋರುತ್ತಾ... ಆದರೆ ಅಭಿವೃದ್ಧಿಯ ಕುರಿತು ವಿಪ... ಕೇಳಿಬರುತ್ತಿರುವ ಈ ಸಂದರ್ಭದಲ್ಲಿ ಭಿನ್ನ... ಬಯಸುವವರು ಓದಬೇಕಾದ ಕೃತಿ ಇದ...

ಪುಸ್ತಕದಿಂದ ಆಯ್ದ ಭಾಗಗಳು

ಮಾಧ್ಯಮಗಳು ಮತ್ತು ಭ್ರಷ್ಟಾಚಾರದ ವಿರುದ್ಧದ ಚಳವಳಿಯ ಕುರಿತು

'(ಅದಕ್ಕೆ ಸಿಕ್ಕಾಪಟ್ಟೆ ಕವರೇಜ್ ನೀಡಿದ್ದುದರ ಬಗ್ಗೆ) ಮಾಧ್ಯಮಗಳ ಈ ಧೋರಣೆಯನ್ನು ಚಲನಚಿತ್ರಗಳಲ್ಲಿ ಕಡ್ಡಾಯವಾಗಿ ಇರಲೇಬೇಕಾದ ಗ್ರೂಪ್ ಡ್ಯಾನ್ಸ್‌ಗಳನ್ನು ಕಲ್ಪಿಸಿಕೊಂಡರೆ ಚೆನ್ನಾಗಿ ಅರ್ಥವಾಗಬಹುದು. ಅಲ್ಲೂ ನಾಯಕ ನಾಯಕಿಯ ಜೊತಗೆ ಅವರ ಹಾಗೆ ಇರುವ ಮತ್ತು ಅವರ ಹಾಗೆ ಡ್ಯಾನ್ಸ್ ಮಾಡುವ ಹಲವು ಜನರಿರುತ್ತಾರೆ. ಆದರೆ ಕ್ಯಾಮರಾ ಮಾತ್ರ ಹೀರೋ ಹೀರೋಯಿನ್ ಮೇಲೆ ಹೆಚ್ಚು ಫೋಕಸ್ ಆಗಿರುತ್ತದೆ. ಕ್ಯಾಮರಾ ಹೆಚ್ಚು ಹೆಚ್ಚು ನಾಯಕ ನಾಯಕಿಯನ್ನು ತೋರಿಸುವುದರಿಂದ ಅವರು ಮುಖ್ಯರಾಗಿ ಉಳಿದವರು ನಗಣ್ಯರಾಗುತ್ತಾರೆ. ಹೆಚ್ಚುಕಡಿಮೆ ಇದೇ ರೀತಿಯಲ್ಲಿ ದೇಶವ್ಯಾಪಿ ನಡೆಯುತ್ತಿರುವ ಹಲವು ಚಳವಳಿಗಳನ್ನು ಬದಿಗೊತ್ತಿ ಲಂಚದ ವಿರುದ್ಧದ ಚಳವಳಿಯನ್ನು ಮಾಧ್ಯಮಗಳು ಸತತವಾಗಿ ತೋರಿಸಿವೆ. ಇತರ ಚಳವಳಿಗಿಂತ ಈ ಚಳವಳಿ ಹೆಚ್ಚು ಮಹತ್ವದ ಚಳವಳಿ ಎಂದು ಬಿಂಬಿಸಿವೆ.

ವರ್ಗಾಸಕ್ತಿಗಳು

ಈ ಬಗೆಯಲ್ಲಿ ಅಭಿವೃದ್ಧಿ ಹೊಂದಿದವರ ಆಸಕ್ತಿಗಳು ಹೆಚ್ಚುಕಡಿಮೆ ಒಂದೇ ಇವೆ. ಎಲ್ಲ ಸಮುದಾಯ... (ದಲಿತ, ಓಬಿಸಿ, ಮೇಲ್ಜಾತಿಗಳಿಂದ) ಇಂದು ಜನಪ್ರತಿನಿಧಿ (ಎಂಎಲ್‌ಎ, ಎಂಪಿ)ಗಳಿದ್ದಾರೆ. ಆದರೆ ಯಾ... ನಿಧಿಗಳಾಗಿದ್ದಾರೆ? ದಲಿತ ಕೋಟ್ಯಧಿಪತಿ, ಓಬಿಸಿ ಕೋಟ್ಯಧಿಪತಿ, ಮೇಲ್ಜಾತಿ ಕೋಟ್ಯಧಿಪತಿಗಳು ಜನಪ್ರತಿನಿಧಿ... ಇವರಿಗೆ ಇವರ ಸಮುದಾಯದ ಮತ್ತು ಇತರ ಸಮುದಾಯಗಳ ಊಟಕ್ಕಿಲ್ಲದವರು, ಅಲ್ಪಸ್ವಲ್ಪ ಊಟ... ಓಟು ಹಾಕುತ್ತಾರೆ. ಏಕೆಂದರೆ ಜಾತಿ ಅಥವಾ ಧರ್ಮದ ಕಾರಣಕ್ಕಾಗಿ ನಮ್ಮವರಾದ ಇವರು ಗೆದ್ದು ಬಂ... ಹೊಟ್ಟೆ ಬಟ್ಟೆಯ ಸಮಸ್ಯೆಯನ್ನು ಪರಿಹರಿಸಬಹುದೆಂದು ಬಡವರು ಓಟು ಹಾಕುತ್ತಾರೆ. ಆದರೆ ಆ ರಿ... ಇವರು ಗೆದ್ದು ಬಂದು ಭೂಸುಧಾರಣೆ ಮಾಡಿಸುವ ಬದಲು ಹಿಂದಿನ ಭೂಸುಧಾರಣೆಗಳಿಂದ ಸಿಕ್ಕಿ... ಭೂಮಿಯನ್ನು ಉದ್ದಿಮೆಗಳ ಅಭಿವೃದ್ಧಿಗೆ ನೀಡುವ ತಿದ್ದುಪಡಿಗಳನ್ನು ತಂದಿದ್ದಾರೆ...........

ಮೋದಿಯೂ, ಬಿಜೆಪಿಯ ಪ್ರಣಾಳಿಕೆಯೂ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ನಿರಂಕುಶಕ ನರೇಂದ್ರ ಮೋದಿಯನ್ನು ಸಂಘ ಪರಿವಾರ ...ಗ ಅದೆಷ್ಟು ಅಪಾರವಾಗಿ ಅವಲಂಬಿಸಿದೆ ಎಂದರೆ ...ದು ತನ್ನೆಲ್ಲ ಆಸೆ, ಆಸ್ತಿ, ಧನ, ಜಾಲ ಎಲ್ಲವನ್ನೂ ...ತನಿಗೆ ಅಡವಿಟ್ಟು ಕೆಲಸ ಮಾಡುತ್ತಿದೆ. ಇದನ್ನೆಲ್ಲ ಆರೆಸ್ಸೆಸ್ ...ುತ್ತು ಅದರ ಅಂಗಸಂಸ್ಥೆಗಳು ಪುಕ್ಕಟೆಯಾಗಿ, ಯಾವುದೇ ...ತಿಫಲದ ನಿರೀಕ್ಷೆ ಇಲ್ಲದೆ ಮಾಡುತ್ತಿಲ್ಲ, ಬದಲಾಗಿ ಮೋದಿ ...ಧಾನಿ ಆದರೆ ಇಡೀ ದೇಶವನ್ನು ತನ್ನ ತೆಕ್ಕೆಗೆ ...ಡೆದುಕೊಳ್ಳುವ ಉದ್ದೇಶದಿಂದಲೇ ಮಾಡುತ್ತಿದೆ. ಇದಕ್ಕಾಗಿ ...ಯಾರನ್ನು ಬೇಕಾದರೂ ಅದು ಬಲಿ ಕೊಡಲೂ ಸಿದ್ಧವಿದೆ. ಕಾರಣಕ್ಕೆ ಹಿರಿಯ ನಾಯಕರಾದ ಎಲ್.ಕೆ.ಅಧ್ವಾನಿ ...ುತ್ತು ಜಸವಂತ್ ಸಿಂಗ್ ದೇಶದ ಮುಂದೆ ತಮ್ಮ ...ಮಾನಮರ್ಯಾದೆಯನ್ನೇ ಕಳೆದುಕೊಳ್ಳಬೇಕಾಯಿತು.

ಅಂದಹಾಗೆ, ಇನ್ನೊಂದು ಅಂಶವನ್ನು ಗಮನಿಸಿದ್ದೀರಾ? ...ೋದಿಯ ಹಂಗಿಗೆ ಬಿದ್ದಿರುವ ಸಂಘಪರಿವಾರ ಎಲ್ಲವನ್ನೂ ...ತನ ಮೂಗಿನ ನೇರಕ್ಕೆ ಮಾಡುತ್ತಿದೆ. ಸೋಜಿಗ ...ಪಯವೆಂದರೆ ಮೋದಿಯೇ ತನ್ನ ಪ್ರಧಾನಿ ಅಭ್ಯರ್ಥಿ ...ಎಂದು ಆರೆಸ್ಸೆಸ್‌ನ ಮುಖ್ಯಸ್ಥ ಮೋಹನ್ ಭಾಗವತ್ ...ರ್ಧರಿಸಿದ ನಂತರ ಬಿಜೆಪಿಯೂ ಅದೇ ನಿರ್ಧಾರಕ್ಕೆ ...ಯಿತು. ಹಾಗೆ ಪ್ರಧಾನಿ ಯಾರು ಆಗುತ್ತಾರೆಂದು ನಿರ್ಧರಿಸಿದ



...ನಂತರ ಆತ ಎಲ್ಲಿಂದ ಸ್ಪರ್ಧಿಸುತ್ತಾನೆಂಬುದರ ಬಗ್ಗೆ ...ರ್ಚೆಯಾಯಿತು. ಅನಂತರವೇ ಬಹಳ ತಡವಾಗಿ ಬಂದದ್ದು ...ಕ್ಷದ ಪ್ರಣಾಳಿಕೆ. ಅಂದರೆ ಎಲ್ಲವೂ ಉಲ್ಟಾಪಲ್ಟಾ ...ಆಯಿತು. ತಾನು ಶಿಸ್ತಿನ ಪಕ್ಷ ಎಂದು ಹೇಳುವ ...ಬಿಜೆಪಿಯಲ್ಲೇ ಮೋದಿಯಿಂದಾಗಿ ಇಷ್ಟು ಗೊಂದಲ. ಇನ್ನು ... ಗುಂಪು ಅಧಿಕಾರ ಪಡೆದರೆ ಭಾರತದಲ್ಲಿ ಎಲ್ಲವೂ ...ಉಲ್ಟಾಪಲ್ಟಾ ಆದರೂ ಅಚ್ಚರಿ ಪಡಬೇಕಿಲ್ಲ.

ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಿಗೆ ಜನಸಾಮಾನ್ಯರು ...ಷ್ಟು ಬೆಲೆ ಕೊಡುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತು. ...ದರೂ ಅದೊಂದು ಶಾಸ್ತ್ರದಂತೆ ನಡೆಯುತ್ತದೆ. ...ಮೋದಿಯನ್ನು ಪ್ರಧಾನಮಂತ್ರಿಯ ಅಭ್ಯರ್ಥಿ ಎಂದು ...ಘೋಷಿಸಿದ ನಂತರ ಬಿಜೆಪಿ ಯಾವ ಪ್ರಣಾಳಿಕೆಯನ್ನೂ ...ಕಟಿಸುವ ಅಗತ್ಯ ಇರಲಿಲ್ಲ. ಯಾಕೆಂದರೆ ಮೋದಿ ...ಧಾನಿಯಾದರೆ ಆತ ಹದಿಮೂರು ವರ್ಷಗಳ ಕಾಲ ...ಜರಾತಿನಲ್ಲಿ ನಡೆಸಿರುವ ನಕಲಿ ಅಭಿವೃದ್ಧಿ, ಭೂಲೂಟಿ, ...ಕೋಮುವಾದ, ಇವೇ ಆತನ ನೇತೃತ್ವದ ಕೇಂದ್ರ ಸರ್ಕಾರದ ...ರಿಯೂ ಆಗಿರುತ್ತದೆ ಎಂಬುದನ್ನು ಈಗ ಮೋದಿಯ ...ಸಚಿವಾಮಂಡಲಿಯಲ್ಲಿ ಇಲ್ಲದ ಪ್ರಜ್ಞಾವಂತರು ಅರಿತಿದ್ದಾರೆ. ...ಗಿದ್ದರೂ ಬಿಜೆಪಿ ಕೆಲವು ದಿನಗಳ ಹಿಂದೆ ಒಂದು ...ಣಾಳಿಕೆಯನ್ನು ಬಿಡುಗಡೆ ಮಾಡಿತು. ಅದರಲ್ಲಿ ...ರುವುದಾದರೂ ಏನು ಎಂದು ನೋಡಿದರೆ ಬಿಜೆಪಿಯ ...ಡಬಿಡಂಗಿತನ ಅರ್ಥವಾಗುತ್ತದೆ.

ಕೋಮುವಾದಿ ಹಿಂದೂತ್ವ ಸಿದ್ಧಾಂತವನ್ನೇ ನಂಬಿದರೆ ಎಂದೂ ಬಹುಸಂಸ್ಕೃತಿಯ, ಬಹು ಧರ್ಮೀಯ ಜಾತ್ಯತೀತ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ಏರುವುದಿಲ್ಲ ಎಂಬುದನ್ನು ಅರಿತಿರುವ ಚೆಡ್ಡಿಗಳು ತೋರಿಕೆಗೆ ಅಲ್ಪಸಂಖ್ಯಾತರನ್ನು ಓಲೈಸುವ ಕೆಲಸ ಮಾಡುತ್ತಾರೆ. ಆದರೂ ಅದನ್ನು ಅವರು ಇಲ್ಲದ ಮನಸ್ಸಿನಿಂದಲೇ ಮಾಡುತ್ತಾರೆ. ಇದಕ್ಕೆ ಸ್ಪಷ್ಟ ಉದಾಹರಣೆ ಬಿಜೆಪಿಯ ಪ್ರಣಾಳಿಕೆಯ ಮುನ್ನುಡಿ.

ಅದು ಪ್ರಾರಂಭವಾಗುವುದು ಹೀಗೆ:

"ಭಾರತ ವಿಶ್ವದ ಅತ್ಯಂತ ಪುರಾತನ ನಾಗರಿಕತೆಯಾಗಿದ್ದು ಇಡೀ ವಿಶ್ವ ಭಾರತವನ್ನು ಒಂದು ಸಮೃದ್ಧ ಮತ್ತು ಜ್ಞಾನಭರಿತ ನಾಡೆಂದು ಪರಿಗಣಿಸುತ್ತಿತ್ತು. ತತ್ವಶಾಸ್ತ್ರ ಮತ್ತು ಗಣಿತ ಶಾಸ್ತ್ರಗಳಲ್ಲದೆ ಭಾರತ ಉನ್ನತ ಮಟ್ಟದಲ್ಲಿ ವಿಜ್ಞಾನ ಮತ್ತು ಯಂತ್ರಕಲಾಶಾಸ್ತ್ರವನ್ನು ಅಭಿವೃದ್ಧಿಪಡಿಸಿದ್ದ ನಾಡು ಎಂದೇ ಖ್ಯಾತಿ ಪಡೆದು ಜಗತ್ತಿನ ವಿದ್ವಾಂಸರನ್ನು ಆಕರ್ಷಿಸುತ್ತಿತ್ತು. ಅಲ್-ಅಂದುಲ್ಸಿ ಎಂಬ ಸ್ಪಾನಿಸ್ ವಿದ್ವಾಂಸ ಹನ್ನೊಂದನೆ ಶತಮಾನದಲ್ಲಿಯೇ ತನ್ನ ಅತಿ ಮೌಲಿಕವಾದ 'ತಬಕತ್ ಅಲ್-ಉಮಾನ್' ಎಂಬ ಕೃತಿಯಲ್ಲಿ ಬೇರೆಬೇರೆ ದೇಶಗಳಲ್ಲಿ ವಿಜ್ಞಾನದ ಸ್ಥಿತಿಗತಿಗಳು ಹೇಗಿದ್ದವು ಎಂದು ವಿವರಿಸುತ್ತಾರೆ. ಅವರು ಹೀಗೆ ದಾಖಲಿಸುತ್ತಾರೆ: "ವಿಜ್ಞಾನವನ್ನು ಮೊದಲು ಅಭಿವೃದ್ಧಿಪಡಿಸಿದ ದೇಶ ಭಾರತ... ಭಾರತದ ಜನ ತಮ್ಮ ಜ್ಞಾನ ಸಂಪತ್ತಿಗೆ ಹೆಸರುವಾಸಿಯಾಗಿದ್ದಾರೆ. ಹಲವಾರು ಶತಮಾನಗಳಿಂದ ಎಲ್ಲ ರಾಜರೂ ವಿವಿಧ ವಿಜ್ಞಾನಗಳಲ್ಲಿ ಭಾರತೀಯರ ಶ್ರೇಷ್ಠತೆಯನ್ನು ಗುರುತಿಸಿದ್ದಾರೆ. ಅಷ್ಟೇ ಅಲ್ಲದೆ ಅಂದುಲ್ಸಿ ಅವರು ಮುಂದುವರೆದು ಹೀಗೆ ಹೇಳುತ್ತಾರೆ: "ಎಲ್ಲಾ ದೇಶಗಳಿಗೆ ಹಲವಾರು ಶತಮಾನಗಳಿಂದ ಗೊತ್ತಿರುವಂತೆ ಭಾರತೀಯರು ಜ್ಞಾನಕ್ಕೆ ಮಾತ್ರವಲ್ಲದೆ ನ್ಯಾಯಸಮ್ಮತಕ್ಕೆ ಮತ್ತು ವಸ್ತುನಿಷ್ಠತೆಗೆ ಮೂಲ ಪ್ರೇರಣೆಯಾಗಿದ್ದಾರೆ."

ಇಲ್ಲಿ ಎರಡು ಉದ್ದೇಶಗಳನ್ನು ಸಾಧಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸಿದೆ. ಮೊದಲನೆಯದು ಈ ಹಿಂದೆ ಭಾರತ ಎಷ್ಟು ಶ್ರೇಷ್ಠವಾಗಿತ್ತು ಎಂಬುದು. ಎರಡನೆಯದು ಅಲ್-ಅಂದುಲ್ಸಿ ಎಂಬ ಮುಸ್ಲಿಮ್ ವಿದ್ವಾಂಸನ ಪ್ರಶಂಸೆಯನ್ನೇ ಮುನ್ನುಡಿಯಲ್ಲಿ ಹಾಕಿದರೆ ಮುಸಲ್ಮಾನರಿಗೂ ಬಿಜೆಪಿ ಬಗ್ಗೆ ಒಂದಿಷ್ಟು ಭರವಸೆ ಮೂಡುತ್ತದೆ ಎಂಬುದು. ಆದರೆ ಎಂದೂ ಮುಸಲ್ಮಾನರನ್ನು ಸಹಿಸದ ಚೆಡ್ಡಿಗಳು ಇಲ್ಲೊಂದು ಎಡವಟ್ಟು ಮಾಡಿಕೊಂಡಿದ್ದಾರೆ. ಅದೇನೆಂದರೆ ಅಲ್-ಅಂದುಲ್ಸಿ ಸ್ಪಾನಿಷ್ ವಿದ್ವಾಂಸ ಎಂದು ನಮೂದಿಸಿರುವುದು. ವಾಸ್ತವವಾಗಿ ಅಲ್-ಅಂದುಲ್ಸಿ ಸ್ಪಾನಿಷ್ ವಿದ್ವಾಂಸ ಅಲ್ಲ, ಬಲದಾಗಿ ಉರ್ದು ವಿದ್ವಾಂಸ! ಆತ ಬರೆದಿರುವ 'ತಬಕತ್ ಅಲ್-ಉಮಾನ್' ಕೃತಿಯೂ ಉರ್ದುವಿನಲ್ಲಿದೆ!

ಮೋದಿಯಿಂದಾಗಿ ಈ ಬಾರಿ ಬಿಜೆಪಿಯ ಪ್ರಣಾಳಿಕೆ ಅಭಿವೃದ್ಧಿಯನ್ನೇ ಕೇಂದ್ರವಾಗಿರಿಸಿಕೊಂಡಿರುತ್ತದೆ ಎಂಬ ಕಲ್ಪನೆ ಕೆಲವರದ್ದಾಗಿತ್ತು, ಅಷ್ಟೇ ಅಲ್ಲ, ಆರೆಸ್ಸೆಸ್ಸಿನ ಹಿಂದೂತ್ವ ಸಿದ್ಧಾಂತಕ್ಕೆ ಪ್ರಣಾಳಿಕೆಯಲ್ಲಿ ತಿಲಾಂಜಲಿ ಹೇಳುವ ಮೂಲಕ ಪಕ್ಕಾ ಬಿಜೆಪಿ ಬೆಂಬಲಿಗರನ್ನಲ್ಲದೆ ಪ್ರಗತಿಗಾಗಿ ಹಪಹಪಿಸುತ್ತಿರುವ ಮಧ್ಯಮ ಮತ್ತು ಯುವ ವರ್ಗವನ್ನು ಆಕರ್ಷಿಸಲು ಪ್ರಯತ್ನಿಸುತ್ತದೆ; ಆದರೆ ಇದಕ್ಕೆ ಸಂಘ ಪರಿವಾರ ಸಿದ್ಧವಿಲ್ಲವಾದ್ದರಿಂದ ಪ್ರಣಾಳಿಕೆಯ ಪ್ರಕಟಣೆಯಲ್ಲಿ ತಡವಾಗುತ್ತಿದೆ ಎಂಬುದೂ ಕೆಲವರ ಲೆಕ್ಕಾಚಾರವಾಗಿತ್ತು.

ಆದರೆ ಇದೆಲ್ಲವೂ ಸುಳ್ಳು ಎಂಬುದನ್ನು ಬಿಜೆಪಿ ಪ್ರಣಾಳಿಕೆ ಸ್ಪಷ್ಟಪಡಿಸುತ್ತದೆ. ಉದಾಹರಣೆಗೆ ಅಯೋಧ್ಯಾ ವಿಷಯವನ್ನೇ ನೋಡಿ. ಹಿಂದಾದರೆ ಬಿಜೆಪಿ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟೇ ತೀರುತ್ತೇವೆ ಎಂದು ಹೇಳುತ್ತಿತ್ತು. ಆದರೀಗ ಹೊಸ ಪದಪುಂಜಗಳನ್ನು ಬಳಸುವ ಮೂಲಕ ತನ್ನ ಮೂಲ ಉದ್ದೇಶವನ್ನು ಒಂದಿಷ್ಟು ಮರೆಮಾಚಿದೆಯಷ್ಟೇ. 'ಸಾಂಸ್ಕೃತಿಯ ಸ್ಮಾರಕಗಳು' ಎಂಬ ಶೀರ್ಷಿಕೆ ಅಡಿ "ಅಯೋಧ್ಯೆಯಲ್ಲಿ ರಾಮಮಂದಿರವನ್ನು ಸಂವಿಧಾನದ ಚೌಕಟ್ಟಿನಲ್ಲಿ ನಿರ್ಮಿಸಲಾಗುವುದು" ಎಂದು ಹೇಳಿದೆ. ಸಂವಿಧಾನದಲ್ಲಿ ಮೋದಿಗಾಗಲಿ, ಬಿಜೆಪಿಗಾಗಲಿ ಕಿಂಚಿತ್ತೂ ಗೌರವ ಇಲ್ಲದಿರುವಾಗ ಅವರು ಅದು ಹೇಗೆ 'ಸಂವಿಧಾನದ ಚೌಕಟ್ಟು'ನಲ್ಲಿ ನಡೆದುಕೊಳ್ಳುತ್ತಾರೆ? ಈ ಪ್ರಶ್ನೆ ಯಾಕೆಂದರೆ ಮೋದಿ ಕಳೆದ ಹದಿಮೂರು ವರ್ಷಗಳಲ್ಲಿ ಕಾನೂನುಬದ್ಧವಾಗಿ ವಿಧಾನಸಭೆಯ ಉಪಸಭಾಪತಿಯನ್ನೂ ನೇಮಿಸಿಲ್ಲ; ತನ್ನ ಅವ್ಯವಹಾರಗಳು ಬಯಲಾಗಬಾರದೆಂದು ತನ್ನ ರಾಜ್ಯದಲ್ಲಿ ಲೋಕಾಯುಕ್ತರನ್ನೂ ನೇಮಿಸಿಲ್ಲ. ಈತನಿಗೆ ಸಂವಿಧಾನ, ಪ್ರಜಾತಂತ್ರ ಎಂಬುದೆಲ್ಲ ಕಾಲುಕಸಕ್ಕೆ ಸಮಾನ ಎಂಬುದನ್ನು ಈ ಅಂಕಣದಲ್ಲಿ ಕಳೆದ ವಾರವೇ ವಿವರಿಸಿರುವುದರಿಂದ ಅದನ್ನೆಲ್ಲ ಮತ್ತೆ ಹೇಳಬೇಕಿಲ್ಲ. ಅಂದರೆ 'ಸಂವಿಧಾನದ ಚೌಕಟ್ಟು' ಎಂಬುದು ಬಿಜೆಪಿ ಸಿದ್ಧಾಂತವನ್ನು ಒಪ್ಪದ ಜನರನ್ನು ಮೋಸ ಮಾಡುವುದೇ ಆಗಿದೆ.

ಅದೇ ಪುಟದಲ್ಲಿ ರಾಮ ಸೇತು ಬಗ್ಗೆ ಹೀಗೆ ಹೇಳಲಾಗಿದೆ:

"ರಾಮ ಸೇತು ನಮ್ಮ ಸಾಂಸ್ಕೃತಿಕ ಪರಂಪರೆ ಮಾತ್ರವಲ್ಲ ಅಲ್ಲಿ ಥೋರಿಯಮ್ ನಿಕ್ಷೇಪ ಇರುವುದರಿಂದ ಅದು ಮುಖ್ಯವಾಗಿದೆ. ಇವೆಲ್ಲವನ್ನೂ ಸೇತು ಸಮುದ್ರ ಚಾನೆಲ್ ಯೋಜನೆಯ ಅನುಷ್ಠಾನದಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದು."

ಇದೂ ಕೂಡ ರಾಮ ಎಂಬ ಆರ್ಯ ರಾಜ, ಮಂಗಗಳಿಗೆ ಸಮಾನರಾಗಿದ್ದ ದ್ರಾವಿಡ ಜನರ ನೆರವಿನೊಂದಿಗೆ ಕಟ್ಟಿದ ಸೇತುವೆ ಎಂಬುದನ್ನು ಇನ್ನೊಂದು ರೀತಿಯಲ್ಲಿ ಪ್ರಸ್ತಾಪಿಸುವ ತಂತ್ರ ಹೊರತು ಬೇರೇನೂ ಅಲ್ಲ.

ಇದಕ್ಕಿಂತ ಅಪಾಯಕಾರಿಯಾದದ್ದು ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತರುವ ಬಿಜೆಪಿಯ ನಿರ್ಧಾರ. ಎಲ್ಲರಿಗೂ ಗೊತ್ತಿರುವಂತೆ ಬಿಜೆಪಿಯ ದೃಷ್ಟಿಯಲ್ಲಿ ಸಮಾನ ನಾಗರಿಕ ಸಂಹಿತೆ ಎಂದರೆ ಅಲ್ಪಸಂಖ್ಯಾತರಿಗೆ ಇರುವ ಕಾನೂನುಗಳನ್ನು ರದ್ದು ಮಾಡುವುದು. ಆದರೆ ಬಿಜೆಪಿಯ ಕುತಂತ್ರಬುದ್ಧಿ ಅದನ್ನು ಹೇಗೆ ತಿರುಚಿದೆ ಎಂದರೆ "ಮಹಿಳೆಯರಿಗೆ ಸಮಾನ ಸ್ಥಾನಮಾನ ಮತ್ತು ಹಕ್ಕುಗಳನ್ನು ಕೊಡುವ ನಿಟ್ಟಿನಲ್ಲಿ ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತರಲಾಗುವುದು" ಎಂದಿದೆ. ಇದರಲ್ಲೂ ಎರಡು ಉದ್ದೇಶಗಳು ಅಡಗಿವೆ. ಒಂದು ಮುಸಲ್ಮಾನರಲ್ಲಿ ಆತಂಕ ಮೂಡದಂತೆ ನೋಡಿಕೊಳ್ಳುವುದು ಮತ್ತು ಸುಳ್ಳು ಹೇಳಿ ಮಹಿಳೆಯರ ಬೆಂಬಲ ಗಿಟ್ಟಿಸುವುದು.

ಅಷ್ಟೇ ಮುಖ್ಯವಾದದ್ದು ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿ ರದ್ದು ಎಂಬ ವಿಷಯ. ಕಾಶ್ಮೀರಕ್ಕೆ ಭಾರತದ ಸರ್ಕಾರ ಆರು ದಶಕಗಳಿಂದ ಮಾಡಿಕೊಂಡು ಬಂದಿರುವ ಅನ್ಯಾಯವನ್ನು ಬಿಜೆಪಿ ಎಂದೂ ಒಪ್ಪುವುದಿಲ್ಲ, ಮಾತ್ರವಲ್ಲ, ಆಪ್ ಪಕ್ಷದ ಮುಖ್ಯಸ್ಥರಲ್ಲಿ ಒಬ್ಬರಾದ ಪ್ರಶಾಂತ್ ಭೂಷಣ್ ಅವರು ಹಲವು ತಿಂಗಳುಗಳ ಹಿಂದೆ ಕಾಶ್ಮೀರಿ ಜನರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶವನ್ನು ಕೊಡಬೇಕು ಎಂದಿದ್ದಕ್ಕೇ ಚೆಡ್ಡಿಗಳು ಆಕಾಶ ಮತ್ತು ಭೂಮಿ ಒಂದಾಗುವಂತೆ ಅರಚಾಡಿದ್ದರು. ಇತ್ತೀಚೆಗೆ ಈ ಕಾರಣಕ್ಕೇ ಮೋದಿ ಆಪ್ ಪಕ್ಷದ ನಾಯಕ ಅರವಿಂದ್ ಕೇಜ್ರೀವಾಲ್ ಅವರನ್ನು 'ಪಾಕಿಸ್ತಾನಿ ಭಯೋತ್ಪಾದಕ' ಎಂದು ಜರಿದಿದ್ದರು. ಇಂತಹ ಮನೋವೃತ್ತಿಯವರು ಎಂದಾದರೂ ಕಾಶ್ಮೀರಿ ಜನರಿಗೆ ನ್ಯಾಯ ಒದಗಿಸುತ್ತಾರೆ ಎಂದು ನಂಬಬಹುದೇ?

ಹೀಗೆ ಬಿಜೆಪಿಗಳ ಆಷಾಢಭೂತಿತನವನ್ನು ಚರ್ಚಿಸುತ್ತಾ ಹೋಗಬಹುದು. ಅದಕ್ಕೆಲ್ಲ ಈಗ ಸಮಯವಿಲ್ಲ, ಆದ್ದರಿಂದ ಕೊನೆಯದಾಗಿ ಇನ್ನೊಂದು ಅಂಶದತ್ತ ಗಮನ ಹರಿಸಿ ಸುಮ್ಮನಾಗಬಹುದು.

ಟೈಮ್ಸ್ ನೌ ಚಾನೆಲ್‌ನ ಅರ್ನಬ್ ಗೋಸ್ವಾಮಿ ಅವರು ಬಿಜೆಪಿಯ ಪ್ರಣಾಳಿಕೆ ಕುರಿತಂತೆ ನಡೆಸಿದ ಚರ್ಚೆಯಲ್ಲಿ "ಯಾಕೆ ಇದರಲ್ಲಿ 'ಭಾರತ ದೇಶವು ಪೀಡನೆಗೆ ಗುರಿಯಾಗಿರುವ ಎಲ್ಲಾ ಹಿಂದೂಗಳಿಗೂ ಸಹಜ ಮಾತೃಭೂಮಿ ಆಗಿದ್ದು ಅಂತಹವರಿಗೆ ಆಶ್ರಯ ನೀಡುತ್ತದೆ' ಎಂದು ದಾಖಲಿಸಿದ್ದೀರಿ? ಯಾಕೆ ನಮ್ಮ ಜಾತ್ಯತೀತ ದೇಶ ಪೀಡನೆಗೆ ಗುರಿಯಾಗಿರುವ ಎಲ್ಲಾ ಧಾರ್ಮಿಕ ಜನರಿಗೂ ಆಶ್ರಯ ನೀಡುತ್ತದೆ ಎಂದಿಲ್ಲ" ಎಂದು ಪ್ರಶ್ನಿಸಿದರು. ಆ ಪ್ರಶ್ನೆಗೆ ಬಿಜೆಪಿ ವಕ್ತಾರರಲ್ಲಿ ಉತ್ತರವಿರಲಿಲ್ಲ.

ಯಾಕೆಂದರೆ ಬಿಜೆಪಿಗೆ ಬೇಕಿರುವುದು ನಮ್ಮ ಜಾತ್ಯತೀತ ದೇಶವಲ್ಲ, ಬದಲಾಗಿ ವರ್ಗ, ಜಾತಿ, ಧರ್ಮ, ಲಿಂಗ ಇತ್ಯಾದಿ ಅಂಶಗಳ ಮೇಲೆ ಭೇದಭಾವ ಮಾಡುವ 'ಹಿಂದೂ ದೇಶ'.

ಇದನ್ನು ಅವರ ಪ್ರಣಾಳಿಕೆ- ಅದೆಷ್ಟೇ ಆಧುನಿಕತೆ, ಪ್ರಗತಿ, ಅಭಿವೃದ್ಧಿಯ ಸೋಗು ಹಾಕಿಕೊಂಡಿದ್ದರೂ- ಮತ್ತೊಮ್ಮೆ ಸಾಬೀತುಪಡಿಸುತ್ತದೆ. ಇದು ಎಲ್ಲರಿಗೂ ಎಚ್ಚರಿಕೆ ಗಂಟೆ ಆಗಬೇಕಿದೆ.


ಓದುಗರ/ಏಜೆಂಟರ ಗಮನಕ್ಕೆ

ಮುಂದಿನ ವಾರ ಪತ್ರಿಕೆ ಮಂಗಳವಾರವೇ!

ಗುರುವಾರ 17 ರಂದು ಲೋಕಸಭಾ ಚುನಾವಣೆ ಪ್ರಯುಕ್ತ ಮುಂದಿನ ವಾರದ ಸಂಚಿಕೆ ಸೋಮವಾರವೇ ಮಾರುಕಟ್ಟೆಗೆ ಬರಲಿದೆ. ಮಂಗಳವಾರ ಬೆಂಗಳೂರು ನಗರದಲ್ಲಿ ಮತ್ತು ಬುಧವಾರ ರಾಜ್ಯದ ಇತರೆಡೆ ಪತ್ರಿಕೆ ಸಿಗಲಿದೆ. ಇನ್ನು ಏಜೆಂಟರು, ಓದುಗರು ಗಮನಿಸಬೇಕಾಗಿ ಕೋರಿದೆ.

-ಸಂ

2012ರಲ್ಲಿ ಮೋದಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೆಂಡತಿಯ ಹೆಸರೇ ಇಲ್ಲ



અનુક્રમાંક	નામ	કાયમી ખાતા નંબર (PAN)	આવકવેરાનું છેલ્લું રિટર્ન ભર્યું હોય તે નાણાંકીય વર્ષ	આવકવેરા રિટર્નમાં દર્શાવેલી કુલ આવક (રૂપિયામાં)
૧	પોતે	AHHPM8993N	૨૦૧૧-૧૨	૧,૪૦,૬૩૦.૦૦
૨	લગ્નસાથી	———	———	———
૩	આશ્રિત-૧	———	———	———
૪	આશ્રિત-૨	———	———	———
૫	આશ્રિત-૩	———	———	———

46 ವರ್ಷಗಳ ನಂತರ ಮಡದಿಯನ್ನು ನೆನಪು ಮಾಡಿಕೊಂಡ ಮೋ


ನರಹಂತಕ ನರೇಂದ್ರ ಮೋದಿ ತಾನು ಅಖಂಡ ಬ್ರಹ್ಮಚಾರಿ ಎಂತಲೋ, ಅವಿವಾಹಿತ ಎಂತಲೋ ಬೊಗಳೆ ಬಿಡುತ್ತಿದ್ದಾಗ, ಆತ ಮದುವೆ ಆಗಿರುವುದಾಗಿಯೂ, ಆಕೆ ಹೆಚ್ಚು ಓದಿರಲಿಲ್ಲ ಮತ್ತು ನೋಡಲು ಅಂದವಿರಲಿಲ್ಲ ಎಂಬ ಕಾರಣಕ್ಕೆ ಆಕೆಯನ್ನು ತ್ಯಜಿಸಿರುವುದಾಗಿಯೂ ಈ ನಿಮ್ಮ ಪತ್ರಿಕೆ ವರದಿ ಮಾಡಿತ್ತು.

ಈಗಲೂ ಅಷ್ಟೇ, ಮೊನ್ನೆ ಅಂದರೆ ಸೋಮವಾರ ಬರೋಡಾದಲ್ಲಿ ತನ್ನ ನಾಮಪತ್ರವನ್ನು ಸಲ್ಲಿಸಿದಾಗ ಮೋದಿ ತನ್ನ ಅಫಿಡವಿಟ್‌ನಲ್ಲಿ ತಾನು ಜಶೋದಾಬೇನ್ ಎಂಬುವವರನ್ನು ಮದುವೆ ಆಗಿರುವುದಾಗಿ ಕೊನೆಗೂ ಒಪ್ಪಿಕೊಂಡಿದ್ದಾನೆ. ಈ ಅಂಶವನ್ನೂ ಇವತ್ತಿನ ಯಾವ ಕನ್ನಡ ದಿನಪತ್ರಿಕೆಯೂ ವರದಿ ಮಾಡಿಲ್ಲ, ಆದರೆ ಮತ್ತೆ ಈ ನಿಮ್ಮ ಪತ್ರಿಕೆ ಅದನ್ನೂ ವರದಿ ಮಾಡುತ್ತಿದೆ. ಆ ಮೂಲಕ ಮೋದಿ ಎಂತಹ ಸುಳ್ಳುಗಾರ ಮತ್ತು ನೀಚ ಎಂಬುದನ್ನು ಮತ್ತೆ ಜನರ ಮುಂದೆ ಇಡುತ್ತಿದೆ.

ಮೋದಿ ಕಳೆದ 13 ವರ್ಷಗಳಿಂದ ಗುಜರಾತಿನ ಮುಖ್ಯಮಂತ್ರಿ ಆಗಿದ್ದಾನೆ ಮತ್ತು ಆ ರಾಜ್ಯದಲ್ಲಿ ಈಗಾಗಲೇ ನಾಲ್ಕು ಬಾರಿ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಾನೆ. ಆದರೆ ಆ ನಾಲ್ಕು ಬಾರಿಯೂ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ತನ್ನ ಮಡದಿಯ ಹೆಸರನ್ನು ಖಾಲಿ ಬಿಟ್ಟು ತಾನು ಅವಿವಾಹಿತ ಎಂಬಂತೆ ಪೋಸು ಕೊಟ್ಟಿದ್ದ. ಆದರೆ ಈ ಬಾರಿಯೂ ಹಾಗೆಯೇ ಸುಳ್ಳು ಹೇಳಿದರೆ ಎಲ್ಲಿ ಪ್ರಧಾನಿ ಹುದ್ದೆಗೇರುವ ತನ್ನ ಕನಸಿಗೆ ತೊಂದರೆಯಾಗುತ್ತದೆಯೋ ಎಂಬ ಭಯದಿಂದ ಪ್ರಮಾಣ ಪತ್ರದಲ್ಲಿ ತನ್ನ ಹೆಂಡತಿಯ ಹೆಸರನ್ನು ಜಶೋದಾಬೇನ್ ಎಂದು ನಮೂದಿಸಿದ್ದಾನೆ. ಆದರೆ ಆಕೆಯ ಹೆಸರಿನಲ್ಲಿರುವ ಹಣ, ಆಸ್ತಿ ಪಾಸ್ತಿ, ಪ್ಯಾನ್ ನಂಬರ್ ಬಗ್ಗೆ 'ನಾಟ್ ನೋನ್' ಎಂದು ಬರೆದಿದ್ದಾನೆ. ಅದಕ್ಕೆ ಇಲ್ಲಿ ದಾಖಲೆಗಳನ್ನು ನೀಡಿದ್ದೇವೆ.

ಆದರೆ ಇದೇ ಮೋದಿ ಎರಡು ವರ್ಷಗಳ ಹಿಂದೆ ನಡೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ 'ಮಡದಿಯ ಹೆಸರು' ಎಂಬಲ್ಲಿ ಖಾಲಿ ಬಿಟ್ಟಿದ್ದ. ಅದಕ್ಕೂ ಇಲ್ಲಿ ದಾಖಲೆಗಳನ್ನು ಕೊಟ್ಟಿದ್ದೇವೆ.





ಇದರ ಅರ್ಥ ಏನು? ಮೋದಿ ಕಳೆದ ಎರಡು ವರ್ಷಗಳಲ್ಲಿ ಯಾರ ಗಮನಕ್ಕೂ ಬಾರದೆ ಮದುವೆಯಾದನೆ? ವಸ್ತು ಸ್ಥಿತಿ ಹಾಗಿಲ್ಲ.

ನಾವು ಈ ಹಿಂದೆ ವರದಿ ಮಾಡಿದ್ದಂತೆ, ಮೋದಿ ಸುಮಾರು 46 ವರ್ಷಗಳ ಹಿಂದೆಯೇ ಜಶೋದಾಬೇನ್ ಎಂಬಾಕೆಯನ್ನು ಮದುವೆಯಾಗಿದ್ದ. ಆಗ ಅವರಿಬ್ಬರಿಗೂ 17 ವರ್ಷ ವಯಸ್ಸು. ಆಗ ಮೋದಿ ಆರೆಸ್ಸೆಸ್ ಸಂಘಟನೆಯಲ್ಲಿ ಸಕ್ರಿಯನಾಗಿದ್ದ. ಮೋದಿಯಂತೆ ಜಶೋದಾಬೇನ್ ಕೂಡ ಹೈಸ್ಕೂಲನ್ನೂ ಓದಿರಲಿಲ್ಲ, ಆದರೆ ಮೋದಿಗೆ ತಾನು ಆರೆಸ್ಸೆಸ್ ಮೂಲಕ ತುಂಬಾ ಅರಿತುಕೊಂಡಿದ್ದೇನೆಂಬ ಹುಂಬತನ. ಅಷ್ಟೇ ಅಲ್ಲ, ತಾನು ಸುರಸುಂದರಾಂಗ ಎಂಬ ಭ್ರಮೆ ಆಗಲೂ ಮೋದಿಗಿತ್ತು. ಆದ್ದರಿಂದ ತನಗೆ ಹೋಲಿಸಿದರೆ 'ಜಶೋದಾಬೇನ್ ಅಂದವಿಲ್ಲ ಎಂಬ ತಾತ್ಸಾರ. ಮೂರು ವರ್ಷಗಳ ಕಾಲ ಆಕೆಯೊಂದಿಗೆ ಇದ್ದ ಮೋದಿ ಆಮೇಲೆ ಆರೆಸ್ಸೆಸ್ಸು, ದೇಶಸೇವೆ ಎಂದೆಲ್ಲ ಹೇಳಿ ಮನೆ ಬಿಟ್ಟು ಹೊರಟ. ಆತ ಅದೆಷ್ಟು ವರ್ಷ ಅದೆಲ್ಲಿದ್ದ ಏನು ಮಾಡಿದ, ಎಂತಹದ್ದನ್ನು ಸಾಧಿಸಿದ ಎಂಬುದೆಲ್ಲ ಈಗಲೂ ನಿಗೂಢ.


ಅದೆಲ್ಲ ಬದಿಗಿರಲಿ, ಮೋದಿ ಹೀಗೆ ಹೊರಟುಹೋದನಂತರ ತಾನು ಕೈಹಿಡಿದಿದ್ದ ಜಶೋದಾಬೇನ್ ಅವರೊಂದಿಗಿನ ಸಂಪರ್ಕವನ್ನೇ ಕಡಿದು ಹಾಕಿದ. ಆಗ ವಿಧಿ ಇಲ್ಲದೆ ತನ್ನ ತವರುಮನೆ ಸೇರಿದ ಜಶೋದಾಬೇನ್ ಅವರು ಆಗಿನ ಎಸ್‌ಎಸ್‌ಎಲ್‌ಸಿ ಮುಗಿಸಿ, ಅಧ್ಯಾಪಕಿ ತರಬೇತಿಯನ್ನೂ ಪಡೆದು ಸರ್ಕಾರಿ ಶಾಲೆಯೊಂದರಲ್ಲಿ ಟೀಚರ್ ಆಗಿ ಸೇರಿದರು. ಅವತ್ತಿನಿಂದ ಮೂರು ವರ್ಷಗಳ ಹಿಂದೆ ನಿವೃತ್ತಿ ಹೊಂದುವವರೆಗೂ ಆಕೆ ಗುಜರಾತಿನ ಹಲವಾರು ಕಡೆ ಶಾಲಾ ಮಕ್ಕಳಿಗೆ ಪಾಠ ಮಾಡುತ್ತ ಏಕಾಂಗಿಯಾಗಿ ತಮ್ಮ ಜೀವನ ಸಾಗಿಸುತ್ತಿದ್ದರು. ಈಗ ತಾನಾಯಿತು ತನ್ನ ಇಬ್ಬರು ಸಹೋದರರ ಕುಟುಂಬದ ಆಶ್ರಯ ಸಾಕು ಜೀವಿಸುತ್ತಿದ್ದಾರೆ.

ಆದರೆ ಇದೇ ಅವಧಿಯಲ್ಲಿ ಮೋದಿ ಆರೆಸ್ಸೆಸ್, ಎಬಿವಿಪಿ ಮತ್ತು ಆನಂತರ ಬಿಜೆಪಿಯ ಕುತಂತ್ರಗಳನ್ನು ಮಾಡಿಯೇ ಬೆಳೆದು ನಿಂತ. ಗುಜರಾತಿನ ಮುಖ್ಯಮಂತ್ರಿಯಾಗಿದ್ದ ಕೇಶುಭಾಯ ಹಲವಾರು ಹಗರಣಗಳಲ್ಲಿ ಸಿಲುಕಿ ಒದ್ದಾಡಲಾ ಆತನ ಆಡಳಿತಾವಧಿಯಲ್ಲಿ ಬಿಜೆಪಿ ಜ ಕಳೆದುಕೊಳ್ಳಲಾರಂಭಿಸಿತ್ತು. ಮರುವರ್ಷವೇ ವಿ ಚುನಾವಣೆಗಳು ನಡೆಯಲಿದ್ದರಿಂದ ಆ ರಾಜ್ಯದ ಅಧಿಕಾರ ಕಳೆದುಕೊಳ್ಳುವ ಅಪಾಯದಲ್ಲಿತ್ತು. ಆ ನಾಯಕರು ಮೋದಿಯನ್ನು ಮುಖ್ಯಮಂತ್ರಿ ಕ ಕೂರಿಸಿದರು. ಬಿಜೆಪಿ ಅಧಿಕಾರ ಉಳಿಸಿಕೊಳ್ ಹಿಂದೂ 'ಗರ್ವ'ವನ್ನು ಏರಿಸಬೇಕು, ಕೋಮು ಗ ಸೃಷ್ಟಿಸಬೇಕು, ಅಮಾಯಕರ ಜೀವವನ್ನು ಬಲಿ ಕೆ ಎಂಬುದನ್ನೇ ಆರೆಸ್ಸೆಸ್‌ನಲ್ಲಿ ಕಲಿತಿದ್ದ ಮೋದಿ ಏರಿದ ಮೂರು ತಿಂಗಳಲ್ಲೇ ಗೋಧ್ರಾ ರೈಲು ಸಂಭವಿಸಿತು. 56 ಜನರನ್ನು ಬಲಿ ತೆಗೆದುಕ ದುರಂತಕ್ಕೆ, ಕಾರಣ ಯಾರೆಂಬುದು ನಿಗೂಢವಾಗಿದೆ. ಅದಾದನಂತರ ನಡೆದದ್ದು ಗೊತ್ತು.

ಹಿಂದೂತ್ವ ಎಂಬ ಕೋಮು ಸಿದ್ಧಾಂತ ಮ ಅಭಿವೃದ್ಧಿಯನ್ನೇ ಆಧಾರವಾಗಿಟ್ಟುಕೊಂಡು ಮೋ ಪ್ರಧಾನಿ ಆಗುವ ಹಂತವನ್ನು ತಲುಪಿದ್ದಾನೆ.

ಈ ಹಂತದಲ್ಲಿ ಯಡವಟ್ಟಾದರೆ ಸರಿ ಎಂದು ಕಾನೂನುತಜ್ಞರು ಎಚ್ಚರಿಸಿದ್ದರಿಂದ ನಿ ತನ್ನ ಪ್ರಮಾಣಪತ್ರದಲ್ಲಿ ಜಶೋದಾಬೇನ್ ಎಂ ಮಡದಿ ಎಂದು ಒಪ್ಪಿಕೊಂಡಿದ್ದಾನೆ.


ಮೋದಿಯದ್ದು ಎಂತಹ ನರಿ ಬುದ್ಧಿ ಅ



અનુક્રમાંક	નામ	કાયમી ખાતા નંબર (PAN)	આવકવેરાનું છેલ્લું રિટર્ન ભર્યું હોય તે નાણાંકીય વર્ષ	આવકવેરા રિટર્નમાં દર્શાવેલી કુલ આવક (રૂપિયામાં)
૧	પોતે : નરેન્દ્ર મોદી	AHHPM8993N	૨૦૧૨-૧૩	૪,૫૪,૦૯૫/-
૨	લગ્નસાથી : જશોદાબેન	માહિતી નથી (NOT KNOWN)	માહિતી નથી (NOT KNOWN)	માહિતી નથી (NOT KNOWN)
૩	આશ્રિત-૧ લાગુ પડતું નથી.	લાગુ પડતું નથી.	લાગુ પડતું નથી.	લાગુ પડતું નથી.
૪	આશ્રિત-૨ લાગુ પડતું નથી.	લાગુ પડતું નથી.	લાગુ પડતું નથી.	લાગુ પડતું નથી.
૫	આશ્રિત-૩ લાગુ પડતું નથી.	લાગુ પડતું નથી.	લાગુ પડતું નથી.	લાગુ પડતું નથી.

ಮೊನ್ನೆ ಮೋದಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಮಡದಿಯ ಹೆಸರನ್ನು ನಮೂದಿಸಲಾಗಿದೆ. ಆದರೆ ಆಕೆಯ ವಿವರಗಳ ಬಗ್ಗೆ 'Not known' ಎಂದು ಬರೆಯಲಾಗಿದೆ.

ಫೇಕು ಮೋದಿಯ ಅಸಲಿ ಪತ್ನಿ



ಬರೋಡಾದಲ್ಲಿ ಮೋದಿ ಮೊದಲ ಬಾರಿಗೆ ...ರ್ವಜನಿಕವಾಗಿ ತಾನು ಜಶೋದಾಬೇನ್ ಎಂಬುವವರನ್ನು ...ದುವೆ ಆಗಿರುವುದಾಗಿ ಒಪ್ಪಿಕೊಂಡಿದ್ದು ಟ್ವಿಟ್ಟರ್ ...ೋಕದಲ್ಲಿ ಸಂಚಲನವನ್ನೇ ಮೂಡಿಸಿದೆ. ಮೋದಿಯನ್ನು ...ರಿತು ಟ್ವಿಟ್ಟರ್‌ನಲ್ಲಿ ಹರಿದಾಡಿದ ಹಲವು ಸಾಲುಗಳನ್ನು ...ೋದಿ ವಿರೋಧಿಗಳ ಮನರಂಜನೆಗೆ ಮತ್ತು ಮೋದಿ ...ಕ್ತರ ಕಣ್ಣುತೆರೆಸುವುದಕ್ಕೆ ಇಲ್ಲಿ ನೀಡಿದ್ದೇವೆ:

* ನಾಲ್ಕು ದಶಕಗಳ ಕಾಲ ಮೋದಿ ತನ್ನ ಹೆಂಡತಿಯನ್ನೇ ...ರೆತುಬಿಡುತ್ತಾನೆಂದರೆ ಆತ ಅದೇನನ್ನು ಕುಡಿಯುತ್ತಿದ್ದ? ...ಾದಾಯ, ಅದನ್ನು ನಮಗೂ ಕೊಡು, ನಾವೂ ...ದುವೆಯಾಗಿದ್ದೇವೆ ಎಂಬುದನ್ನು ಮರೆತುಬಿಡಲು ...ಚ್ಛಿಸುತ್ತೇವೆ!

* ತಾನು ಮದುವೆಯಾಗಿದ್ದರೂ ಮಾನಸಿ ಎಂಬ ...ುವತಿಯ ಹಿಂದೆ ಪೊಲೀಸರನ್ನು ನಿಯಮಬಾಹಿರವಾಗಿ ...ಾಬಿಟ್ಟು ಆಕೆಯ ಮೇಲೆ ನಿಗಾ ಇಟ್ಟಿದ್ದ ಮೋದಿ. ...ಾ, ನಾಚಿಕೆ ಆಗಬೇಕು.

* 17 ವರ್ಷ ವಯಸ್ಸಾದಾಗ ಮದುವೆಯಾಗು, 70 ...ರ್ಷ ತಲುಪಿದಾಗ ಆಕೆ ನಿನ್ನ ಹೆಂಡತಿ ಎಂದು ಒಪ್ಪಿಕೋ. ...ಮ್ಮ ಆರೆಸ್ಸೆಸ್ ಸಂಸ್ಕೃತಿ.

* ಅಧಿಕಾರದ ದಾಹದಲ್ಲಿ ಕಳೆದುಹೋಗಿರುವ ...ಶೋದಾಬೇನ್ ಅವರ ಪತಿಯನ್ನು ನಾವೆಲ್ಲ ...ುಡುಕಿಕೊಡಬೇಕಿದೆ.

* ಭಾರತದ ಮಹಿಳೆಯರೇ, ಮೋದಿ 46 ವರ್ಷಗಳ ...ಾಲ ತನ್ನ ಹೆಂಡತಿಯನ್ನೇ ಮರೆತುಬಿಡುತ್ತಾನೆ. ಇಂಥವನ ...ರ್ಕಾರದಲ್ಲಿ ನಿಮ್ಮ ಏಳಿಗೆ ಸಾಧ್ಯವೇ?

* ಮೋದಿಯನ್ನು ಟೀಕಿಸುವ ಅಗತ್ಯವಿಲ್ಲ. ಪಾಪ ...001, 2002, 2007 ಮತ್ತು 2012ರಲ್ಲಿ ತಾನು ...ದುವೆ ಆಗಿದ್ದೆ ಎಂಬುದನ್ನು ಆತ ಮರೆತುಬಿಟ್ಟಿದ್ದ ...ನ್ನೇ!

* ಪ್ರಧಾನಿ ಕುರ್ಚಿಗೆ ಅದೆಷ್ಟು ಶಕ್ತಿ ಇದೆ ನೋಡಿ: ...ದರಿಂದಾಗಿಯೇ ಇವತ್ತು ಜಶೋದಾಬೇನ್‌ಗೆ ನ್ಯಾಯ ...ಕ್ಕಿದೆ!

* ಎಲ್ಲರೂ ಸ್ವಲ್ಪ ದಿನ ಕಾಯಿರಿ, ಆಗ ಜಶೋದಾಬೇನ್ ...ವರ ತಂದೆಯೇ ಮಾಧ್ಯಮಗಳಿಗೆ ಒಂದು ಪತ್ರ ಬಿಡುಗಡೆ ...ಾಡಿ 'ನಾನೇ ತನ್ನ ಮಗಳನ್ನು ತೊರೆಯಬೇಕೆಂದು ...ೋದಿಯನ್ನು ವಿನಂತಿಸಿಕೊಂಡಿದ್ದೆ' ಎನ್ನುತ್ತಾನೆ!

* ಪ್ರಧಾನಿ ಆದಮೇಲೆ ಫೇಕು ಮೋದಿ ...ಂಡತಿಯರನ್ನು ತ್ಯಜಿಸುವ ಹಕ್ಕು' ಎಂಬ ಹೊಸ ...ೂನನ್ನು ಜಾರಿಗೆ ತರುತ್ತಾನೆ.

* ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ ಸಮಾನ ...ಂತೆ ತರುವುದಾಗಿ ಹೇಳಿದೆ. ಆದರೆ ಮೋದಿಯ ...ಡತಿಗೇ ಸಮಾನತೆಯ ಅವಕಾಶ ಸಿಕ್ಕಿಲ್ಲವಲ್ಲ!

* ಮದುವೆಯಾಗಿರುವ ಒಬ್ಬ ಪ್ರಧಾನಿ ಅಭ್ಯರ್ಥಿಯು ...ರ್ಷ ಅವಿವಾಹಿತ ಯುವತಿಯನ್ನು ಹಿಂಬಾಲಿಸುತ್ತಾನೆ ...ದರೆ ಇವನು ಇನ್ನೆಂತಹ ವ್ಯಕ್ತಿ?

* ಫೇಕು ಸಾಮ್ರಾಜ್ಯದಲ್ಲಿ ನಾಪತ್ತೆಯಾಗಿರುವ ಸಾವಿರಾರು ...ಂಳೆ ಮತ್ತು ಮಕ್ಕಳಂತೆ ಇಷ್ಟು ದಿನ ಜಶೋದಾಬೇನ್ ...ಡ ನಾಪತ್ತೆಯಾಗಿದ್ದರು.

* ಮೋದಿಯಿಂದ ಅನ್ಯಾಯಕ್ಕೊಳಗಾಗಿರುವ ...ೋದಾಬೇನ್ ಅವರು ನ್ಯಾಯಾಲಯದ ಮೊರೆ ಹೋಗಿ ...ಸಿಗೆ ತಕ್ಕ ಶಾಸ್ತಿ ಮಾಡಿಸಬೇಕು.

* ನರೇಂದ್ರ ಮೋದಿಯಂತಹ ಪತಿ ಪರಮೇಶ್ವರನಿದ್ದರೂ, ...ಜನಾತಿ ನಾರಿ ಜಶೋದಾಬೇನ್ ನಿಟ್ಟುಸಿರು ಬಿಡುತ್ತಿದ್ದಾರೆ.

* ನಿನ್ನ ಕೈ ಹಿಡಿದಿರುವವಳು ಹೆಚ್ಚು ಓದಿಲ್ಲ, ನೋಡಲೂ ಅಷ್ಟು ಅಂದವಿಲ್ಲದಿದ್ದರೆ ಆಕೆಯನ್ನು ಮದುವೆಯಾಗಿದ್ದೆ ಎಂಬುದನ್ನೇ ಮರೆತುಬಿಡು. ಇದು ಮೋದಿ ಸಿದ್ಧಾಂತ.

* ಮತದಾರರ ಮುಂದೆ 'ನಾನು ಅವಿವಾಹಿತ' ಎಂದ. ಆದರೆ ಅಫಿಡವಿಟ್‌ನಲ್ಲಿ 'ಮದುವೆಯಾಗಿದೆ' ಎಂದ. ಆದರೂ ಆತನ ಹಿಂಬಾಲಕರು 'ಮೋದಿ ಜೈ' ಎನ್ನುತ್ತಿದ್ದಾರೆ. ಪೆದ್ದ ಶಿಖಾಮಣಿಗಳು!

* ಮೋದಿ ಅಧಿಕಾರಕ್ಕೆ ಬಂದು ಹನ್ನೆರಡು ವರ್ಷಗಳ ನಂತರ ಈಗೀಗ ಆತ ಛಾಯ್ ಮಾರುತ್ತಿದ್ದ ಎಂದೂ, ಆತ ಹಿಂದುಳಿದ ವರ್ಗದವನು ಎಂದೂ, ಈಗ ಮದುವೆಯೂ ಆಗಿದ್ದಾನೆಂದೂ ಜನರಿಗೆ ಗೊತ್ತಾಗುತ್ತಿದೆ. ಆತ ಬಚ್ಚಿಟ್ಟಿರುವ ಗುಟ್ಟುಗಳು ಇನ್ನೆಷ್ಟೋ.

* ಜಶೋದಾಬೇನ್ ಅವರನ್ನು ಮೋದಿ ಮದುವೆಯಾಗಿದ್ದರೂ ಆತ ತನ್ನ ಗರ್ಲ್‌ಫ್ರೆಂಡ್ ಮೇಲೆ ಅಕ್ರಮವಾಗಿ ನಿಗಾ ಇಟ್ಟಿದ್ದ ಎಂದಾಯಿತು. ವಾಸ್ತವವಾಗಿ ಆತನ ಮೇಲೆ ಜಶೋದಾಬೇನ್ ನಿಗಾ ಇಟ್ಟಿರಬೇಕಿತ್ತಲ್ಲವೇ?

* ಆರೆಸ್ಸೆಸ್‌ನ ಒಬ್ಬ ನಾಯಕ ನೀಡಿರುವ ಸ್ಪಷ್ಟೀಕರಣ ಹೀಗಿದೆ: "ಮೋದಿಗೆ ಮದುವೆ ಆಗಿತ್ತು ನಿಜ. ಆದರೆ ಆತ ಅವಿವಾಹಿತ."

* ಓಹೋ, ಆತನ ಹಿಂಬಾಲಕರು ಹೇಳುತ್ತಿದ್ದದ್ದು 'ಮೋದಿ ವೇವ್' ಅಂತಲ್ಲ, ಬದಲಾಗಿ 'ಮೋದಿ ವೇಫ್'.

* ಫೇಕು ಭಕ್ತರಿಗೆ ಈಗ ಒಬ್ಬ ತಾಯಿ ಸಿಕ್ಕಿದ್ದಾಳೆ.

* ಮೋದಿಯವರಿಗೆ ಶಾದಿ ಮುಬಾರಕ್!

* ಮದುವೆಯಾದ, ತ್ಯಜಿಸಿದ, ನಾಲ್ಕು ಬಾರಿ ಆಕೆಯ ಅಸ್ತಿತ್ವವನ್ನೇ ನಿರಾಕರಿಸಿದ. ಕೊನೆಗೆ ತಾನು ಮದುವೆ ಆಗಿದ್ದೇನೆ ಎಂದು ಒಪ್ಪಿಕೊಂಡ. ಇಷ್ಟಾದ ಮೇಲೂ ಆಕೆಯ ಬಗ್ಗೆ ಅವನಿಗೆ ಏನೇನೂ ಗೊತ್ತಿಲ್ಲ.

* ಯಶೋದಾಬೇನ್ ತನ್ನ ಹೆಂಡತಿ ಎಂದು ಮೋದಿ ಯಾಕೆ ಈಗ ಒಪ್ಪಿಕೊಂಡಿದ್ದಾನೆ ಗೊತ್ತಾ? ಆಕೆಯಾದರೂ ತನಗೆ ಮತ ಚಲಾಯಿಸಲಿ ಎಂದು.

* ಅರುಣ್ ಜೈಟ್ಲಿಯವರೇ, ಮೋದಿಯ ವಿವಾಹದ ಬಗ್ಗೆ ಒಂದು ಬ್ಲಾಗ್ ಶುರುಮಾಡುತ್ತೀರಾ ಪ್ಲೀಸ್?

* ಆಗ ಬ್ರಹ್ಮಚಾರಿ, ಈಗ ವಿವಾಹಿತ? ಇಂತಹವನನ್ನು ದೇಶ ನಂಬಬೇಕಾ?

* ಚುನಾವಣಾ ಪ್ರಚಾರದ ವೇಳೆ ಆತ 56 ಇಂಚು ಸುತ್ತಳತೆಯ ಎದೆ ಹೊಂದಿರುವ ಬ್ರಹ್ಮಚಾರಿ. ಆದರೆ ದಾಖಲೆಯಲ್ಲಿ ವಿವಾಹಿತ. ಎಂತಹ ಅಚ್ಚರಿ!

* ಮಹಿಳಾವಾದಿ ಮಧು ಕಿಶ್ವರ್ ಈಗ ಜಶೋದಾಬೇನ್ ಅವರಿಗೆ ಕಳೆದ 46 ವರ್ಷಗಳಿಂದ ಸಿಕ್ಕದಿರುವ ಆರ್ಥಿಕ ನೆರವು ಸಿಗುವಂತೆ ಹೋರಾಟ ಮಾಡುತ್ತಾರಾ?

* ಮೋದಿ ಮತ್ತು ಜಶೋದಾಬೇನ್ ದಂಪತಿಗಳಿಗೆ ನಮ್ಮ ಶುಭ ಹಾರೈಕೆ. ವಿಎಚ್‌ಪಿ ನಾಯಕರು ಹಿಂದೂಗಳಿಗೆ ಹೇಳುತ್ತಿರುತ್ತಾರೆ 'ಎಲ್ಲರೂ ಐದು ಮಕ್ಕಳನ್ನು ಹಡೆಯಬೇಕು' ಎಂದು. ಹಿಂದೂತ್ವದ ಪಾಲಕರಾದ ಮೋದಿಯವರು ತಡವಾಗಿಯಾದರೂ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲಿ.

* 47 ವರ್ಷಗಳ ನಂತರ ತಾನು ಮದುವೆಯಾಗಿದ್ದೇನೆಂದು ಒಪ್ಪಿಕೊಂಡಿರುವ ಮೋದಿ, ಹಲವು ವರ್ಷಗಳ ನಂತರ ತಾನು ತನ್ನ ಮಗನ ತಂದೆ ಎಂದು ಒಪ್ಪಿಕೊಂಡ ಎನ್.ಡಿ.ತಿವಾರಿಯವರ ದಾಖಲೆಯನ್ನು ಮುರಿದಿದ್ದಾರೆ.

* ಮೋದಿಗಾಗಿ ಬೆತ್ತಲೆಯಾದ ಮಲ್ಲಿಕಾ ಶೆರಾವತ್ ಮತ್ತು ಇತರೆ ಬೆಡಗಿಯರು ಜಶೋದಾಬೇನ್ ಅವರ ಸುದ್ದಿ ಹೇಳಿ ನಿರಾಶರಾಗಿದ್ದಾರೆ.

* ಮೋದಿ ಕುರಿತ ಹೊಸ ಪುಸ್ತಕಕ್ಕೆ ಟೈಟಲ್: 'ಪತಿ, ಪತ್ನಿ ಔರ್ ಓಟ್'

* ಮೋದಿ ಬೆಂಬಲಿಗರು ಈಗಲಾದರೂ ಮದುವೆ ರಿಸೆಪ್ಷನ್ ಏರ್ಪಡಿಸಿ ನಮ್ಮನ್ನೆಲ್ಲ ಆಹ್ವಾನಿಸಲಿ.

* ರಿಲೇಷನ್‌ಶಿಪ್ ಸ್ಟೇಟಸ್: ಮದುವೆ ಆಗಿದ್ದೇನೆ, ಯಾಕೆಂದರೆ ಎಲೆಕ್ಷನ್ ಕಮಿಶನ್ ನಿಯಮಗಳು ಅದನ್ನು ನಿರಾಕರಿಸಲು ಬಿಡುವುದಿಲ್ಲ.


* ಇಷ್ಟು ವರ್ಷಗಳ ನಂತರ ಯಾಕೆ ಮೋದಿ ತನ್ನ ಹೆಂಡತಿಯ ಹೆಸರನ್ನು ಬಹಿರಂಗಪಡಿಸಿದ್ದಾನೆ? ಇಲ್ಲಿಯತನಕ ಜಶೋದಾಬೇನ್ ಎಲ್ಲಿದ್ದರು? ತನ್ನ ಹೆಂಡತಿಗಾಗಿ ಮೋದಿ ಏನು ಮಾಡಿದ್ದಾನೆ?


* ಆರೆಸ್ಸೆಸ್‌ನಲ್ಲಿರುವ ಆತನ ಬಾಸ್‌ಗಳು ಭಾರತೀಯ ಮಹಿಳೆಯರು ಅಡುಗೆ ಮನೆಯಲ್ಲಿರಬೇಕು ಎನ್ನುತ್ತಾರೆ. ಆದರೆ ಮೋದಿ ತನ್ನ ಹೆಂಡತಿಯನ್ನೇ ದಶಕಗಳ ಕಾಲ ಮರೆತುಬಿಡುತ್ತಾನೆ.

ಬೆಂಗಳೂರು ಸೆಂಟ್ರಲ್

ಕಾಂಗ್ರೆಸ್ ಬಾವುಟ ಹಾರಿಸುತ್ತಾರಾ ರಿಜ್ವಾನ್?

ಪತನದ ಅಂಚಿನಲ್ಲಿ ಪಿ.ಸಿ.ಮೋಹನ್





ಬೆಂಗಳೂರು ಸೆಂಟ್ರಲ್‌ಗೆ ಮೋದಿ ಅಲೆಯನ್ನೇ ನಂಬಿ ಗೆಲ್ಲುವ ಕನಸು ಕಾಣುತ್ತಿದ್ದಾರೆ ಬಿಜೆಪಿ ನಾಯಕ ಪಿ.ಸಿ. ಮೋಹನ್. ಬಿಜೆಪಿ ಅಧಿಕಾರದಲ್ಲಿದ್ದಾಗ ಗೆಲ್ಲುವುದಕ್ಕೂ ಕಾಂಗ್ರೆಸ್ ಸರ್ಕಾರದಲ್ಲಿ ಈಜುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅದೀಗ ಯುವ ಕಾಂಗ್ರೆಸ್ ನಾಯಕ ರಿಜ್ವಾನ್ ಮೂಲಕ ಪಿ.ಸಿ. ಮೋಹನ್‌ಗೆ ಪಾಠವಾಗುವಂತಿದೆ.

ಕಾಂಗ್ರೆಸ್ ಪಾಲಿಗೆ ಅಷ್ಟಾಗಿ ಗೆಲುವಿನ ಕ್ಷೇತ್ರದಂತಿರುವ ಬೆಂಗಳೂರು ಸೆಂಟ್ರಲ್‌ನಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿರುವ ನಂದಿನಿ ಆಳ್ವಾ ಪರವಾಗಿ ಅವರ ಅಳಿಯ ಹಿಂದಿ ನಟ ವಿವೇಕ್ ಒಬೇರಾಯ್ ಸಿನಿಮೀಯವಾಗೇ ಪ್ರಚಾರಕ್ಕಿಳಿದಿದ್ದಾರೆ. ಮಹಾರಾಷ್ಟ್ರದಲ್ಲಿ ಬಿಜೆಪಿ ನಾಯಕ ಗಡ್ಕರಿ ಪರ ಓಟು ಕೇಳುವ ಒಬೇರಾಯ್ ತನ್ನ ಅತ್ತೆಯ ಪರವಾಗಿ ಬೆಂಗಳೂರಿನಲ್ಲಿ ಜೆಡಿಎಸ್‌ಗಾಗಿ ಓಟು ಕೇಳುತ್ತಿರುವುದು ತಮಾಷೆಯೆ.

ಕಳೆದ ಚುನಾವಣೆಯಲ್ಲಿ ಪಿ.ಸಿ. ಮೋಹನ್ ಗೆದ್ದು ಸಂಸದರಾಗಿದ್ದಕ್ಕೆ ಏನೆಲ್ಲ ಕಾರಣಗಳಿದ್ದವೋ ಅಂತ ಯಾವ ಕಾರಣವೂ ಈಗಿಲ್ಲ. ಹೆಚ್ಚೂ ಕಮ್ಮಿ 20 ಲಕ್ಷ ಮತದಾರರುಳ್ಳ ಬೆಂಗಳೂರು ಸೆಂಟ್ರಲ್‌ನಲ್ಲಿ ಮೋಹನ್ ನಾಲ್ಕು ಲಕ್ಷಕ್ಕೂ ಅಧಿಕ ಮತ ಗಳಿಸಿ ಕಾಂಗ್ರೆಸ್ಸಿನ ಸಾಂಗ್ಲಿಯಾನಾಗಿಂತ 46 ಸಾವಿರದಷ್ಟು ಅಧಿಕ ಓಟು ಗಿಟ್ಟಿಸಿದ್ದರು. ಸಾಂಗ್ಲಿಯಾನಾ ಮೂರು ಲಕ್ಷಕ್ಕೂ ಅಧಿಕ ಮತ ಗಳಿಸಿ ಸೋತಿದ್ದಕ್ಕೆ ಬೇರೆಯದೇ ಕಾರಣವಿತ್ತು. ಅದು ಜೆಡಿಎಸ್‌ನ ಜಮೀರ್ ಅಹ್ಮದ್ ಗಳಿಸಿದ್ದ ಬರೋಬ್ಬರಿ 1.60 ಲಕ್ಷದಷ್ಟು ಮುಸ್ಲಿಂ ಮತಗಳು!

ಆವತ್ತು ಕಣದಲ್ಲಿದ್ದ ಏಕೈಕ ಮುಸ್ಲಿಂ ಅಭ್ಯರ್ಥಿ ಜೆಡಿಎಸ್ ಜಮೀರ್ ಅಹ್ಮದ್ 1.60 ಲಕ್ಷದಷ್ಟು ಮತ ಗಳಿಸದೇ ಹೋಗಿದ್ದರೆ ಪಿ.ಸಿ. ಮೋಹನ್ ಗೆಲ್ಲುತ್ತಿರಲಿಲ್ಲ. ಈಗ ಎಲ್ಲವೂ ಉಲ್ಟಾಪಲ್ಟಾ. ಬಿಜೆಪಿಯ ಮೋಹನ್ ಎದುರಿಗಿರುವುದು ಮುಸ್ಲಿಂ ಕಾಂಗ್ರೆಸ್ ಅಭ್ಯರ್ಥಿ ರಿಜ್ವಾನ್. ಜೆಡಿಎಸ್‌ನ ನಂದಿನಿ ಆಳ್ವಾ ಮುಸ್ಲಿಂ ಮತಗಳನ್ನು ಯಾವುದೇ ಕಾರಣಕ್ಕೂ ಸೆಳೆಯಲಾರರು. ಜಮೀರ್‌ಗೆ ಬಿದ್ದಿದ್ದ 1.60 ಲಕ್ಷ ಮತಗಳ ಪೈಕಿ ಕನಿಷ್ಠ ಒಂದು ಲಕ್ಷದಷ್ಟಾದರೂ ವಾಪಸ್ಸು ಕಾಂಗ್ರೆಸ್ಸಿಗೆ ಬಂತೆಂದರೆ ರಿಜ್ವಾನ್ ನಿರಾಯಾಸವಾಗಿ ಗೆದ್ದು ಬಿಡುತ್ತಾರೆ.

ಕಳೆದ ಬಾರಿ ಬಿಜೆಪಿ ಸರ್ಕಾರವಿತ್ತು, ಪಿ.ಸಿ. ರಾಮನ್‌ನಗರದ ರಘು, ಮಹದೇವಪುರದ ಲಿಂಬಾವಳಿ ಮತ್ತು ರಾಜಾಜಿನಗರದಲ್ಲಿ ಸುರೇಶ್‌ಕುಮಾರ್ ಗೆದ್ದಿದ್ದರು. ಈ ಮೂವರು ಬಿಜೆಪಿ ಶಾಸಕರಿದ್ದಾಗಲೂ ಶಾಂತಿನಗರದ ಹ್ಯಾರೀಸ್, ಶಿವಾಜಿನಗರದ ರೋಷನ್ ಬೇಗ್, ಸರ್ವಜ್ಞನಗರದ ಕೆ.ಜೆ. ಜಾರ್ಜ್ ಮತ್ತು ಗಾಂಧಿನಗರದಲ್ಲಿ ದಿನೇಶ್ ಗುಂಡೂರಾವ್ ಸೇರಿದಂತೆ ನಾಲ್ವರು ಕಾಂಗ್ರೆಸ್ ಶಾಸಕರಿದ್ದರು. ಈಗಲೂ ಅದೇ ಪರಿಸ್ಥಿತಿಯಿದೆ. 3 ಬಿಜೆಪಿ 4 ಕಾಂಗ್ರೆಸ್ ಮತ್ತು ಚಾಮರಾಜಪೇಟೆ ಶಾಸಕ ಜಮೀರ್ ಜೆಡಿಎಸ್‌ನಿಂದ. ಹಿಂದೂ ಮತಗಳೆಲ್ಲ ಒಂದು ಪಕ್ಷವಾಗಿ ಮೋಹನ್‌ಗೆ ನೆರವಾಗುವ ಮೂಲಕ ಇಲ್ಲಿ ಮತ್ತೆ ಬಿಜೆಪಿ ಗೆಲ್ಲುತ್ತದೆ ಎಂಬುದಕ್ಕೆ ಅಂಥಾ ಕಾರಣಗಳೇ ಕಾಣಿಸುತ್ತಿಲ್ಲ.

4 ಲಕ್ಷದಷ್ಟು ಮುಸ್ಲಿಂ ಮತಗಳು ಮತ್ತು 2 ಲಕ್ಷದಷ್ಟು ಕ್ರಿಶ್ಚಿಯನ್ ಮತಗಳೇ ಇಲ್ಲಿ ನಿರ್ಣಾಯಕ. ಇವೆಲ್ಲ ಈ ಬಾರಿ ರಿಜ್ವಾನ್ ಪರ ಏಕಮುಖವಾಗಿ ಬೀಳುತ್ತವೆ. ನಂದಿನಿ ಆಳ್ವ ಕನಿಷ್ಠ 50 ಸಾವಿರವಾದರೂ ಕಿತ್ತೇ ಕೀಳುತ್ತಾರೆ. ಇನ್ನು ಆಮ್ ಆದ್ಮಿ ಪಕ್ಷದ ಬಾಲಕೃಷ್ಣನ್ ಕೆಲವು ಸಾವಿರದಷ್ಟು ಕಿತ್ತರೂ ಅದು ಪರೋಕ್ಷವಾಗಿ ಬಿಜೆಪಿಗೇ ಹಾನಿ. ಹೀಗಾಗಿ ಎತ್ತಿಂದೆತ್ತ ಲೆಕ್ಕ ಹಾಕಿದರೂ ಈ ಬಾರಿ ಪಿ.ಸಿ. ಮೋಹನ್ ಗೆಲ್ಲುವುದು ಕಷ್ಟವೆ.

ಕಳೆದ ಐದು ವರ್ಷದಿಂದ ಪಿ.ಸಿ. ಮೋಹನ್ ತನ್ನ ಮತದಾರರ ಬಗ್ಗೆಯಾಗಲಿ, ಕ್ಷೇತ್ರದ ಬಗ್ಗೆಯಾಗಲಿ, ರಾಜ್ಯದ ಹಿತಾಸಕ್ತಿಯ ಕುರಿತಾಗಲಿ ಒಮ್ಮೆಯೂ ದನಿಯೆತ್ತಲಿಲ್ಲ. ಬಿಜೆಪಿ ಸರ್ಕಾರದ ಭಾನಗಡಿಗಳು, ಭ್ರಷ್ಟಾಚಾರದ ಮಧ್ಯೆ ಮೋಹನ್‌ಗೆ ಅವಕಾಶ ಕೂಡ ಸಿಗಲಿಲ್ಲ. ಈ ಎಲ್ಲಾ ಎಡವಟ್ಟುಗಳ ಲಾಭ ರಿಜ್ವಾನ್‌ಗಾಗುತ್ತದೆ. ರಿಜ್ವಾನ್ ರಾಜಕೀಯಕ್ಕೆ ಹೊಸ ಮುಖ. ಬಿಸಿರಕ್ತದ ಉತ್ಸಾಹಿ ಯುವಕ. ಈ ಹಿಂದೆ ವಿದ್ಯಾರ್ಥಿ ಕಾಂಗ್ರೆಸ್ ಮುಖಂಡನಾಗಿ, ರಾಜ್ಯ ಯುವ ಕಾಂಗ್ರೆಸ್ ನಾಯಕನಾಗಿ ರಾಹುಲ್ ಗಾಂಧಿ ಆಪ್ತವಲಯದಲ್ಲಿ ಗುರುತಿಸಿಕೊಳ್ಳುತ್ತಿರುವ ರಿಜ್ವಾನ್ ವಿರುದ್ಧ ಭ್ರಷ್ಟಾಚಾರದ ಆರೋಪವಿಲ್ಲ, ಯಾವುದೇ ವ್ಯಾಪಾರ ವಹಿವಾಟಿನ ಉದ್ದೇಶವೂ ಇಲ್ಲ. ಹೀಗಾಗಿ ಆಮ್ ಆದ್ಮಿ ಪಕ್ಷದ ಬಾಲಕೃಷ್ಣನ್ ಹೇಗೆ ಜನಕ್ಕೆ ಆಪ್ತರಾಗುತ್ತಾರೋ ಅದಕ್ಕಿಂತಲೂ ದೊಡ್ಡ ಮಟ್ಟದಲ್ಲಿ ರಿಜ್ವಾನ್ ಮತದಾರರನ್ನು ಸೆಳೆಯುತ್ತಾರೆ.




ಮಹದೇವಪುರದಲ್ಲಿ ಲಿಂಬಾವಳಿ ಹಿಂದಿನಷ್ಟು ಸಲೀಸಾಗಿ ದುಡ್ಡು ಹಂಚುವುದು ಈ ಬಾರಿ ಸಾಧ್ಯವಿಲ್ಲ. ರಾಜಾಜಿನಗರದಲ್ಲಿ ಪದ್ಮಾವತಿ ಗುಂಪು, ಮಂಜುಳಾನಾಯ್ದು ಬಣ, ರಾಜಣ್ಣನ ಗುಂಪು, ಮುನಿರಾಜು ಬಣ-ಹೀಗೆ ನಾಲ್ಕು ಗುಂಪಾಗಿ ಛಿದ್ರವಾಗಿರುವುದು, ಮಹದೇವಪುರದಲ್ಲಿ ಶ್ರೀನಿವಾಸ್ ತಂಡಕ್ಕೆ ಮತ್ತಷ್ಟು ಪ್ರೋತ್ಸಾಹ ಮತ್ತು ಜೆಡಿಎಸ್ ಪಾಲಾಗಲಿರುವ ಅಷ್ಟಿಷ್ಟು ಮುಸ್ಲಿಂ ಮತಗಳನ್ನು ತಡೆಗಟ್ಟದಿದ್ದರೆಂದರೆ ಬಿಜೆಪಿಯ ಕನಸು ಭಗ್ನಗೊಂಡಂತೆಯೆ. ಬಹುಶಃ ಇದನ್ನು ಮುಂದಾಗಿಯೇ ಪಿ.ಸಿ. ಮೋಹನ್ ಗ್ರಹಿಸಿರಬೇಕು. ಯಾರೊಂದಿಗೂ ಬೆರೆಯುತ್ತಿಲ್ಲ, ದುಡ್ಡೂ ಕಾಸು ಬಿಚ್ಚುತ್ತಿಲ್ಲ, ಮೋದಿ ಅಲೆಯ ಹೊರತಾಗಿ ಪಿ.ಸಿ. ಮೋಹನ್ ಪಾಲಿಗೆ ಯಾವ ಭರವಸೆಯೂ ಉಳಿದಂತಿಲ್ಲ.

ಬೆಂಗಳೂರು ಸೆಂಟ್ರಲ್‌ನಲ್ಲೀಗ ಕಾಂಗ್ರೆಸ್ ಅಬ್ಬರವೇ ಅಧಿಕ.

● ರಾ.ಸೋ

ಚಾಮರಾಜನಗರ: ಮೋದಿ ಅಲೆ ಇಲ್ಲ, ಸಿದ್ದುಗೆ ಇದೆ ಬೆಲೆ




2009ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಚಾಮರಾಜನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನಡೆದ ಜಿದ್ದಾಜಿದ್ದಿನ ಪೈಪೋಟಿಯಿಂದಾಗಿ ಇಡೀ ರಾಜ್ಯದ ಗಮನ ಸೆಳೆದಿತ್ತು. ಈ ಬಾರಿಯೂ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ನಡುವೆ ಇರುವ ನೇರ ಹಣಾಹಣಿಯಿಂದ ಭಾರೀ ಕುತೂಹಲ ಪಡೆದಿದೆ.

ಹಾಲಿ ಸಂಸದ ಆರ್.ಧ್ರುವನಾರಾಯಣ್ ಅವರಿಗೆ ಕಾಂಗ್ರೆಸ್ ಪಕ್ಷ ಎರಡನೆ ಬಾರಿಗೆ ಸ್ಪರ್ಧಿಸಲು ಅವಕಾಶ ಕೊಟ್ಟಿದೆ. ಅಂತೆಯೇ ಕಳೆದ ಬಾರಿ ಧ್ರುವನಾರಾಯಣ್ ಅವರ ಎದುರಿಗೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ 4,002 ಮತಗಳ ಅಂತರದಿಂದ ಪರಾಭವಗೊಂಡಿದ್ದ ದಿವಂಗತ ಮಾಜಿ ರಾಜ್ಯಪಾಲ ಬಿ.ರಾಚಯ್ಯ ಅವರ ಪುತ್ರ ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ಈ ಬಾರಿಯೂ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿದ್ದಾರೆ.

ಉಳಿದಂತೆ ಕ್ಷೇತ್ರದಲ್ಲಿ ಬಿಎಸ್ಪಿ ಪಕ್ಷದಿಂದ ಸ್ವಾಭಿಮಾನಿ ವ್ಯಕ್ತಿತ್ವವುಳ್ಳ ಮುಳ್ಳೂರು ಶಿವಮಲ್ಲು, ಜೆಡಿಎಸ್ ಪಕ್ಷದಿಂದ ಮಾಜಿ ಸಚಿವ ಹೆಚ್.ಡಿ.ಕೋಟೆ ಶಿವಣ್ಣ, ಆಮ್ ಆದ್ಮಿ ಪಕ್ಷದಿಂದ ಸಂಪತ್‌ಕುಮಾರ್ ಸ್ಪರ್ಧಿಸುತ್ತಿದ್ದಾರೆ. ಇವಲ್ಲದೆ ಲೆಕ್ಕಕ್ಕೆ ಬಾರದ ಕಲವು ಅಭ್ಯರ್ಥಿಗಳೂ ಕಣದಲ್ಲಿದ್ದಾರೆ.

ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಹೆಚ್.ಡಿ.ಕೋಟೆ, ನಂಜನಗೂಡು, ವರುಣಾ, ಟಿ.ನರಸೀಪುರ, ಗುಂಡ್ಲುಪೇಟೆ, ಚಾಮರಾಜನಗರ, ಕೊಳ್ಳೇಗಾಲ ಹಾಗೂ ಹನೂರು ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಇದು ಪರಿಶಿಷ್ಟ ಜಾತಿಗೆ ಮೀಸಲು ಕ್ಷೇತ್ರವಾಗಿದ್ದು ಇಲ್ಲಿ 15 ಲಕ್ಷಕ್ಕೂ ಹೆಚ್ಚು ಮತದಾರರು ಇದ್ದಾರೆ.


ಹಿಂದಿನಿಂದಲೂ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿರುವ ಚಾಮರಾಜನಗರ ಲೋಕಸಭಾ ಕ್ಷೇತ್ರದ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಹೆಚ್.ಡಿ.ಕೋಟೆ ಹೊರತುಪಡಿಸಿ ಉಳಿದ ಏಳು ಕ್ಷೇತ್ರಗಳಲ್ಲಿ ಹೋದ ವರ್ಷ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಆಯ್ಕೆಯಾಗಿದ್ದಾರೆ. ಆ ಪೈಕಿ ವರುಣಾ ಕ್ಷೇತ್ರದಿಂದ ಗೆದ್ದ ಸಿದ್ದರಾಮಯ್ಯ ಪ್ರಸ್ತುತ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಅಷ್ಟೇ ಅಲ್ಲದೆ ನಂಜನಗೂಡು ಕ್ಷೇತ್ರ ದಿಂದ ಆಯ್ಕೆಗೊಂಡ ವಿ.ಶ್ರೀನಿವಾಸ್ ಪ್ರಸಾದ್, ಗುಂಡ್ಲುಪೇಟೆಯಿಂದ ಗೆಲುವು ಕಂಡ ಹೆಚ್.ಎಸ್.ಮಹದೇವಪ್ರಸಾದ್ ಹಾಗೂ ಟಿ.ನರಸೀಪುರ ಕ್ಷೇತ್ರದಿಂದ ಆರಿಸಿ ಬಂದ ಹೆಚ್.ಎಸ್.ಮಹದೇವಪ್ಪ ಅವರು ಈಗ ರಾಜ್ಯದ ಕ್ಯಾಬಿನೆಟ್ ದರ್ಜೆ ಸಚಿವರಾಗಿದ್ದಾರೆ. ಸಹಜವಾಗಿ ಯೇ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆರ್.ಧ್ರುವನಾರಾಯಣ್ ಗೆಲುವಿಗೆ ಇವರೆಲ್ಲರೂ ಕೈ ಜೋಡಿಸಲಿದ್ದಾರೆ. ಇದಕ್ಕೆ ಪೂರಕವಾಗಿ ಲೋಕಸಭಾ ಕ್ಷೇತ್ರದ ಪ್ರತಿಯೊಂದು ಭಾಗದಲ್ಲಿಯೂ ಸ್ಥಳೀಯ ಸಂಸ್ಥೆ ಚುನಾಯಿತ ಪ್ರತಿನಿಧಿಗಳಾದಿಯಾಗಿ ಬಹುತೇಕ ಕಾಂಗ್ರೆಸ್ ಕಾರ್ಯಕರ್ತರಿದ್ದು ಗೆಲುವು ಸುಲಭದ ಮಾತಾಗಿದೆ.





1999ನೇ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜನಗರ ಜಿಲ್ಲೆಯ ಸಂತೆಮರಳ್ಳಿ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಪಕ್ಷದ ಶಾಸಕರಾಗಿ ಎ.ಆರ್.ಕೃಷ್ಣಮೂರ್ತಿ ಆಯ್ಕೆಗೊಂಡಿದ್ದರು. ಆದರೆ 2004ನೇ ವಿಧಾನಸಭಾ ಚುನಾವಣೆಯಲ್ಲಿ ಎರಡನೆ ಬಾರಿಗೆ ಸ್ಪರ್ಧಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿದ್ದ ಧ್ರುವನಾರಾಯಣ್ ಅವರ ಎದುರು ಕೇವಲ ಒಂದು ಮತದ ಅಂತರದಿಂದ ಸೋಲನ್ನು ಅನುಭವಿಸಿದ್ದರು.


2008ರ ಚುನಾವಣೆ ವೇಳೆಗೆ ಕ್ಷೇತ್ರ ಮರುವಿಂಗಡನೆಯಾಗಿ ಸಂತೆಮರಳ್ಳಿ ಕ್ಷೇತ್ರ ಚಾಮರಾಜನಗರ ಮತ್ತು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಗಳಲ್ಲಿ ಹರಿದು ಹಂಚಿ ಹೋಯಿತು. ಆಗಲೂ ಕೃಷ್ಣಮೂರ್ತಿ ಮತ್ತು ಧ್ರುವನಾರಾಯಣ್ ಇಬ್ಬರೂ ಕೊಳ್ಳೇಗಾಲ ಕ್ಷೇತ್ರವನ್ನೇ ಆಯ್ಕೆಮಾಡಿಕೊಂಡು ಮತ್ತೆ ಪರಸ್ಪರ ಸ್ಪರ್ಧಿಸಿದರಾದರೂ ಗೆಲುವುವೆಂಬುದು ಎ.ಆರ್.ಕೃಷ್ಣಮೂರ್ತಿ ಅವರಿಗೆ ಒಲಿಯಲಿಲ್ಲ. 2009ನೇ ಚುನಾವಣೆ ಹೊತ್ತಿಗೆ ಕೃಷ್ಣಮೂರ್ತಿ ಬಿಜೆಪಿಗೆ ವಲಸೆ ಹೋಗಿದ್ದರು. ಆ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿ ಕೃಷ್ಣಮೂರ್ತಿ ಅವರ ವಿರುದ್ಧ ಸ್ಪರ್ಧಿಸಲು ಆಗ ಕೊಳ್ಳೇಗಾಲ ಶಾಸಕರಾಗಿದ್ದ ಧ್ರುವನಾರಾಯಣ್ ಅವರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ ಕಾಂಗ್ರೆಸ್ ಅಖಾಡಕ್ಕಿಳಿಸಿತ್ತು. ಆಗ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದುದರಿಂದ ಈ ಕ್ಷೇತ್ರವನ್ನು ವಶಪಡಿಸಿಕೊಳ್ಳಲು ಬಿಜೆಪಿ ನಾಯಕರು ಹರಸಾಹಸಪಟ್ಟಿದ್ದರು. ಆದರೂ ಇಲ್ಲಿನ ಮತದಾರರು 'ಕೈ' ಬೆಂಬಲಿಸಿ 3,69,968 ಮತಗಳನ್ನು ಧ್ರುವನಾರಾಯಣ್ ಅವರಿಗೆ ನೀಡಿ ಪಾರ್ಲಿಮೆಂಟ್‌ಗೆ ಕಳುಹಿಸಿದ್ದದ್ದು ಇತಿಹಾಸ. ಈಗ ಮತ್ತೆ ಕೃಷ್ಣಮೂರ್ತಿ ಮತ್ತು ಧ್ರುವನಾರಾಯಣ್ ಅವರ ನಡುವೆ ನಾಲ್ಕನೇ ಹಣಾಹಣಿ ನಡೆಯುತ್ತಿದೆ.



ಸೋಮಣ್ಣ


ಯಡಿಯೂರಪ್ಪ



ಎ.ಆರ್.ಕೃಷ್ಣಮೂರ್ತಿ


ಶಿವಣ್ಣ


ಶಿವಮಲ್ಲು


ಮಲ್ಲಿಕಾರ್ಜುನಪ್ಪ

ಧಾರವಾಡ: ಬಿಜೆಪಿಗೆ ಪಾಠ ಕಲಿಸಲು ಸಜ್ಜಾಗಿವೆ ಲಿಂಗಾಯತ ಮತಗಳು




ಬೇರೆಯುವರ ಹೆಗಲ ಮೇಲೆ ಬಂದೂಕು ಚಲಾಯಿಸಿಕೊಂಡು ಬರುತ್ತಿದ್ದ ಪ್ರಹ್ಲಾದ ಜೋಷಿ ಈ ಬಾರಿ ಅಕ್ಷರಶಃ ಕಂಗಾಲಾಗಿದ್ದಾನೆ. ಮೋದಿ ಹೆಸರಲ್ಲಿ ಈ ಸಲವೂ ಗದ್ದುಗೆ ಏರಿಬಿಡಬಹುದೆಂಬ ಆತನ ಭ್ರಮೆ ಚುನಾವಣೆ ಹತ್ತಿರವಾಗುತ್ತಿರುವಂತೆ ಗೌಣಕುಸುಮವಾಗುತ್ತಿದೆ. ಇದು ಸ್ವತಃ ಜೋಷಿಗೂ ಅರ್ಥವಾಗಿದೆ. ಹಾಗಾಗಿಯೇ ಒಂದು ಪಕ್ಷದ ರಾಜ್ಯಾಧ್ಯಕ್ಷನಾಗಿ ರಾಜ್ಯ ಸುತ್ತಿ ಪ್ರಚಾರ ಮಾಡಬೇಕಾದ ಆಸಾಮಿ ತನ್ನ ಗೆಲುವನ್ನು ದಕ್ಕಿಸಿಕೊಳ್ಳಲು ಕ್ಷೇತ್ರದಲ್ಲೇ ಸುತ್ತಿಸುತ್ತಿ ಸುಸ್ತಾಗುತ್ತಿದ್ದಾನೆ. ಒಂದು ಕಡೆ ಕಾಂಗ್ರೆಸ್‌ನಲ್ಲಿ ಹೆಚ್ಚುತ್ತಿರುವ ಒಗ್ಗಟ್ಟು ಜೋಷಿಯನ್ನು ಬೆದರಿಸುತ್ತಿದ್ದರೆ ಮತ್ತೊಂದೆಡೆ ಪದೇಪದೇ ಬಿಜೆಪಿ ಕೈ ಹಿಡಿಯುತ್ತಿದ್ದ ಲಿಂಗಾಯತ ಮತಗಳೆಲ್ಲ ಕಾಂಗ್ರೆಸ್‌ನತ್ತ ಮುಖ ಮಾಡಿರುವುದು ಜೋಷಿಯನ್ನು ಕಂಗೆಡಿಸಿದೆ.


ಕ್ಷೇತ್ರದಲ್ಲಿ ಏನಿಲ್ಲವೆಂದರೂ ನಾಲ್ಕು ಲಕ್ಷದಷ್ಟಿರುವ ಲಿಂಗಾಯತ ಮತಗಳು ಯಾವುದೇ ಅಭ್ಯರ್ಥಿಯ ಗೆಲುವಿನಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಆದರೆ ಬಿಜೆಪಿಗೆ ಮರಳಿ ಬಂದಮೇಲೆ ಅನಂತ್‌ಕುಮಾರ್ ಹಾಗೂ ಜೋಷಿಯಿಂದ ತನಗಾಗುತ್ತಿರುವ ಅವಮಾನದಿಂದ ಸ್ವತಃ ಯಡ್ಡಿಯೇ ಲಿಂಗಾಯತ ಮತಗಳು ಬಿಜೆಪಿಯಿಂದ ದೂರ ಸರಿಯುವಂತೆ ಗೇಮ್‌ಪ್ಲ್ಯಾನ್ ರೂಪಿಸಿದ್ದಾರೆ. ಇದು ಚುನಾವಣೆಗೂ ಮುನ್ನವೇ ಜೋಷಿ ಸೋಲನ್ನು ಸ್ಪಷ್ಟವಾಗಿಸಿದೆ.


ಇಲ್ಲಿ ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಕಾಂಗ್ರೆಸ್ ಅಭ್ಯರ್ಥಿ ವಿನಯ ಕುಲಕರ್ಣಿ ಕೂಡಾ ಲಿಂಗಾಯತ ಸಮಾಜದ ಒಳಪಂಗಡಗಳಲ್ಲಿ ಒಂದಾದ ಹಾಗೂ ಹೆಚ್ಚು ಮತಗಳನ್ನು ಹೊಂದಿರುವ ಪಂಚಮಸಾಲಿ ಜಾತಿಯವರು. ಯಡ್ಡಿಯ ಕಾರಣಕ್ಕೆ, ಬ್ರಾಹ್ಮಣನಾದರೂ ಸಾಲಿಡ್ಯಾಗಿ ಜೋಷಿಗೆ ಬೀಳುತ್ತಿದ್ದ ಲಿಂಗಾಯತ ಮತಗಳು ಈ ಬಾರಿ ಅದೇ ಯಡ್ಡಿಗಾದ ಅವಮಾನದ ಪ್ರತೀಕಾರವೆಂಬಂತೆ ವಿನಯ್ ಕುಲಕರ್ಣಿಗೆ ಹರಿಯುವುದು ಬಹುತೇಕ ಖಚಿತವಾಗಿದೆ. ಮೋದಿ ಹುಬ್ಬಳ್ಳಿ ರ‍್ಯಾಲಿಗೆ ಬಂದ ಸಮಯದಲ್ಲಿ ಯಡ್ಡಿಗೆ ವೇದಿಕೆ ಏರದಂತೆ ಅನಂತ್ ಕುಮಾರ್ ಹಾಗೂ ಜೋಷಿ ನೋಡಿಕೊಂಡಿದ್ದರು. ಆ ಕ್ಷಣ ಅದೆಲ್ಲವನ್ನೂ ನಿರ್ಲಕ್ಷಿಸಿದವರಂತಿದ್ದ ಯಡ್ಡಿ ಒಳಗಿಂದೊಳಗೇ ಕುದ್ದು ಹೋಗಿದ್ದಂತೂ ಸತ್ಯ. ಇದೇ ಕಾರಣಕ್ಕೆ ಹಿಂದಿನ ಬಿಜೆಪಿ ಸರ್ಕಾರಕ್ಕೆ ಆಸರೆಯಾಗಿದ್ದ ಲಿಂಗಾಯತ ಶಾಸಕರಾದ ನವಲಗುಂದದ ಶಂಕರ ಪಾಟೀಲ ಮುನೇನಕೊಪ್ಪ, ಕುಂದಗೋಳದ ಮಾಜಿ ಶಾಸಕ ಹಾಗೂ ಯಡ್ಡಿಯ ಬೀಗನಾದ ಎಸ್.ಬಿ. ಚಿಕ್ಕನಗೌಡ್ರ, ಸೀಮಾ ಮಸೂತಿ, ಪರಿಷತ್‌ಗೆ ರಾಜೀನಾಮೆ ಬಿಸಾಕಿದ್ದ ಮೋಹನ ಲಿಂಬಿಕಾಯಿ, ವಿಜಯ ಸಂಕೇಶ್ವರ ಇವರ ಕಿವಿ ಹಿಂಡಿದ ಯಡ್ಡಿ ಜೋಷಿ ವಿರುದ್ಧ ಸೇಡುತೀರಿಸಿಕೊಳ್ಳಲು ನಿರ್ಧರಿಸಿದರು.


ಜೋಷಿಯನ್ನು ಸೋಲಿಸಲು ಯಡ್ಡಿ ರಣತಂತ್ರ ರಚಿಸಿರುವುದಕ್ಕೆ ಮತ್ತೂ ಒಂದು ಕಾರಣವಿದೆ. ಅದೇನೆಂದರೆ, ಬಿಜೆಪಿ ಸೇರಿ ಇಷ್ಟು ದಿನವಾದರು ತನಗೆ ಸೂಕ್ತ ಸ್ಥಾನಮಾನ ನೀಡದೆ ಸತಾಯಿಸುತ್ತಿರುವ ಅನಂತ್‌ಕುಮಾರ್, ಅಕಸ್ಮಾತ್ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ತನಗೆ ಸಚಿವ ಸ್ಥಾನ ಸಿಗದಂತೆ ತಪ್ಪಿಸಲೂ ಹೇಸುವುದಿಲ್ಲ ಎಂಬುದು ಯಡ್ಡಿಗೆ ಖಾತ್ರಿಯಾಗಿದೆ. ಹೈಕಮಾಂಡ್‌ನಲ್ಲಿ ಗುರುತಿಸಿಕೊಂಡಿರುವ ಅನಂತ್‌ಗಂತೂ ಸಚಿವ ಸ್ಥಾನ ಸಿಕ್ಕೇ ಸಿಗುತ್ತೆ, ಅದರ ಜೊತೆಗೆ ರಾಜ್ಯಾಧ್ಯಕ್ಷ ಎನ್ನುವ ಕಾರಣಕ್ಕೆ ಜೋಷಿಗೂ ಒಂದು ಪೋರ್ಟ್‌ಫೋಲಿಯೊ ಕೊಡಿಸಿದನೆಂದರೆ ಕರ್ನಾಟಕದ ಕೋಟಾ ಖತಂ ಆಗಿ ತಾನು ದಿಲ್ಲಿ ದರ್ಬಾರ್ ಪ್ರವೇಶಿಸುವ ಕನಸೇ ಮಣ್ಣಾಗಿಬಿಡುತ್ತದೆ. ರಾಜ್ಯದಲ್ಲಿ ಸದ್ಯಕ್ಕೆ ಅನಂತ್‌ಕುಮಾರ್, ಜೋಷಿ, ಸದಾನಂದಗೌಡ (ಮಾಜಿ ಸಿಎಂ ಎಂಬ ಕಾರಣಕ್ಕೆ) ಹಾಗೂ ತನ್ನನ್ನು ಬಿಟ್ಟರೆ ಬೇರಾರಿಗೂ ಸಚಿವ ಸ್ಥಾನದ ಅರ್ಹತೆಯಾಗಲಿ, ಆಕಾಂಕ್ಷೆಯಾಗಲಿ ಇಲ್ಲವೆಂದು ಲೆಕ್ಕಹಾಕಿರುವ ಯಡ್ಡಿ, ಜೋಷಿಯನ್ನು ಸೋಲಿಸಿದರೆ ತನಗಾದ ಅವಮಾನಕ್ಕೆ ಸೇಡು ತೀರಿಸಿಕೊಳ್ಳುವ ಜೊತೆಗೆ ತನ್ನ ಸಚಿವ ಸ್ಥಾನವನ್ನೂ ಗ್ಯಾರಂಟಿ ಮಾಡಿಕೊಳ್ಳಬಹುದೆನ್ನುವುದು ಯಡ್ಡಿಯ ಗೇಮ್‌ಪ್ಲ್ಯಾನ್. ಸಚಿವ ಸ್ಥಾನ ಸಿಗದೆ ಹೋದರೂ ಕಡೇಪಕ್ಷ ರಾಜ್ಯಾಧ್ಯಕ್ಷ ಹುದ್ದೆಯನ್ನಾದರೂ ಕಿತ್ತುಕೊಳ್ಳಬಹುದೆನ್ನುವ ಆಲೋಚನೆಯೂ ಯಡ್ಡಿಗೆ ಇಲ್ಲದಿಲ್ಲ.




ಬಿಜೆಪಿಯ ಈ ಆಂತರಿಕ ಹಗೆಯಾಟದ ಹೊರತಾಗಿಯೂ ಈ ಬಾರಿ ಬಿಜೆಪಿ ಸೋಲಿಗೆ ಹಲವಾರು ಕಾರಣಗಳಿವೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಕಳೆದ ಬಿಜೆಪಿ ಅಧಿಕಾರದಲ್ಲಿ ನಡೆದ 156 ಕೋಟಿ ರಸ್ತೆ ಹಗರಣ, 136 ಕೋಟಿ ಕಸದ ಹಗರಣ, 10 ಕೋಟಿ ಬೀದಿ ದೀಪದ ಹಗರಣ, 8 ಕೋಟಿ ರೂಪಾಯಿಯ ಇಂದಿರಾ ಗಾಜಿನ ಮನೆ ಹಗರಣ ಮೊದಲಾದವು ಬಿಜೆಪಿಗೆ ಸಾಕಷ್ಟು ಡ್ಯಾಮೇಜ್ ಮಾಡಲು ಸಜ್ಜಾಗಿದೆ. ಪ್ರಚಾರಕ್ಕೆ ಹೋಗಿಬಂದಲ್ಲೆಲ್ಲ ಜೋಷಿ ಮತ್ತು ಜಗದೀಶ್ ಶೆಟ್ಟರ್‌ರನ್ನು ಧಾರವಾಡದ ಜನತೆ ಇವುಗಳ

























ಜೆಡಿಎಸ್-ಬಿಜೆಪಿ ಗೇಮ್ ಪ್ಲಾನ್

ಈ ಬಾರಿ ಜೆಡಿಎಸ್ ಮಾಜಿ ಸಚಿವ ಹೆಚ್.ಡಿ.ಕೋಟೆ ಶಿವಣ್ಣನವರನ್ನು ಕಣಕ್ಕಿಳಿಸುವ ಮೂಲಕ ಇಲ್ಲೊಂದು ತಂತ್ರ ಹೊಸೆದಿದೆ. ದಲಿತ ಸಮುದಾಯದ ಎಡಗೈ ಪಂಗಡಕ್ಕೆ ಸೇರಿರುವ ಶಿವಣ್ಣ 2009ನೇ ಲೋಕಸಭಾ ಚುನಾವಣೆಯಲ್ಲಿ ಇದೇ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ 1,06,876 ಮತಗಳನ್ನು ಪಡೆದು ಸೋತು ಮನೆ ಸೇರಿದ್ದರು. ಕಾಂಗ್ರೆಸ್‌ನ ಧ್ರುವನಾರಾಯಣ್ ಮತ್ತು ಬಿಜೆಪಿಯ ಕೃಷ್ಣಮೂರ್ತಿ ಇಬ್ಬರೂ ದಲಿತ ಸಮುದಾಯದ ಬಲಗೈ ಪಂಗಡಕ್ಕೆ ಸೇರಿರುವುದರಿಂದ ದಲಿತರ ಮತಗಳನ್ನು ವಿಭಜಿಸಿ, ಕಾಂಗ್ರೆಸ್‌ಗೆ ಸೆಡ್ಡು ಹೊಡೆದು, ತಮ್ಮ ವೈರಿ ಸಿದ್ದರಾಮಯ್ಯನವರಿಗೆ ಮುಖಭಂಗ ಮಾಡುವುದು ದೇವೇಗೌಡರ ಪ್ಲಾನ್.

ಈ ಮಧ್ಯೆ ಬಹುಜನ ಸಮಾಜ ಪಕ್ಷ (ಬಿಎಸ್ಪಿ) ಪ್ರತಿ ಬಾರಿಯಂತೆ ಈ ಬಾರಿಯೂ ಕೊಳ್ಳೇಗಾಲ ತಾಲೂಕಿನ ಶಿವಮಲ್ಲು ಅವರನ್ನು ಕಣಕ್ಕಿಳಿಸಿದೆ. 2009ರ ಲೋಕಸಭಾ ಚುನಾವಣೆಯಲ್ಲಿ ಬಿಎಸ್ಪಿ ಪಕ್ಷದಿಂದ ಸ್ಪರ್ಧಿಸಿದ್ದ ಪ್ರಭಾವಿ ಮುಖಂಡ ಎನ್.ಮಹೇಶ್ ಕೇವಲ 68,447 ಮತಗಳನ್ನು ಗಳಿಸಿದ್ದರು. ಈ ಬಾರಿ ಮಹೇಶ್ ಚುನಾವಣೆಯಲ್ಲಿ ಸ್ಪರ್ಧಿಸುವ ಮನಸ್ಸು ಮಾಡಿದರಾದರೂ ತಮಗೆ ಆರ್ಥಿಕವಾಗಿ ಶಕ್ತಿ ಸಾಲದು ಎಂದು ಹಣದ ಹೊಳೆ ಹರಿಸುವ ವ್ಯಕ್ತಿಯೊಬ್ಬರನ್ನು ಹುಡುಕಿದ್ದರು. ಆದರೆ ಅವರೇಕೋ ಕೊನೆ ಗಳಿಗೆಯಲ್ಲಿ ಒಲ್ಲೆ ಎಂದ ಕಾರಣ ಶಿವಮಲ್ಲುರವರನ್ನೆ ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ. ಆದರೆ ಕಳೆದ ಬಾರಿ ಮಹೇಶರಂತಹ ಪ್ರಭಾವಿ ಮತ್ತು ಪ್ರಾಮಾಣಿಕ ಅಭ್ಯರ್ಥಿ ಸೋತಿರುವಾಗ ಶಿವಮಲ್ಲು ಗೆಲ್ಲುವುದು ಸಾಧ್ಯವೇ ಇಲ್ಲ ಎಂಬಾ ವಾತಾವರಣ ಇಲ್ಲಿದೆ.

ಪಕ್ಷಾಂತರಿಗಳ ಬಲಾಬಲ

ಪ್ರಸಕ್ತ ಚುನಾವಣೆಯಲ್ಲಿ ಯಾವ ಮುಖಂಡ ಯಾವ ಪಕ್ಷದಲ್ಲಿ ಈಗ ಇದ್ದಾರೆ ಎಂಬುದೂ ಮುಖ್ಯವಾಗಿದೆ. ಈ ಜಿಲ್ಲೆಯಲ್ಲಿರುವ ಲಿಂಗಾಯತ ಮತಗಳನ್ನು ಗಳಿಸುವ ಚತುರಗಾರಿಕೆಯುಳ್ಳ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ. ಮಲ್ಲಿಕಾರ್ಜುನಪ್ಪ ಮತ್ತು ದಲಿತ ಸಮುದಾಯಕ್ಕೆ ಸೇರಿದ ಮಾಜಿ ಶಾಸಕ ಎಸ್.ಬಾಲರಾಜ್ ಅವರು ಇತ್ತೀಚೆಗೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಇವರೊಂದಿಗೆ ಇನ್ನೂ ಹಲವಾರು ಮುಖಂಡರು 'ಕೈ' ಬೆಂಬಲಿಸಿದ್ದಾರೆ.

ಹಾಗೆಯೇ ಎರಡು ವರ್ಷಗಳಿಂದ ರಾಜಕೀಯದಲ್ಲಿ ತಟಸ್ಥರಾಗಿದ್ದ ಮಾಜಿ ಸಚಿವ ಬೆಂಕಿ ಮಹದೇವು ಜೆಡಿಎಸ್ ಅನ್ನೂ, ಮಾಜಿ ಶಾಸಕ ಚಾಮರಾಜನಗರದ ಗುರುಸ್ವಾಮಿ ಕಾಂಗ್ರೆಸ್ ಪಕ್ಷವನ್ನೂ ತೊರೆದು ಬಿಜೆಪಿ ಸೇರಿದ್ದಾರೆ.

ಪ್ರತಿಷ್ಠೆಯ ಕಣ

ಚಾಮರಾಜನಗರ ಲೋಕಸಭಾ ಕ್ಷೇತ್ರದ ಈ ಬಾರಿಯ ಚುನಾವಣೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಪ್ರತಿಷ್ಠೆಯ ಕಣವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಮೂವರು ಪ್ರಭಾವಿ ಸಚಿವರನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಧ್ರುವನಾರಾಯಣ್ ಗೆಲ್ಲಿಯೇ ತೀರಬೇಕು.

ಅದೇರೀತಿ ಬಿಜೆಪಿ ನಾಯಕರು ಕೃಷ್ಣಮೂರ್ತಿಯವರನ್ನು ಗೆಲ್ಲಿಸುವ ಮೂಲಕ ನರಹಂತಕ ನರೇಂದ್ರ ಮೋದಿಯನ್ನು ಪ್ರಧಾನಿ ಹುದ್ದೆಗೆ ಏರಿಸಬೇಕಿದೆ. ಬಿಜೆಪಿ ಸೋತರೆ ಯಡಿಯೂರಪ್ಪ ಸೇರಿದಂತೆ ಜಿಲ್ಲೆಯ ಉಸ್ತುವಾರಿ ವಹಿಸಿರುವ ಮಾಜಿ ಸಚಿವ ವಿ.ಸೋಮಣ್ಣ, ಬೆಂಕಿ ಮಹದೇವು ಅವರಿಗೆ ತೀವ್ರ ಮುಖಭಂಗವಾಗಲಿದೆ.

ಮೋದಿ ಅಲೆಯಿಲ್ಲ, ಸಿದ್ದುಗಿದೆ ಬೆಲೆ

ಆದರೆ ಈ ಲೋಕಸಭಾ ಚುನಾವಣೆಯಲ್ಲಿ 'ಮೋದಿ ಅಲೆ' ಭಾರಿ ಪ್ರಮಾಣದಲ್ಲಿ ಕೆಲಸ ಮಾಡಲಿದೆ ಎಂಬ ಮಾತುಗಳು ಚಾಮರಾಜನಗರ ಕ್ಷೇತ್ರದ ಮಟ್ಟಿಗೆ ಶುದ್ಧ ಸುಳ್ಳಾಗಿದೆ. ದಲಿತರು, ಅಲ್ಪಸಂಖ್ಯಾತರು, ಲಿಂಗಾಯತರು, ಒಕ್ಕಲಿಗರು ಹಾಗೂ ಹಿಂದುಳಿದ ಸಮುದಾಯಗಳು ಇರುವ ಈ ಕ್ಷೇತ್ರದಲ್ಲಿ 'ಮೋದಿ ಅಭಿಮಾನ' ಇಲ್ಲವೇ ಇಲ್ಲ. ಜೊತೆಗೆ ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದಾಗ ಚೆಡ್ಡಿಗಳು ಮಾಡಿದ 'ಘನಂದಾರಿ' ಕೆಲಸಗಳು ಇಲ್ಲಿ ಆ ಪಕ್ಷಕ್ಕೆ ಏಟು ಕೊಡಲಿದೆ.

ಜೊತೆಗೆ ಇಲ್ಲಿ ಪಕ್ಷ ಅಥವಾ ಅಭ್ಯರ್ಥಿಗಳಿಗಿಂತ ಹೆಚ್ಚಾಗಿ ಜಾತಿ ಲೆಕ್ಕಾಚಾರದ ಮೇಲೆಯೇ ಮತಗಳು ಚಲಾವಣೆಗೊಳ್ಳುತ್ತವೆ. ಆ ನಿಟ್ಟಿನಲ್ಲಿ ನೋಡಿದರೆ, ಈ ಭಾಗದವರೇ ಆದ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದು ಅವರಿಗೆ ಇಲ್ಲಿ ಹೆಚ್ಚು ಬೆಲೆ ಇದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್‌ನ ಹೆಚ್ಚು ಅಭ್ಯರ್ಥಿಗಳು ಗೆಲುವು ಕಾಣದಿದ್ದರೆ ಸಿದ್ದರಾಮಯ್ಯನವರ ಪದವಿಗೆ ಕುತ್ತು ಬಂದರೂ ಬರಬಹುದೆಂದು ಇಲ್ಲಿನ ಅಹಿಂದ ವರ್ಗ ಈ ಬಾರಿ ಆದಷ್ಟು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕೆಂದು ನಿರ್ಧರಿಸಿದ್ದಾರೆ.

...ರಿತೇ ಪ್ರಶ್ನಿಸಿ ಹೈರಾಣ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಸಂಕಟಗಳ ನಡುವೆ ಕಪಿಸೇನಾಪತಿ ಮುತಾಲಿಕ್‌ನದು ಮತ್ತೊಂದು ವರಾತ. 'ಅನಂತ್‌ಕುಮಾರ್-ಜೋಷಿಯರನ್ನು ಸೋಲಿಸಿ; ಆದ್ರೆ ಮೋದಿಯನ್ನು ಗೆಲ್ಲಿಸಿ' ಎಂಬ ಒಂದಂಶದ ಘೋಷಣೆ ಮೂಲಕ ಮತದಾರರಲ್ಲಿ ಜೋಷಿ ಸೋಲಿಗೆ ಬೇಕಾದಷ್ಟು ಗೊಂದಲ ಸೃಷ್ಟಿಸುತ್ತಿದ್ದಾನೆ. ಜೋಷಿ ತನ್ನ ಆಪ್ತ ಕಾರ್ಪೊರೇಟರ್ ಈರೇಶ ಅಂಚಟಗೇರಿ ಮೂಲಕ ಪತ್ರಕರ್ತರಿಗೆ ಬಟ್ಟೆ, ವಾಚ್‌ಗಳ ಆಮಿಷವೊಡ್ಡಲು ಹೋಗಿ ಚುನಾವಣಾ ಆಯೋಗದಿಂದ ಮಂಗಳಾರತಿ ಮಾಡಿಸಿಕೊಂಡದ್ದೂ ಆತನ ಇಮೇಜನ್ನು ಡ್ಯಾಮೇಜ್ ಮಾಡಿದೆ.

ಎರಡು ಬಾರಿ ಬಿಜೆಪಿಯಿಂದ ಹು-ಧಾ ಮಹಾನಗರ ಪಾಲಿಕೆ ಸದಸ್ಯರಾಗಿದ್ದ ಅಜ್ಜಪ್ಪ ಬೆಂಡಿಗೇರಿ, ಶಿವನಗೌಡ ಹೊಸಮನಿ ಕಾಂಗ್ರೆಸ್ ಪಕ್ಷ ಸೇರಿರೋದು ಜೋಷಿ ಪಾಲಿಗೆ ಮತ್ತೊಂದು ಆಘಾತ. ನವಲಗುಂದದಲ್ಲಿ ಬಿಜೆಪಿಯ ಮಾಜಿ ಶಾಸಕ ಡಾ. ಶಿರಿಯಣ್ಣವರ ಆರ್.ಬಿ. ಕೂಡಾ ಕಾಂಗ್ರೆಸ್ ಪಕ್ಕೆಗೆ ಬಂದು ವಿನಯ್ ಕುಲಕರ್ಣಿಗೆ ಸಾಥ್ ನೀಡುತ್ತಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆಜೆಪಿಯಿಂದ ಸ್ಪರ್ಧಿಸಿ ಬಿಜೆಪಿ ಅಭ್ಯರ್ಥಿ ಶಂಕರಪಾಟೀಲ ಮುನೇನಕೊಪ್ಪನ ಸೋಲಿಗೆ ಕಾರಣನಾದದ್ದು ಇದೇ ಶಿರಿಯಣ್ಣವರ್. ಇನ್ನು ಕೆಜೆಪಿಯಿಂದ ಮರಳಿ ಬಿಜೆಪಿಗೆ ಬಂದಿರುವ ಕಲಘಟಗಿಯ ಎಂ. ನಿಂಬಣ್ಣವರ ಸೈಲೆಂಟ್ ಆಗಿ ಉಳಿದು ಜೋಷಿ ಸೋಲಿಗೆ ಸಮ್ಮತಿ ಸೂಚಿಸಿದ್ದಾನೆ.



ಸಂತೋಷ್ ಲಾಡ್

ಅಲ್ಲದೆ ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪ ಹಾಗೂ ಸಮಾಜ ಪರಿವರ್ತನೆ ವೇದಿಕೆಯ ಹಿರೇಮಠರು, ಜೋಷಿಯನ್ನು ಸೋಲಿಸುವಂತೆ ಮತದಾರರಿಗೆ ಬಹಿರಂಗ ಕರೆ ನೀಡಿರುವುದೂ ಕೂಡ ತಕ್ಕಮಟ್ಟಿಗೆ ಜೋಷಿಯ ನಿದ್ದೆಗೆಡಿಸಿದೆ.


ಇದ್ದುದರಲ್ಲಿ ಜೋಷಿಗಿರುವ ಒಂದೇ ಒಂದು ಪ್ಲಸ್‌ಪಾಯಿಂಟ್ ಎಂದರೆ ಜೆಡಿಎಸ್‌ನ ಒಳಒಪ್ಪಂದದ ಗಿರಾಕಿ ಬಸವರಾಜ ಹೊರಟ್ಟಿ ಮಾತ್ರ. ಜೋಷಿಗೆ ಸಾಥ್ ನೀಡುವ ಮಸ್ಯ ಒಪ್ಪಂದದಂತೆ ತನ್ನ ಪಕ್ಷದಿಂದ ನಾಮಕಾವಸ್ತೆಗೆ ಹನುಮಂತ ಬಂಕಾಪೂರ ಎಂಬ ದಲಿತ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು ... ಮಾಡಿರುವ ಹೊರಟ್ಟಿ ಆ ಬಡಪಾಯಿ ... ಸಲ್ಲಿಸುವ ವೇಳೆಯಲ್ಲೇ ನಾಪತ್ತೆಯಾಗಿ ತನ್ನ ... ಚಹರಾ ತೋರಿಸಿದ್ದ. ಇಷ್ಟರ ಹೊರತಾಗಿ ಹೊರಟ್ಟಿ ... ಅಂತಹ ಮಹತ್ವದ ಸಹಾಯವೇನೂ ಜೋಷಿಗೆ ಆಗಲಿಕ್ಕಿಲ್ಲ. ಯಾಕೆಂದರೆ ಹೊರಟ್ಟಿಯ ಸರ್ವಾಧಿಕಾರದಿಂದ ರೋಸಿಹೋಗಿರುವ ಕಾರ್ಯಕರ್ತರು ಕಾಂಗ್ರೆಸ್‌ನತ್ತ ಮುಖಮಾಡುತ್ತಿದ್ದಾರೆ. ಇತ್ತೀಚೆಗಷ್ಟೆ ಪಿ.ಸಿ. ಸಿದ್ದನಗೌಡ್ರ ನೇತೃತ್ವದಲ್ಲಿ ಕಲಘಟಗಿಯ ಇಡೀ ತಾಲ್ಲೂಕಾ ಜೆಡಿಎಸ್ ಘಟಕ ಕಾಂಗ್ರೆಸ್ ಪಕ್ಷ ಸೇರಿತ್ತು.


ಇತ್ತ ಸೋಲಿನಿಂದ ಜೋಷಿಯ ಕಮಲ ವಿಲವಿಲ ಎನ್ನುತ್ತಿದ್ದರೆ ಅತ್ತ ಕಾಂಗ್ರೆಸ್ ಪಾಳಯದಲ್ಲಿ ಐಕ್ಯತೆಯ ಮಂತ್ರ ಗಟ್ಟಿಯಾಗುತ್ತಿದೆ. ಈ ಹಿಂದೆ ಪಕ್ಷದಲ್ಲಿದ್ದ ಆಂತರಿಕ ಕಚ್ಚಾಟದಿಂದ ಸೋಲು ಕಾಣುತ್ತಿದ್ದ ಕಾಂಗ್ರೆಸ್ ಈ ಬಾರಿ ವಿನಯ ಕುಲಕರ್ಣಿಯನ್ನು ಅಭ್ಯರ್ಥಿಯಾಗಿಸುವ ಮೂಲಕ ಎಲ್ಲರನ್ನೂ ಒಗ್ಗೂಡಿಸುವ ಪ್ರಯತ್ನ ಮಾಡಿದೆ. ಸಿದ್ದು ಫರ್ಮಾನಿನಂತೆ ಮೂರನೇ ನಿರ್ಣಾಯಕ ಮತಗಳಾದ ಕುರುಬ ಸಮಾಜದ ಮತಗಳನ್ನು ಕೈ ಪಾಳಯಕ್ಕೆ ತರುವಲ್ಲಿ ಶಾಸಕ (ಕುಂದಗೋಳ) ಸಿ.ಎಸ್. ಶಿವಳ್ಳಿ ತಲ್ಲೀನನಾಗಿದ್ದರೆ ಜಿ.ಪರಮೇಶ್ವರ್ ಆಣತಿಯಂತೆ ದಲಿತ ಮತಗಳ ಕ್ರೋಢೀಕರಣದಲ್ಲಿ ಶಾಸಕ ದಲಿತ ಪ್ರಸಾದ್ ಅಬ್ಬಯ್ಯ ಸಕ್ರಿಯವಾಗಿದ್ದಾರೆ. ನವಲಗುಂದದಲ್ಲಿ ಕುರುಬ ಸಮುದಾಯದ ಮಾಜಿ ಸಚಿವ ಕೆ.ಎನ್.ಗಡ್ಡಿ ತುಂಬಾ ಆಕ್ಟಿವ್ ಆಗಿದ್ದಾರೆ. ಶಾಸಕ ಮತ್ತು ಮಾಜಿ ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ಲಿಂಗಾಯತ ಮತ ಬೇಟೆಗೆ ವೀರಣ್ಣ ಮತ್ತಿಕಟ್ಟಿ, ಡಾ. ಮಹೇಶ್ ನಾಲವಾಡ, ಕೆಪಿಸಿಸಿ ರಾಜ್ಯ ಸರ್ಕಾರದ ಕಾರ್ಯದರ್ಶಿ ರಾಜಶೇಖರ ಮೆಣಸಿನಕಾಯಿ, ಎಂಎಲ್‌ಸಿ ನಾಗರಾಜ ಛಬ್ಬಿ, ಬಂಡೆಪ್ಪ ಕಾಶಪ್ಪನವರ್, ಶಿವಾನಂದ ಪಾಟೀಲ್ ಮೊದಲಾದವರು ಕಾರ್ಯತಂತ್ರ ರೂಪಿಸುತ್ತಿದ್ದಾರೆ. ಇನ್ನು ಮುಸ್ಲಿಂ ಮತಗಳನ್ನು ಒಂದೆಡೆ ತರುವಲ್ಲಿ ಮಾಜಿ ಸಚಿವ ಎ.ಎಂ. ಹಿಂಡಸಗೇರಿ, ಜಬ್ಬಾರಖಾನ ಹೊನ್ನಳ್ಳಿ, ಮಾಜಿ ಶಾಸಕ ಅಜ್ಜಂಪೀರ ಖಾದ್ರಿ, ಧಾರವಾಡದ ಅಂಜುಮಾನ್ ಅಧ್ಯಕ್ಷ ಇಸ್ಮಾಯಿಲ್ ತಮಾಟಗಾರ, ಹುಬ್ಬಳ್ಳಿ ಮಾಜಿ ಅಧ್ಯಕ್ಷ ಈಸೂಫ ಸುವಣೂರ, ಸಹ ಕಾರ್ಯದರ್ಶಿ ಅನ್ವರ ಮುಧೋಳ ಶ್ರಮ ವಹಿಸುತ್ತಿದ್ದಾರೆ. ಇವರೆಲ್ಲರಿಗೆ ಪರಿಷತ್ ಸದಸ್ಯ ಶ್ರೀನಿವಾಸ ಮಾನೆಯ ಸಹಕಾರವೂ ಇದೆ.

ಅಂತೂ ಜೋಷಿಯನ್ನು ಸೋಲಿಸಲು ಆಂತರಿಕವಾಗಿ ಮತ್ತು ಬಾಹ್ಯವಾಗಿ ನಡೆದಿರುವ ರಣತಂತ್ರದಿಂದ ಹಾರಾಗಿ ವಿಜಯದ ನಗೆ ಬೀರುವುದು ಜೋಷಿಗೆ ಸಾಧ್ಯವೇ ಆಗದ ಮಾತು.

● ಹುಬ್ಬಳ್ಳಿಯಾಂವ್

ಹಾವೇರಿ: ಅಪ್ಪ ಉದಾಸಿಗೆ ಆದದ್ದೇ ಮರಿ ಉದಾಸಿಗೂ ಕಾದಿದೆ







ಅವರು ತಮ್ಮ ಮುಖದ ಮೇಲಿನ ಭರವಸೆಯನ್ನೇ ಕಳೆದುಕೊಂಡಿದ್ದಾರೆ. ಅವರಿಗೆ ತಾವು ಮಾಡಿರುವ ಕೆಲಸವೇನು ಎಂಬುದೇ ತಿಳಿದಿಲ್ಲ, ಹಾಗಾಗಿಯೇ 'ನಮ್ಮ ಮುಖಕ್ಕೆ ಮತ ಹಾಕಬೇಡಿ. ಮೋದಿಗೆ ಮತ ನೀಡಿ' ಎಂಬ ಅಸ್ತ್ರವೇ ಹಾವೇರಿಯಲ್ಲಿ ರಿಂಗಣಿ ಸುತ್ತಿದೆ. ಅಪ್ಪ ಸಿ.ಎಂ.ಉದಾಸಿಯು ಸೋಲಿನ ಹಾದಿಯಲ್ಲೇ ಮಗ ಶಿವಕುಮಾರ ಉದಾಸಿ ಕೂಡ ನಡೆಯುತ್ತಿದ್ದಾರೆ. ಈ ಸಲ ಕಾಂಗ್ರೆಸ್‌ನ ಸಲೀಂ ಅಹ್ಮದ್ ಗೆಲುವಿನ ನಗೆ ಬೀರುವ ಸಾಧ್ಯತೆಗಳಿವೆ.

ಇಷ್ಟು ದಿನ ಶಿವಕುಮಾರ ಉದಾಸಿ ಹಗಲಿನಲ್ಲಿ ಭಾರತೀಯ ಜನತಾ ಪಕ್ಷದ ಕಾರ್ಯವನ್ನೂ, ರಾತ್ರಿಯಲ್ಲಿ ಕರ್ನಾಟಕ ಜನತಾ ಪಕ್ಷದ ಕೆಲಸವನ್ನೂ ಮಾಡುತ್ತಾ ಮುನ್ನಡೆದಿದ್ದರು. ಸಂಸತ್ತಿಗೆ ತಾನು ಗೆದ್ದು ಬಂದ ಕ್ಷೇತ್ರ ಹಾವೇರಿ ಎಂಬುದನ್ನು ಮರೆತಿದ್ದ ಶಿವಕುಮಾರ ಉದಾಸಿ, ಬರೀ ಬೆಂಗಳೂರು, ದೆಹಲಿ, ಕೋಲ್ಕತ್ತಾದಲ್ಲೇ ಹೆಚ್ಚು ಸಮಯವನ್ನು ಕಳೆದು ತಮ್ಮ ಅಭಿವೃದ್ಧಿಯನ್ನ ಮಾಡಿಕೊಂಡಿದ್ದರು. ಇದು ಕ್ಷೇತ್ರದ ಜನರ ಗಮನಕ್ಕೆ ಬಂದಿದೆ ಎಂಬ ಸತ್ಯ ಕೂಡ ಗೊತ್ತಿಲ್ಲದ ರೀತಿಯಲ್ಲಿ ಈಗ ಶಿವಕುಮಾರ್ ಮತ ಕೇಳುತ್ತಿದ್ದಾರೆ.


"ಲೋಕಸಭೆಯಲ್ಲಿ ಹೆಚ್ಚಿಗೆ ಪ್ರಶ್ನೆ ಕೇಳಿದ್ದು ನನ್ನ



ಸಲೀಂ ಅಹ್ಮದ್



ಕೋಳಿವಾಡ



ಹೆಚ್.ಕೆ.ಪಾಟೀಲ್

ದೊಡ್ಡಸ್ತಿಕೆ. ನಾನೇನು ಗ್ರಾಮ ಪಂಚಾಯತಿಯಲ್ಲಿ ಕೂತು ಅಧಿಕಾರ ನಡೆಸಬೇಕಾ?" ಎಂಬ ಪ್ರಶ್ನೆಗಳನ್ನ ಮುಂದಿಟ್ಟುಕೊಂಡು ಮತ ಕೇಳುತ್ತಿರುವ ಶಿವಕುಮಾರ ಉದಾಸಿ, ತಾನು ಎಷ್ಟು ಗ್ರಾಮ ಪಂಚಾಯತಿಗಳಿಗೆ ತೆರಳಿ ಅಲ್ಲಿನ ಸಮಸ್ಯೆಗಳನ್ನು ಆಲಿಸಿದ್ದಾರೆ ಎಂಬ ಪ್ರಶ್ನೆ ಮೂಡುವುದೇ ಇಲ್ಲ, ಜನರ ಬಳಿ ಹೋದಾಗಲೇ ತಾನೇ ಅವರ ತೊಂದರೆಗಳನ್ನು ಅರಿಯಲು ಸಾಧ್ಯ? ಪ್ರಶ್ನೆಗಳನ್ನು ಕೇಳಿದರೆ ಉತ್ತರ ಸಿಗುತ್ತವೆ ಹೊರತು ಗ್ರಾಮ ಮಟ್ಟದಲ್ಲಿನ ಸಮಸ್ಯೆಗಳು ಇತ್ಯರ್ಥ ಆಗುವುದಿಲ್ಲ ಎಂಬುದೂ ಆತನಿಗೆ ಗೊತ್ತಿರುವಂತಿಲ್ಲ.

ಮಾಜಿ ಸಚಿವ ಸಿ.ಎಂ.ಉದಾಸಿ ಕೆಜೆಪಿ ಬಿಟ್ಟು ಬಿಜೆಪಿಗೆ ಬಂದಿದ್ದಾರೆ. ಅವರು ಈ ಹಿಂದೆ ಬಿಜೆಪಿಯಿಂದ ಗೆದ್ದಿದ್ದರೂ ಕೆಜೆಪಿಗೆ ಹೋಗಿದ್ದರು. ಆದರೆ ಅಲ್ಲಿಂದ ಸೋತು ಮತ್ತೀಗ ಬಿಜೆಪಿಗೆ ಬಂದಿದ್ದಾರೆ. ಆದರೆ, ಮಗ ಶಿವಕುಮಾರನನ್ನ ಭಾರತೀಯ ಜನತಾ ಪಕ್ಷದಿಂದ ಹೊರಗೆ ಬರುವಂತೆ ಅವರು ಕೋರಲಿಲ್ಲ. ಏಕೆಂದರೆ, ತನ್ನ ಅಧಿಕಾರ ಹೋದರೂ ಮಗನ ಅಧಿಕಾರ ಇರಲಿ ಎಂಬ ನೀಚ ರಾಜಕಾರಣ ಅವರಲ್ಲಿತ್ತು, ಅದೇ ಕಾರಣಕ್ಕೆ ಅಪ್ಪ ಉದಾಸಿಯನ್ನ ಕ್ಷೇತ್ರದ ಜನತೆ ಮಕಾಡೆ ಮಲಗಿಸಿದ್ದರು. ಆದರೆ, ತನ್ನ ಸ್ಥಿತಿ ಮಗನಿಗೆ ಬರಬಾರದು ಎಂಬ ಕಾರಣಕ್ಕೆ ಮತ್ತೆ ಫೀಲ್ಡಿಗೆ ಇಳಿದು ಭಾಷಣ ಆರಂಭಿಸಿದ್ದಾರೆ ಮಾಜಿ ಸಚಿವ ಉದಾಸಿ.

ಕ್ಷೇತ್ರದಲ್ಲಿ ಲಿಂಗಾಯತರ ಮತಗಳೇ ನಿರ್ಣಾಯಕ ಎಂಬುದನ್ನೇ ಉಪಯೋಗ ಮಾಡಿಕೊಂಡು ಬಂದಿದ್ದ ಉದಾಸಿ ಫ್ಯಾಮಿಲಿ, ಈ ಬಾರಿಯೂ ಅದೇ ಲೆಕ್ಕಚಾರದಲ್ಲಿ ಗೆಲುವು ತಮ್ಮದೇ ಎನ್ನುತ್ತಿದ್ದಾರೆ. ಆದರೆ ಇಡೀ ಲಿಂಗಾಯತ ಸಮುದಾಯ ಇವರ 'ಕೆಂತಿ' ಏನು ಎಂಬುದನ್ನ ಅರ್ಥಮಾಡಿಕೊಂಡಿದೆ. ಅದರ ಪರಿಣಾಮವನ್ನ ಅವರೀಗಾಗಲೇ ಒಂದು ಬಾರಿ ತೋರಿಸಿಯಾಗಿದೆ. ಅದನ್ನೇ ಮಗನ ವಿಷಯದಲ್ಲಿ ಮಾಡುವ ಇರಾದೆಯನ್ನ ಲಿಂಗಾಯತ ಸಮುದಾಯ ಮಾಡಿಕೊಂಡಿದೆ. ಬರೀ ಹಣ ಬಲದಿಂದಲೇ ಗೆಲ್ಲುವ ವಿಶ್ವಾಸ ಹೊಂದಿರುವ ಶಿವಕುಮಾರಗೆ ಹಣದಿಂದಲೇ ಎಲ್ಲವೂ ಸಾಧ್ಯವಿಲ್ಲ ಎಂಬುದನ್ನ ಸಾಬೀತು ಪಡಿಸಲು ಜನ ತುದಿಗಾಲ ಮೇಲೆ ನಿಂತಿದ್ದಾರೆ.

ಹಾಗೆ ನೋಡಿದರೆ ತಂದೆ-ಮಕ್ಕಳ ರಾಜಕೀಯವನ್ನ ವಿರೋಧಿಸುತ್ತಲೇ ಬಿಜೆಪಿಗೆ ಬಂದಿದ್ದ ಉದಾಸಿ, ತಮ್ಮ ಕ್ಷೇತ್ರದಲ್ಲಿಯೂ ಮಾಡಿದ್ದು ತಂದೆ-ಮಕ್ಕಳ ಜುಗಲಬಂಧಿಯನ್ನೇ. ಉದಾಸಿ ಚೂರಾದರೂ ತಮ್ಮ ಹೇಳಿಕೆಗಳನ್ನ ನೆನಪಿನಲ್ಲಿಟ್ಟುಕೊಂಡು ಬೇರೆಯವರಿಗೆ ಅವಕಾಶ ಮಾಡಿಕೊಡಿ ಎಂದಿದ್ದರೇ, ಅದರ ಸ್ಥಿತಿಯೇ ಬೇರೆಯಾಗಿರುತ್ತಿತ್ತು, ಆದರೆ, ಮಗನ ಮೇಲಿನ ಪ್ರೀತಿ ಹೇಗೆ ಕಡಿಮೆಯಾದೀತು?

ಕಳೆದ ಚುನಾವಣೆಯ ಸಮಯದಲ್ಲಿ ರಾಜ್ಯ ಭಾರತೀಯ ಜನತಾ ಪಕ್ಷದ ಹಿಡಿತದಲ್ಲಿತ್ತು, ಅಷ್ಟೇ ಅಲ್ಲ, ಹಾವೇರಿ, ಬ್ಯಾಡಗಿ, ರಾಣೆಬೆನ್ನೂರು, ಹಾನಗಲ್ಲ, ಗದಗ, ಶಿರಹಟ್ಟಿ, ರೋಣ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳೇ ಶಾಸಕರಾಗಿದ್ದರು. ಹಿರೇಕೆರೂರು ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್ ಇತ್ತು. ಈ ಬಾರಿ ಅದು ವಿರುದ್ಧವಾಗಿದೆ. ಹಿರೇಕೆರೂರು ಕ್ಷೇತ್ರವನ್ನ ಹೊರತುಪಡಿಸಿದರೆ ಇನ್ನುಳಿದ ಎಲ್ಲ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಶಾಸಕರಿದ್ದಾರೆ. ಮೊನ್ನೆ ಕಾಂಗ್ರೆಸ್‌ಗೆ ಹಿರೇಕೆರೂರಿನ ಮಾಜಿ ಶಾಸಕ ಬನ್ನಿಕೋಡ ಬಂದಿದ್ದಾರೆ. ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿಯಾಗಿದ್ದ ಶಂಕರ ಕೂಡ ರಾಣೆಬೆನ್ನೂರಿನಲ್ಲಿ ಸಲೀಂ ಅಹ್ಮದರಿಗೆ ಬೆಂಬಲ ನೀಡಿದ್ದಾರೆ. ಕಳೆದ ಚುನಾವಣೆಯಲ್ಲಿಯೇ 3,42,373 ಮತಗಳನ್ನು ಪಡೆದಿದ್ದ ಸಲೀಂ ಅಹ್ಮದರಿಗೆ ಈ ಬಾರೀ ಐದು ಲಕ್ಷ ಮತಗಳು ಬೀಳಲಿವೆ ಎಂಬುದು ಎಲ್ಲರ ಅಭಿಪ್ರಾಯ.

ತಿಂಗಳ ಹಿಂದೆಯೇ ರೊಕ್ಕಸ್ತ ಶಿವಕುಮಾರ ಉದಾಸಿಯ ಹೆಸರನ್ನ ಭಾರತೀಯ ಜನತಾ ಪಕ್ಷ ತನ್ನ ಅಭ್ಯರ್ಥಿ ಎಂದು ಘೋಷಣೆ ಮಾಡಿತ್ತು, ಅದೇ ಕಾರಣದಿಂದಲೇ ಚೂರು ಹೆಚ್ಚು ಪ್ರಚಾರ ಮಾಡುವ ಅವಕಾಶ ಅವರಿಗೆ ಸಿಕ್ಕಿದೆ ಎಂಬುದನ್ನ ಹೊರತುಪಡಿಸಿದರೆ ಇಡೀ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ವಾತಾವರಣ ಚೆನ್ನಾಗಿದೆ. ಎಲ್ಲ ಕಾಂಗ್ರೆಸ್ ಶಾಸಕರು ತಮ್ಮಿಂದಾದ ಕಾರ್ಯವನ್ನ ಚೆನ್ನಾಗಿಯೇ ಮಾಡುತ್ತಿದ್ದಾರೆ. ರೋಣದ ಗೌಡರಂತೂ ಎಲ್ಲವನ್ನೂ ತಲೆ ಮೇಲೆ ಹೊತ್ತುಕೊಂಡು ಮುನ್ನಡೆದಿದ್ದಾರೆ..

ಈ ಎಲ್ಲ ಅಂಶಗಳನ್ನು ಗಮನಿಸಿದರೆ ಸಲೀಂ ಅಹ್ಮದ್ ಲೋಕಸಭೆ ಸದಸ್ಯರಾಗುವ ಎಲ್ಲಾ ಸಾಧ್ಯತೆಗಳು ಗೋಚರಿಸುತ್ತಿವೆ.

-ವಿನಯ್

ಹಾವೇರಿಯಲ್ಲಿ ಜಾತಿವಾರು ಲೆಕ್ಕಾಚಾರ


ಬಣಜಿಗ ಲಿಂಗಾಯತ	1.80 ಲಕ್ಷ
ಪಂಚಮಸಾಲಿ ಲಿಂಗಾಯತ	1.65 ಲಕ್ಷ
ಸಾದರ ಲಿಂಗಾಯತ	1.77 ಲಕ್ಷ
ಮುಸ್ಲಿಂ	2.65 ಲಕ್ಷ
ಕುರುಬ	1.85 ಲಕ್ಷ
ಪರಿಶಿಷ್ಟ ಜಾತಿ	1.53ಲಕ್ಷ
ಪರಿಶಿಷ್ಟ ಪಂಗಡ	1.77 ಲಕ್ಷ
ಬ್ರಾಹ್ಮಣ	75 ಸಾವಿರ
ಜೈನ	33 ಸಾವಿರ
ಕ್ರಿಶ್ಚಿಯನ್	19 ಸಾವಿರ

ಪಾಟೀಲರು ಪ್ರಚಾರದಿಂದ ದೂರ

ಸಚಿವ ಎಚ್.ಕೆ.ಪಾಟೀಲ ಇನ್ನೂ ತಮ್ಮ ಬಿಗುಮಾನವನ್ನ ಬಿಡುತ್ತಿಲ್ಲ, ಇದು ಕ್ಷೇತ್ರದ ಜನರಲ್ಲಿ ಅಸಮಾಧಾನ ಮೂಡಿಸುತ್ತಿದೆ. ತಮ್ಮ ಸಹೋದರನಿಗೆ ಟಿಕೆಟ್ ಸಿಕ್ಕಿಲ್ಲ ಎಂಬುದನ್ನೇ ನೆಪ ಮಾಡಿಕೊಂಡು ಪಾಟೀಲರು ಪ್ರಚಾರದಿಂದ ದೂರ ಉಳಿದಿದ್ದಾರೆ.

'ನಾಮ್‌ಕಾವಾಸ್ತೆ' ಪ್ರಚಾರ ಬಿಟ್ಟು, ಕಾಂಗ್ರೆಸ್‌ನ ಋಣದಲ್ಲಿರುವ ಎಚ್.ಕೆ.ಪಾಟೀಲರು ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಮುಂದಾಗಬೇಕು. ತಮ್ಮ ಹಿಂಬಾಲಕರಿಗೆ ಕಾಂಗ್ರೆಸ್ ಅಭ್ಯರ್ಥಿಯ ಪರ ಪ್ರಚಾರ ಮಾಡುವಂತೆ ಹೇಳಬೇಕು.

ಇಲ್ಲದಿದ್ದರೆ ಸಲೀಂ ಅಹ್ಮದ್ ಸೋಲಿಗೆ ಕಾಂಗ್ರೆಸ್ ಪಕ್ಷದವರೇ ಒಂದಿಷ್ಟಾದರೂ ಕಾರಣವಾಗುತ್ತಾರೆ.




ಉಡುಪಿ-ಚಿಕ್ಕಮಗಳೂರು

ಜೆಪಿ ಜಯದತ್ತ; ಶೋಭಾ ಮನೆಯತ್ತ!!

ಉಡುಪಿ-ಚಿಕ್ಕಮಗಳೂರು ಲೋಕಸಭೆ ಚುನಾವಣೆ ರಣರಂಗ ಅದ್ವೇಗೆ ಹದಗೊಂಡಿದೆ ಎಂದರೆ, ಕಾಂಗ್ರೆಸ್ ಕ್ಯಾಂಡಿಡೇಟ್-ಜನಾನುರಾಗಿ ಜಯಪ್ರಕಾಶ್ ಹೆಗ್ಡೆ ಈಗಾಗಲೇ ಪಾರ್ಲಿಮೆಂಟ್ ಕದ ತಟ್ಟುತ್ತಿದ್ದಾರೆ; ಬಿಜೆಪಿಯ ವಲಸೆ ವರಸೆಗಾರ್ತಿ ಶೋಭಾ ಕರಂದ್ಲಾಜೆಗೆ 'ಯಜಮಾನ' ಯಡ್ಡಿ ಮಹಾತ್ಮನ ಅಂತಃಪುರದ ಪರಿಚಾರಿಕೆಯೇ ಕಾಯಂ ಆದಂತಿದೆ. ಯಡ್ಡಿ ಯುಗದಲ್ಲಿ ಕೂಡಿಸಿಟ್ಟ ಕಪ್ಪು ಕಾಸಿನ ಗಂಟು ಶೋಭಾ ಅದೆಷ್ಟೇ ಬಿಚ್ಚಿದರೂ ಕಾಂಗ್ರೆಸ್‌ನ ಜೆಪಿಯ ಸರಳ-ಸಜ್ಜನ ಮತ್ತು ಜನಸ್ನೇಹಿ ವರ್ಚಸ್ಸಿನ ಮುಂದೆ ವರ್ಕ್‌ಔಟ್ ಆಗುತ್ತಲೇ ಇಲ್ಲ. ಶೋಭಾಳನ್ನು ಕ್ಷೇತ್ರದ ಜನರು ಊರು ಬಿಟ್ಟು ಬಂದ ಊಸರವಳ್ಳಿ ಎಂಬಂತೆ ನೋಡುತ್ತಿರುವುದು ಆಕೆಯ ದೇಶಾವರಿ ನಗೆಯಲ್ಲಿ ಒಂಥರಾ ನೋವು ಬೆರೆಸಿಬಿಟ್ಟಿದೆ.

ಬಾಯಿ ಬಡುಕಿ ಬಿಜೆಪಿ ಹುರಿಯಾಳು ಹೆಚ್ಚೆಚ್ಚು ಅರಚಾಡಿದಂತೆ ಹೆಚ್ಚೆಚ್ಚು ಅನುಕೂಲ ಜೆಪಿಗಾಗುತ್ತಿದೆ. ಈ ಶೋಭಾ ಪಕ್ಕಾ ಗುಳೆ ಗಿರಾಕಿಯಾದರೆ ಜೆಪಿ ಜನ ಬಳಕೆಯ ಶುದ್ಧ ಮಣ್ಣಿನ ಮಗ. ಶೋಭಾರ ನಗು-




ನಗುತ್ತಲೇ ಹಿಂದೂತ್ವದ ಹಿಕಮತ್ತು ಮಾಡುವ ಗುಣ-ಧರ್ಮ, ಮಂತ್ರಿಯಾಗಿ ಮಾಡಿದ ಕಂತ್ರಿ ಕೆಲಸ, ಒಣ ರಾಜಕಾರಣ ಆಕೆಗೆ ಹೊಸ ಕ್ಷೇತ್ರದಲ್ಲಿ ಕಿಮ್ಮತ್ತು ಸಿಗದಂತೆ ಮಾಡಿದೆ. ರಾಜ್ಯ ಬಿಜೆಪಿಯ ಸರ್ವಶಕ್ತ ಮಹಿಳಾ ನಾಯಕಮಣಿ ತಾನೆಂಬ ಅಹಮಿಕೆಯ ಶೋಭಾಗ್ಯಾಕೋ ಕರಾವಳಿಯ ಉಡುಪಿ ಏರಿಯಾ ಮತ್ತು ಮಲೆನಾಡಿನ ಚಿಕ್ಕಮಗಳೂರು ಭಾಗದಲ್ಲಿ ನೆಲೆ-ಬೆಲೆಯೇ ಸಿಕ್ಕಿಲ್ಲ. ಮೋದಿ ಮೇನಿಯಾದಲ್ಲಿ ದಿಲ್ಲಿಗೆ ನೆಗೆಯುವ ಕನಸು ಕಾಣುತ್ತಿದ್ದ ಈ ಸ್ವಯಂಘೋಷಿತ 'ಉಕ್ಕಿನ ಚೆಡ್ಡಿ ಚತುರೆ'ಗೆ ದಿನಗಳೆದಂತೆ ಭ್ರಮನಿರಸನ ಆಗುತ್ತಿದೆ.

ಶೋಭಾ-ಯಡ್ಡಿಗೆ ಎಂದಾದರೂ ಪಾಸಿಟಿವ್ ಮತಗಳು ಸಿಗಲು ಸಾಧ್ಯವಾ? ಈಕೆ ಶಾಸಕಿ-ಮಂತ್ರಿಣಿಯಾಗಿ ಜನಮನ ಗೆದ್ದ ಇತಿಹಾಸ ಇದೆಯಾ? ಆದರೆ ಜೆಪಿ ಶಾಸಕ-ಮಂತ್ರಿ-ಪಕ್ಷೇತರ ಎಮ್ಮೆಲ್ಲೆಯಾಗಿ ಸಮರ್ಥ ಸಂಸದೀಯ ಪಟು, ಜನಪರ ಕಾಳಜಿಯ ನೇತಾರ ಎಂಬುದನ್ನು ಖಾತ್ರಿಪಡಿಸಿದ್ದಾರೆ. ಎಂಪಿಗಿರಿಗೆ ಬೇಕಾದ ಜಾಣ್ಮೆ-ದೂರದೃಷ್ಟಿ, ಕ್ಷೇತ್ರದ ಸಮಸ್ಯೆ-ಸಂಕಷ್ಟಕ್ಕೆ ಸ್ಪಂದಿಸುವ ಕಾಳಜಿ ಜನರ ಬೇಕು-ಬೇಡ ಸಂಸತ್ತಿನಲ್ಲಿ ಮಂಡಿಸುವ ಛಾತಿ ಜೆಪಿಗಿದೆ ಎಂಬುದು ಆತನ ಒಂದು ವರ್ಷ ಹತ್ತು ತಿಂಗಳ ಸಂಸದ ಅವಧಿಯಲ್ಲಿ ನಿರೂಪಿತವಾಗಿದೆ. ಶೋಭಾ ಗೆದ್ದರೆ ಯಡ್ಡಿಗೆ ಸಿಗಬಹುದೇ ಹೊರತು ಜನರ ಕೈಗೆಟುಕಲಾರರು; ಜೆಪಿ ಎಂಪಿಯಾದರೆ ಸದಾ ಮತದಾರರಿಗೆ ರಿಚೇಬಲ್ ಎಂಬುದು ಕ್ಷೇತ್ರದಾದ್ಯಂತ ಪಕ್ಕಾ ಆಗಿದೆ.

ಜೆಪಿ ಜಂಟಲ್‌ಮನ್; ಶೋಭಾ ಜಗಳಗಂಟಿ. ಕ್ಷೇತ್ರದ ಉದ್ದಗಲ ಗೊತ್ತಿಲ್ಲದ ಈಕೆ ಯಡ್ಡಿಯ ಒಣ ಪ್ರತಿಷ್ಠೆಗಾಗಿ ಸ್ಪರ್ಧೆಗಿಳಿದಿದ್ದಾರೆ. ಕೋಮುವಾದಿಣಿ ಶೋಭಾ ಎದುರು ಎಲ್ಲಾ ಜಾತಿ-ಧರ್ಮದವರೊಂದಿಗೆ ಪೂರ್ವಾಗ್ರಹಗಳಿಲ್ಲದೆ ಬೆರೆವ ಜೆಪಿ ಶುದ್ಧ ಸೆಕ್ಯುಲರ್ ರಾಜಕಾರಣಿ. ಕರಾವಳಿಯ ನಾಲ್ಕು ಅಸೆಂಬ್ಲಿ ಸೆಗ್ಮೆಂಟುಗಳಲ್ಲಿ ಸಂಘ ಪರಿವಾರದ ಮತಾಂಧ ಆರ್ಭಟದ ದುಃಸ್ವಪ್ನ ಇನ್ನೂ ಮರೆತಿಲ್ಲ. ಈ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಸರಿಸುಮಾರು 32 ಸಾವಿರದಷ್ಟು ಮಹಿಳಾ ಮತದಾರರು ಹೆಚ್ಚಿರುವುದೇ ತನ್ನ ಗೆಲುವಿನ ಗುಟ್ಟು ಅಂತಿದ್ದಾರೆ ಶೋಭಾ ಮೇಡಮ್. ಆದರೆ ಹಿಂದೂ ಹುಡುಗಿಯರ ಶೀಲಕ್ಕೆ ಕಳಂಕ ತಂದ, ಪಬ್-ಹೋಮ್ ಸ್ಟೇನಲ್ಲಿದ್ದ ಅಮಾಯಕ ಹುಡುಗೀರ ಹಿಂಡಿ-ಹಿಸುಕಿ ವಿಕೃತಾನಂದ ಪಡೆದ ಹಿಂದೂ ಧರ್ಮ ರಕ್ಷಕರ ದುರುಳುತನದಿಂದ ಕಂಗಾಲಾಗಿರುವ ಹೆಂಗಸರು ಬಿಜೆಪಿಯ ಶೋಭಾಗೆ ಮತ ಹಾಕಲು ಸಾಧ್ಯವಾ?




ಭಜರಂಗದಳ, ಶ್ರೀರಾಮ ಸೇನೆ, ನಮೋ ಬ್ರಿಗೇಡ್ ಎಂಬ ತರಹೇವಾರಿ ಪುಂಡರ ದಂಡು ಪ್ರಚಾರಕ್ಕೆ ಹೋದಂತೆಲ್ಲ ತಣ್ಣಗೆ ಬಿಜೆಪಿ ಬೆಂಬಲಿಸುತ್ತ ಬಂದಿದ್ದ ಮಧ್ಯಮ ವರ್ಗದ ಜನ ಹೆದರಿ ದೂರವಾಗುತ್ತಿದ್ದಾರೆ. ಶೋಭಾ ಗೆದ್ದರೆ ತಮ್ಮ ಕತೆ ಮುಗಿದೇಹೋಗುತ್ತದೆಂಬ ಭಯ ಯಡ್ಡಿ ವಿರೋಧಿಗಳಾದ ಶಾಸಕ ಸಿ.ಟಿ. ರವಿ, ಸುನಿಲ್ ಕುಮಾರ್, ಮಾಜಿ ಶಾಸಕ ರಘುಪತಿ ಭಟ್ಟ ಮತ್ತು ಮಲೆನಾಡಿನ ಒಕ್ಕಲಿಗ ಪರಾಕ್ರಮಿಗಳಾದ ಪ್ರಾಣೇಶ್ ಮುಂತಾದವರನ್ನು ಬಾಧಿಸುತ್ತಿದೆ. ಈ ಯಡ್ಡಿ ಎದುರಾಳಿಗಳೆಲ್ಲ ಶೋಭಾಗೆ ಸೋಲಿಸುವ ಹಠ ತೊಟ್ಟಿದ್ದಾರೆ. ಈ ಗ್ಯಾಂಗ್ ಮೊನ್ನೆ ಚಿಕ್ಕಮಗಳೂರಲ್ಲೊಂದು ರಹಸ್ಯ ಸಭೆ ಸೇರಿ ಶೋಭಾ



ಪ್ರತಿ ಅಸೆಂಬ್ಲಿ ಕ್ಷೇತ್ರಕ್ಕೆ ಕೊಡುತ್ತಿರುವ 3-4 ಕೋಟಿ ತಾವೇ ಇಟ್ಟುಕೊಂಡು ಅದು ಮತವಾಗಿ ಪರಿವರ್ತನೆ ಆಗದಂತೆ ಮಾಡುವ ಪ್ಲಾನ್ ಹೆಣೆದಿದ್ದಾರೆ.


ಘಟ್ಟದ ಮೇಲೆ ಕಮಲ ಕಮರಿದೆ. ಮೂಡಿಗೆರೆಯಲ್ಲಿ ಯಡ್ಡಿ ನಿಷ್ಠಾವಂತ-ಮಾಜಿ ಶಾಸಕ ಕುಮಾರಸ್ವಾಮಿಯನ್ನು ಸೋಲಿಸಿದವರೇ ಈಗ ಮತ್ತೆ ಚುರುಕಾಗಿದ್ದಾರೆ. ಯಾವ ಕಾರಣಕ್ಕೂ ಮೂಡಿಗೆರೆಯಲ್ಲಿ ಬಿಜೆಪಿ ಲೀಡ್ ಪಡೆಯದಂತೆ ಮಾಡುವ ಸಿದ್ಧತೆ ನಡೆಸಿದ್ದಾರೆ. ಶೃಂಗೇರಿಯ ಶಾಸಕ ಜೀವರಾಜ್ ಒಬ್ಬರೇ ಶೋಭಾಗೆ ಸಹಕಾರ ಕೊಡುತ್ತಿರುವ ಬಿಜೆಪಿ ಎಮ್ಮೆಲ್ಲೆ. ಆದರೆ ಕೊಪ್ಪ ಏರಿಯಾದಲ್ಲಿ ಕಾಂಗ್ರೆಸ್ಸೇ ಮುಂದಿದೆ. ತರಿಕೆರೆಯಲ್ಲಿರುವುದು ಕಾಂಗ್ರೆಸ್ ಶಾಸಕ. ಅಲ್ಲಿ ಶೋಭಾ ನೆಚ್ಚಿಕೊಂಡಿರುವುದು ಬಿಜೆಪಿ ಮಾಜಿ ಶಾಸಕ ಸುರೇಶ್ ಮತ್ತು ಕೆಜೆಪಿಯ ಗೋಪಿಕೃಷ್ಣರನ್ನು. ಆದರೆ ಇಲ್ಲೂ ಸಿ.ಟಿ. ರವಿ ಗ್ಯಾಂಗ್ ಒಳ ಹಿಕಮತ್ತು ಬಿರುಸಾಗಿಯೇ ಮಾಡಿದೆ. ತಂತಮ್ಮ ಚಿಕ್ಕಮಗಳೂರು ಮತ್ತು ಕಾರ್ಕಳದಲ್ಲಿ ಮಾತ್ರ ಒಂಚೂರು ಹೆಚ್ಚಿಗೆ ಮತ ಬಿಜೆಪಿಗೆ ಬರುವಂತೆ ಮಾಡಿ ಉಳಿದೆಲ್ಲ ಕಡೆ ಕಾಂಗ್ರೆಸ್‌ಗೆ ಅನುಕೂಲ ಮಾಡಿಕೊಡಲು ಸಿ.ಟಿ. ರವಿ, ಸುನಿಲ್‌ಕುಮಾರ್, ಪ್ರಾಣೇಶ್ ಅಂತವರೇ ಕಟಿಬದ್ಧವಾಗಿದೆ.

ಇದಕ್ಕೆ ಸಮಾನಾಂತರವಾಗಿ ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಮೂಡಿದೆ. ಮೋಟಮ್ಮ, ತಾರಾದೇವಿ, ಮಲ್ಲಿಕಾರ್ಜುನ, ಬಿ.ಎಲ್. ಶಂಕರ್, ರಾಜುಗೌಡ ಮುಂತಾದ ಕಾಂಗ್ರೆಸ್ ಘಟಾನುಘಟಿಗಳು ದ್ವೇಷಾಸೂಯೆ ಮರೆತು ಜೆಪಿಗಾಗಿ ದುಡಿಯುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಜೆಪಿಯ 'ಫ್ಲೆಕ್ಸಿಬಿಲಿಟಿ!' ಉದ್ದುದ್ದ ಕುಂಕುಮದ ನಾಮ ಎಳೆದುಕೊಂಡು ಬಿಜೆಪಿಗಾಗಿ ಬೊಬ್ಬೆ ಹೊಡೆಯುತ್ತಿದ್ದ ಭೂಪರು ಭೂಗತರಾಗಿದ್ದಾರೆ. ಬಾಳೆಹೊನ್ನೂರಿನ ಲಿಂಗಾಯತ ಮಠದಲ್ಲಿ ಯಡ್ಡಿ ಸಿಎಂ ಆಗಿದ್ದಾಗ ಮಾಡಿದ ಅಪಮಾನ ಇವತ್ತಿಗೂ ರವಿ ಮರೆತಿಲ್ಲ. ಇದೆಲ್ಲ ಶೋಭಾರ



ಪಾರ್ಲಿಮೆಂಟ್ ಆಸೆಗೆ ಭಂಗ ತರುತ್ತಿದೆ. ಏನಿಲ್ಲವೆಂದರೂ ಮಲೆನಾಡಲ್ಲಿ ಶೋಭಾರ ಸ್ವ-ಪಕ್ಷದ ಶತ್ರುಗಳಿಂದಾಗಿಯೇ ಕಾಂಗ್ರೆಸ್‌ನ ಜೆಪಿಗೆ 15 ಸಾವಿರ ಲೀಡ್ ಕೊಡಲಿದ್ದಾರೆ.

ಪುತ್ತೂರಿಂದ ಯಶವಂತಪುರ (ಬೆಂಗಳೂರು), ಅಲ್ಲಿಂದ ಉಡುಪಿ-ಚಿಕ್ಕಮಗಳೂರು ಎಂದೆಲ್ಲ ಅಂಡಲೆಯುತ್ತಿರುವ ತಿರುಬೋಕಿ ಶೋಭಾ ಕ್ಷೇತ್ರದಲ್ಲಿ ಮತದಾರನ ಮನ ಗೆಲ್ಲಲಾಗದೆ ತಿಣುಕಾಡುತ್ತಿದಾರೆ. ಉಡುಪಿಯಲ್ಲೇ ತಾನು ರಾಜಕೀಯ ದೀಕ್ಷೆ ಪಡೆದಿದ್ದೆ ಎನ್ನುತ್ತಿರುವ ಈ ಮಾಜಿ ಗೇರು ಬೀಜ ಫ್ಯಾಕ್ಟರಿ ಕೆಲಸಗಾರಿಣಿ ಕರಾವಳಿಯಲ್ಲಿ ಅಪರಿಚಿತಳೇ. ಕಾಂಗ್ರೆಸ್ ಅಭ್ಯರ್ಥಿ ಜೆಪಿ ಬಗ್ಗೆ ಕರಾವಳಿಯಲ್ಲಿ ವಿಶೇಷ ಸೆಳೆತವಿದೆ. ಮೀನುಗಾರಿಕೆ-ಬಂದರು ಮಂತ್ರಿಯಾಗಿ ಜೆಪಿ ನೆರವಾದದ್ದು ಇವತ್ತಿಗೂ ಜನರು ಮರೆತಿಲ್ಲ. ಶೋಭಾ ಮಂತ್ರಿಯಾಗಿದ್ದಾಗ ಕರಾವಳಿ ಮಂದಿಗೇನೂ ಮಾಡಿಲ್ಲ. ಆಕೆ ಆಸ್ತಿ-ಅಂತಸ್ತು-ರಾಜಕೀಯ ವರ್ಚಸ್ಸು ವೃದ್ಧಿಸಿಕೊಳ್ಳುವ ಕಾರ್ಯಾಚರಣೆಗೆ ಮಂತ್ರಿ ಬಲ ಬಳಸಿಕೊಂಡಿದ್ದರಷ್ಟೇ. ಕರಾವಳಿಯಲ್ಲಿರುವ ಒಂದೂ ಮುಕ್ಕಾಲು ಲಕ್ಷ ಬಂಟರ ಮತದಲ್ಲಿ ಬಹು ದೊಡ್ಡ ಪಾಲು ಜೆಪಿ ಪಡೆಯುತ್ತಾರೆ. ಜತೆಗೆ ಮೀನುಗಾರ 1.10 ಲಕ್ಷ ಮತದಲ್ಲಿ ಬಹುಪಾಲು ಮಂದಿ ಜೆಪಿ ಮೀನುಗಾರಿಕಾ ಮಂತ್ರಿಯಾಗಿದ್ದಾಗ ಮಾಡಿದ ಕೆಲಸ-ಕಾರ್ಯ ನೆನೆದು ಆತನ ಪರ ನಿಲ್ಲೋದು ಖಂಡಿತ. ಸಮುದ್ರ ಕೊರೆತ ತಡೆ, ಮೀನುಗಾರಿಕಾ ಜೆಟ್ಟಿ (ಬಂದರು) ನಿರ್ಮಾಣ ಜೆಪಿ ಮಾಡಿದ್ದರು.



ಅಡಿಕೆ ಅಸ್ತ್ರ

ಮೋದಿ ಅಲೆ ಇಲ್ಲ; ನಮೋ ಬ್ರಿಗೇಡ್ ನಾಸ್ತಿ ದತ್ತ ಅವಧೂತನ ಕೃಪೆಯೂ ಸಿಗದು; ಸ್ವ-ಪಕ್ಷದ ಶಾಸಕರೂ ಬತ್ತಿ ಇಡುತ್ತಿದ್ದಾರೆ. ಕಾಂಗ್ರೆಸ್‌ನ ಜೆಪಿಯ ಜನಾನುರಾಗಿ ವ್ಯಕ್ತಿಯ ಎದುರು ಸೆಣಸಲಾಗುತ್ತಿಲ್ಲ. ಇಂತಿರುವಾಗ ಶೋಭಾ ಕರಂದ್ಲಾಜೆ ಎಂಬ ಯಡ್ಡಿ ಪ್ರಾಯೋಜಿತ ಬಿಜೆಪಿ ಅಭ್ಯರ್ಥಿ ಮತ್ತಾಕೆಯ ಬಳಗಕ್ಕೆ ಸಿಕ್ಕಿರುವ ಒಂದೇ ಒಂದು ಅಸ್ತ್ರ-ಅದು ಅಡಿಕೆ ಅಸ್ತ್ರ!

ಉಡುಪಿ ಮತ್ತು ಚಿಕ್ಕಮಗಳೂರು ಎರಡೂ ಜಿಲ್ಲೆಯ ಹಲವು ಪ್ರದೇಶದಲ್ಲಿ ಅಡಿಕೆ ಬೆಳೆಯೇ ಬಹುತೇಕರಿಗೆ ಜೀವನಾಧಾರ ಕೃಷಿ. ಈ ಅಡಿಕೆ ನಿಷೇಧಕ್ಕೆ ಕಾಂಗ್ರೆಸ್ ಪಾರ್ಟಿ ನೇತೃತ್ವದ ಯುಪಿಎ ಸರ್ಕಾರ ಕಿತಾಪತಿ ಮಾಡುತ್ತಿದೆ ಎಂದು ಇದ್ದಕ್ಕಿದ್ದಂತೆ ಒಂದು ಗುಮ್ಮ ಕೆಲವು ತಿಂಗಳ ಹಿಂದೆ ಬಿಜೆಪಿಯ ಸುಳ್ಳುಗಾರರು ಹರಿಬಿಟ್ಟಿದ್ದರು. ಗುಟಕಾ ಹಾವಳಿ ಜೋರಾದಾಗ ಅದನ್ನು ನಿಷೇಧಿಸಲು ಸುಪ್ರೀಮ್ ಕೋರ್ಟ್ ಹೇಳಿತ್ತು. ಅಡಿಕೆ ಆರೋಗ್ಯಕ್ಕೆ ಮಾರಕವೇ ಎಂದು ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಚರ್ಚೆಗಳಾಗಿತ್ತು.


ಸಿಗರೇಟ್ ಲಾಬಿ ಅಡಿಕೆ ಹಿಂದೆ ಬಿದ್ದಿತ್ತು. ಗುಟಕಾ ಅಷ್ಟೇ ಅಲ್ಲ ಅಡಕೆಯನ್ನು ಬ್ಯಾನ್ ಮಾಡಿದರೆ ಲಾಭ ಬಾಚಬಹುದೆಂಬುದು ತಂಬಾಕು ಲಾಬಿಯ ಲೆಕ್ಕಾಚಾರವಾಗಿತ್ತು. ಅಡಿಕೆ ಮಾರಕ ಆಹಾರ ಪದಾರ್ಥಗಳ ಪಟ್ಟಿಗೆ ಸೇರಿಸುವ ಅನಿವಾರ್ಯಕ್ಕೆ ಅಂದಿನ ವಾಜಪೇಯಿಯ ಬಿಜೆಪಿ ಲೀಡರಿಕೆಯ ಎನ್‌ಡಿಎ ಸರ್ಕಾರ ಬಿತ್ತು. ಅಂದರೆ ಅಡಿಕೆ ನಿಷೇಧದ ಪ್ರಸ್ತಾಪ ಆಗಿದ್ದು ಬಿಜೆಪಿ ಸರ್ಕಾರದ ಕಾಲದಲ್ಲೇ ಹೊರತು ಕಾಂಗ್ರೆಸ್‌ನ ಯುಗದಲ್ಲಿ ಅಲ್ಲ. ಇದು ಅಂದು ಅಡಿಕೆ ಬಗ್ಗೆ ದೊಡ್ಡ-ದೊಡ್ಡ ಹೋರಾಟ-ಹಾರಾಟ ಮಾಡುತ್ತಿದ್ದ ಡಿ.ವಿ. ಸದಾನಂದಗೌಡನಂಥ ಬಿಜೆಪಿ ಭೂಪರಿಗೆ ಗೊತ್ತಿತ್ತು. ಕೆನರಾದ ಸಂಸದ ಅನಂತ ಹೆಗಡೆ ಎಂಬ ಖಾಲಿ ಬುರುಡೆ ಭಂಡನಿಗೂ ಆಗ ಆದ ಅಡಿಕೆ ವಿರುದ್ಧದ ಕರಾಮತ್ತು ಗೊತ್ತಿತ್ತು. ದಾವಣಗೆರೆಯ ಜಿ.ಎಂ. ಸಿದ್ದೇಶ್ ಎಂಬ ಅಡಿಕೆ ಮಂಡಿ ಕಳ್ಳ ವರ್ತಕ ಆಗ ಕಣ್ಣು-ಕಿವಿ ಮುಚ್ಚಿಕೊಂಡಿದ್ದ.

ಆದರೆ ಲೋಕಸಭೆ ಎಲೆಕ್ಷನ್ ಹತ್ತಿರ ಬಂದಾಗ ಸುಪ್ರೀಂ ಕೋರ್ಟ್‌ಗೆ ಅಡಿಕೆ ಮಾರಕ ಎಂದು ಯುಪಿಎ ಸಲ್ಲಿಸಿದ ಅಫಿಡವಿಟ್ ಬಗ್ಗೆ ಬಿಜೆಪಿ ಗಲಾಟೆ ಎಬ್ಬಿಸಿದೆ. ಹಾಗಂತ ಯುಪಿಎ ಸರ್ಕಾರ ಅಡಿಕೆ ನಿಷೇಧದ ಬಗ್ಗೆ ಎಲ್ಲಿಯೂ ಯಾವ ಪ್ರಮಾಣ ಪತ್ರವೂ ಕೊಟ್ಟಿಲ್ಲ. ಇದನ್ನು ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಜೆಪಿ ತರ್ಕಬದ್ಧವಾಗಿ ಮಂಡಿಸುತ್ತಿದ್ದಾರೆ. ಆದರೆ ಗೊಬೆಲ್ಸ್ ತಂತ್ರಗಾರಿಕೆಯ ಶೋಭಾ ಕರಂದ್ಲಾಜೆ ಮತ್ತಾಕೆಯ ಬಿಜೆಪಿ ಭಂಡರ ಬಳಗ "ಅಡಿಕೆ ನಿಷೇಧ... ಕಾಂಗ್ರೆಸ್ ಕರಾಮತ್ತು...!!" ಎಂದು ಬೊಬ್ಬೆ ಹೊಡೆಯುತ್ತಿದೆ. ಅಡಿಕೆ ಬೆಳೆಗಾರರ ಪರವಾಗಿ ದಿಲ್ಲಿ ಮಟ್ಟದಲ್ಲಿ ನ್ಯಾಯಾಲಯದಲ್ಲಿ ಹೋರಾಡಿದ್ದು ಜೆಪಿಯೇ ಹೊರತು ದೀವಿ, ಶೋಭಾ, ಯಡ್ಡಿ ಅನಂತ್ಕಾಣೆ ಅಲ್ಲ.

ಬಿಜೆಪಿ ಕ್ಯಾಂಡಿಡೇಟ್ ಕೂಗುಮಾರಿ ಎಂಬುದು ಅರ್ಥಮಾಡಿಕೊಂಡಿರುವ ಮತದಾರರು 'ಅಡಿಕೆ ಅಸ್ತ್ರ'ಕ್ಕೀಗ ಹೆದರುತ್ತಿಲ್ಲ. ಬಿಜೆಪಿಗೆ ಈ ಅಸ್ತ್ರವೂ ಕೈಕೊಟ್ಟಿದೆ. ಜೆಪಿಯ ಜಾಣ-ವಸ್ತುನಿಷ್ಠ ಸಮಜಾಯಿಷಿಯಿಂದ!

ಉಡುಪಿ ಜಿಲ್ಲೆಯ ಕುಂದಾಪುರ ಅಸೆಂಬ್ಲಿ ಕ್ಷೇತ್ರ ನಿರ್ಣಾಯಕ. ಇಲ್ಲಿರುವುದು ಪಕ್ಷೇತರ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಎಂಬ ಬಿಜೆಪಿ-ಆರೆಸ್ಸೆಸ್ ಬ್ರಾಹ್ಮಣ ಬಾಸ್‌ಗಳಿಂದ ಒರೆಸಿಕೊಂಡ ಬಂಟರ ಭೂಪ. ಈತನ ಬೆಂಬಲಿಗರು ಈಗ ಬಿಜೆಪಿ ಸೇರಿದರೂ ಆತ ಮಾತ್ರ ತಟಸ್ಥನಾಗಿದ್ದಾನೆ. ಅಂದರೆ ಸೋದರ ಸಂಬಂಧಿ ಜೆಪಿ ಗೆಲ್ಲಲಿ ಎಂದು ಭಾವಿಸಿದ್ದಾರೆ. ಶೋಭಾಕ್ಕಿಂತ ಜೆಪಿಯೇ ಬೆಟರ್ ಎಂಬುದು ಕ್ಷೇತ್ರದ ಅನಿಸಿಕೆ ಆತನೂ ಅರ್ಥಮಾಡಿಕೊಂಡಿದ್ದಾರೆ. 2009ರಲ್ಲಿ ಡಿ.ವಿ. ಸದಾನಂದಗೌಡ ಇಲ್ಲಿ ಗೆದ್ದಿದ್ದು ಬರೀ 27 ಸಾವಿರ ಮತದಂತರದಿಂದ. ಆಗ ಲಿಂಗಾಯತರ ಬಲಾಢ್ಯ ಯಡ್ಡಿ ಸಿಎಂ, ಹಾಲಾಡಿ ಬಿಜೆಪಿ ಶಾಸಕ. ಆದರೂ ದೀವಿ ಕಾಂಗ್ರೆಸ್‌ನ ಜೆಪಿ ಎದುರು ಎದುಸಿರುಬಿಟ್ಟಿದ್ದರು. ಈಗ ಹಾಲಾಡಿ ಇಲ್ಲ, ಬಿಜೆಪಿಯಲ್ಲಿ ಯಡ್ಡಿಗೆ ಕಿಮ್ಮತ್ತಿಲ್ಲ. ಘಟ್ಟದ ಒಕ್ಕಲಿಗರು ತಿರುಗಿ ಬಿದ್ದಿದ್ದಾರೆ. ಸ್ವ-ಪಕ್ಷದ ಶಾಸಕರೇ ಜೆಪಿ ಗೆಲ್ಲಲಿ ಅನ್ನುತ್ತಿದ್ದಾರೆ. ಹೀಗಿರುವಾಗ ಶೋಭಾ ಪಾರ್ಲಿಮೆಂಟ್ ಮೆಟ್ಟಲೇರೋದು ಹ್ಯಾಗೆ?

⏭ 09



ದಕ್ಷಿಣ ಕನ್ನಡ


ಪೂಜಾರಿ ಮಿಂಚು; ಸಂಘಿಗಳ ಸಂಚು!

ದಕ್ಷಿಣ ಕನ್ನಡದ ಧರ್ಮೋನ್ಮಾದ ಯುದ್ಧಾಂಗಣದಲ್ಲಿ ಪರಿವಾರದ ಶೂದ್ರ ಸೈನಿಕರು ಚಿಂತೆಗೀಡಾಗಿದ್ದಾರೆ! ...ಗಾಗಿ ಸಮರ? ಎಂಬುದೊಂದು ಅಸಲೀ ಜಿಜ್ಞಾಸೆಗೆ ...ತ್ವದ ಪರಿವಾರ ಬದ್ಧಿದೆ. ಬಿಜೆಪಿಯ ಹೋಪ್‌ಲೆಸ್ ...ಡಿಡೇಟ್ ನಳಿನ್‌ಕುಮಾರ್ ಕಟೀಲ್ ಬಗ್ಗೆ ...ಸ್-ಬಿಜೆಪಿ-ಕಾವಿ ಪಡೆಯಲ್ಲಿ ಭಾವಾವೇಶದ ಸ್ಪಿರಿಟ್ ...ಇಲ್ಲ! ಈತನನ್ನು ಗೆಲ್ಲಿಸಲೇಬೇಕೆಂಬ ಹಠವೂ ...ಆದರೆ ಎಡಬಿಡಂಗಿ ಮೋದಿಗಾಗಿ ಬಿಜೆಪಿ ...ಗೇರಿಸುವ ಹುಚ್ಚು ಹಂಬಲದಲ್ಲಿದ್ದ ಕರಾವಳಿಯಲ್ಲಿ ...ವಾಸ್ ಆಗಿರುವ ಭಜರಂಗಿ-ಬಿಜೆಪಿ- ಚಡ್ಡಿ-...ಶೂದ್ರ ಸಂತಾನದ ಯೋಚನೆಯ ದಿಕ್ಕು-ದೆಸೆಗಳೇ ...ಶ್ ಬದಲಾಗಿಬಿಟ್ಟಿದೆ. ಆರೆಸ್ಸೆಸ್ ಡಾನ್ ಕಲ್ಲಡ್ಕ ...ನ ಅಮಾನುಷ ಹಿಂದೂತ್ವದ ಅಮಾಯಕ ...ವಾದದಂತಿರುವ ನಳಿನ್ ಕಟೀಲ್‌ನ ಗೆಲ್ಲಿಸಿದರೆ ...ದಿ ಬಿಜೆಪಿಯಲ್ಲಿ ಸುರಕ್ಷಿತನಾ?

...ಂಥದೊಂದು ಅನುಮಾನ ಸಂಘಶೂದ್ರರ ...ಯಿಸುತ್ತಿದೆ. ಬಿಜೆಪಿ ಹೇಳಿ-ಕೇಳಿ ಬ್ರಾಹ್ಮಣಶಾಹಿ-...ವಾದಿ ವೈದಿಕೋತ್ತಮರ ಪಕ್ಷ! ಅಲ್ಲಿ ಅಬ್ರಾಹ್ಮಣರ ...ನೆಯಂತೆ ಬಳಸಿ ಬಿಸಾಡುವ ಗರ್ಭಗುಡಿ ಸಂಸ್ಕೃತಿ ...ಚಾನವಾಗಿ ನಡೆದುಬರುತ್ತಿದೆ. ಹೀಗಾಗಿಯೇ ಅಲ್ಲವಾ, ...ಪ್ರರಾದ ಕಲ್ಯಾಣಸಿಂಗ್, ಉಮಾಭಾರತಿ, ...ಯೂರಪ್ಪನಂಥ ಜನಿವಾರವಿಲ್ಲದ ಒಂದೇ ಕಾರಣಕ್ಕೆ ...ಕ್ಷನ ಪಡೆಯಲಾಗಿತ್ತು! ಅದೇರೀತಿ ಕರಾವಳಿಯ ... ಜಯರಾಮ ಶೆಟ್ಟಿ, ಶಕುಂತಲಾ ಶೆಟ್ಟಿ, ರುಕ್ಮಯ ...ಬರಿ, ಗೋಣಿನಾಗ, ಹಾಲಾಡಿ ಶ್ರೀನಿವಾಸ್ ಶೆಟ್ಟಿ, ...ವೀರಮಾ ಮಧ್ವರಾಜ್.... ಮುಂತಾದ ಅಬ್ರಾಹ್ಮಣ ...ಯನ್ನು ಹೊಸಕಿ ಹಾಕಿದ್ದು? ಅಕಸ್ಮಾತ್ ಶೂದ್ರ ...ವಾಲಾ ನರೇಂದ್ರ ಮೋದಿ ಪ್ರಧಾನಮಂತ್ರಿಯಾದರೆ ...ನ ಭಾಗ್ವತ್, ಭಟ್, ಸಿಂಘಾಲ್, ಉಪಾಧ್ಯಾಯ, ...ಶಿ, ಹೆಬ್ಬಾರ್ ವಗೈರೆ ವೈದಿಕ ಕುಲತಿಲಕರು ...ಕೊಂಡಾರಾ? ಶೂದ್ರರ ಮತ ಪಡೆಯಲಷ್ಟೇ ಮೋದಿ ...ಳಗಿಸಿ ಕೊನೆಗೆ ವೈದಿಕನೊಬ್ಬನಿಗೆ ಪಟ್ಟಾಭಿಷೇಕ-...ಯಾರಾ?

...ಂಥ ಚರ್ಚೆಗಳೀಗ ದಕ್ಷಿಣ ಕನ್ನಡದ ಬಿಜೆಪಿ-ಭಜರಂಗಿ ...ಬಿಡಾರದಲ್ಲಿ ಅಲ್ಲೋಲಕಲ್ಲೋಲವನ್ನೇ ಎಬ್ಬಿಸಿಬಿಟ್ಟಿದೆ. ...ದಾಗಿ ಹಿಂದೂತ್ವದ ಹೆಡ್‌ಮಾಸ್ಟರ್ ಕಲ್ಲಡ್ಕ ...ಕರ್ ಭಟ್ಟರಿಗೆ ಮೊದಲಿನ ಜೋಶ್ ಬರುತ್ತಿಲ್ಲ, ...ತ್ವ ಹುಂಬ ಹುಡುಗರ ಬಲ-ಬೆಂಬಲ ಸಿಗುತ್ತಿಲ್ಲ, ...-ಎಲ್ಲೋ ಲಿಂಕು ಹರಿದು ಹೆಣೆದಂತೆ ಕಲ್ಲಡ್ಕ ...ಡಿಸುತ್ತಿದ್ದಾರೆ. ನಮೋ ಬ್ರಿಗೇಡ್ ಕಟ್ಟಿದಂತೆಲ್ಲ ತಂತಾನೆ ...ಕೊಳ್ಳುತಿದೆ! ಚುನಾವಣೆ ಗೆಲ್ಲಲು ಕಲ್ಲಡ್ಕ ಮಾಡುವ ...ಗಾರಿಕೆಗಳೆಲ್ಲ ತಿರುಗುಬಾಣವಾಗುತ್ತಿದೆ. ಮೋದಿ ಅಲೆ ...ಬಿದು ನಗರದ ಕೆಲವೆಡೆಬಿಟ್ಟರೆ ಹಳ್ಳಿಗಾಡಿನತ್ತ ...ಸಲಾಗದೆ ನಡುದಾರಿಯಲ್ಲೇ ದುರ್ಬಲವಾಗುತ್ತಿದೆ.

...ಟ್ಟರ್ ಸಂಘ ಪರಿವಾರದ ಗ್ಯಾಂಗೇ ಒಳಗೊಳಗೇ ...ಜಾರಿ ಒಂದು ಸಲ ಪೂಜಾರಿ ಎಂಪಿ ಆಗ್ಲಿ ಬಿಡಿ ...ಯ್ರಿ ಎಂದು ಹಾರೈಸುತ್ತಿದೆಯಷ್ಟೇ ಅಲ್ಲ, ಬಿಜೆಪಿ ...ಡೇಟ್‌ನ ವಿರುದ್ಧ ಪ್ರಚಾರವೂ ಮಾಡುತ್ತಿದೆ. ನಳಿನ್ ... ಬಾರದ ನಾಲಾಯಕ್; ಕಲ್ಲಡ್ಕ ಭಟ್ಟನ ಸೇವೆ ... ಈತನಿಗೆ ಕ್ಷೇತ್ರದ ಅಭಿವೃದ್ಧಿ ಕಲ್ಪನೆ ಇಲ್ಲ, ಎಂಪಿ



ಫಂಡು ಹಿಂದೂ ಸಂಘಟನೆಗಳಿಗೆ ಅನುಕೂಲವಾಗುವಂತೆ ಈತ ಬಳಸಿದ್ದಾನೆಯೇ ಹೊರತು ಸಮಷ್ಟಿಯ ಒಳಿತಿಗೆ ಖರ್ಚು ಮಾಡಿಲ್ಲ ಎಂಬ ಕೂಗು ಬಿಜೆಪಿಯಲ್ಲೇ ಎದ್ದಿದೆ. ಹೇಗೆ ಕಾಂಗ್ರೆಸ್‌ನಲ್ಲಿನ ಒಂದು ಗುಂಪು ಪೂಜಾರಿ ಗೆದ್ದರೆ ಆತನ ಹೆಡ್‌ಮಾಸ್ಟರಿಕೆಗೆ ತಾವೆಲ್ಲಿ ಬಲಿಯಾಗಬೇಕಾಗುತ್ತದೆಂಬ ಭಯವಿದೆಯೋ ಅದಕ್ಕಿಂತ ದೊಡ್ಡದಾದ ಅಸಮಾಧಾನ ಕಲ್ಲಡ್ಕ ಭಟ್ಟನ ಜಾತಿಯತೆ-ಭ್ರಷ್ಟಾಚಾರದ ಹಿಂದೂತ್ವದ ಅಪಸವ್ಯಗಳ ಬಗೆಗಿದೆ.

ನಳಿನ್‌ಗೆ ಮತ್ತೆ ಬಿಜೆಪಿ ಟಿಕೆಟ್ ಸಿಕ್ಕಿರುವುದು ಆ ಪಾರ್ಟಿಯಲ್ಲಿ ಕ್ಷೋಭೆಗೆ ಕಾರಣವಾಗಿದೆ. ಈ ಬಾರಿ ಟಿಕೆಟ್ ಪಡೆಯುವ ಆಸೆಯಲ್ಲಿದ್ದ ಕ್ರಿಮಿನಲ್ ಪ್ಲೀಡರ್ ಪೀಪಿ, ಶ್ರೀಕರ ಪ್ರಭುನಂಥವರು ಕೆರಳಿದ್ದಾರೆ. ಹಿಂದೂ ರಾಷ್ಟ್ರ, ಹಿಂದೂ ಹೆಣ್ಣು, ಗೋ ಪ್ರಾಣಕ್ಕಿಂತ ಟಿಕೆಟ್ ಕೈತಪ್ಪಿರುವುದೇ ಈ ರೆಬೆಲ್‌ಗಳಿಗೆ ದೊಡ್ಡ ದ್ರೋಹದಂತೆ ಕಾಣಿಸುತ್ತಿದೆ. ಸುಧೀರ್ ಘಾಟೆಯಂಥ ಕಟ್ಟರ್ ಚಡ್ಡಿಗೂ ಕಲ್ಲಡ್ಕ-ನಳಿನ್-ಮೋದಿ ಯಾರೂ ಬೇಡದಂಥ ವೈರಾಗ್ಯ ಮೂಡಿಸಿದೆ. ಬಿಜೆಪಿಯ ಪಕ್ಕಾ ಬೆಂಬಲಿಗರಾಗಿದ್ದ ಕೊಂಕಣಿ ಬ್ರಾಹ್ಮಣರು ಹವ್ಯಕ ಬ್ರಾಹ್ಮಣ ಕಲ್ಲಡ್ಕ ಮತ್ತವನ ಬಳಗದ ಏಕಸಾಮ್ಯದಿಂದ ರೋಸಿಹೋಗಿ ಕಾಂಗ್ರೆಸ್‌ನ ಪೂಜಾರಿಯೇ ಬೆಟರ್ ಅನ್ನುತ್ತಿದ್ದಾರೆ. ಮೋದಿ ಗಾಳಿಯಲ್ಲಿ ಹಿಂದುಳಿದವರ ತೇಲಿಸಬಹುದೆಂದು ಸ್ಕೆಚ್ ಹಾಕಿದ್ದ ಕಲ್ಲಡ್ಕರಿಗೆ ಅದ್ಯಾಕೋ ಕೆಲಸಕ್ಕೆ ಬಾರದ ತಂತ್ರಗಾರಿಕೆ ಎಂಬಂತಾಗಿದೆ.

ದಕ್ಷಿಣ ಕನ್ನಡ ಧರ್ಮಾಧಾರಿತ ಕ್ಷೇತ್ರವೇ ಹೊರತೂ ಜಾತಿ ಲೆಕ್ಕಾಚಾರ ಇಲ್ಲಿ ನಡೆಯದೆಂದು ಬಿಜೆಪಿ ಭೂಪರು ಅದೆಷ್ಟೇ ಹೇಳಿದರೂ ಕ್ಷೇತ್ರದಲ್ಲಿ ಪರಿಸ್ಥಿತಿ ಹಾಗೇನಿಲ್ಲ. ಸ್ವತಃ ಬಿಜೆಪಿಗಳೇ ಬಹುಸಂಖ್ಯಾತ ಬಿಲ್ಲವರನ್ನು ಮತ್ತು ಬಂಟ ಪಾಳೇಗಾರಿಕೆಗೆ ಹೆದರುವ ಹಿಂದುಳಿದವರನ್ನು ಸೆಳೆಯಲು ತಮ್ಮ ಹುರಿಯಾಳಿನ ಜಾತಿ ಮರೆಮಾಚುತ್ತಿದ್ದಾರೆ. ನಳಿನ್ ಮತ್ತವನ ಗುರು ಕಲ್ಲಡ್ಕ ಭಟ್ಟ "ಕಟೀಲ್" ಎಂದರೆ ಶೆಟ್ಟಿ (ಬಂಟ) ಎಂದು ಬಂಟ ಸಮುದಾಯ ಮುಂದೆ ಹೇಳಿದರೆ, ಬಿಲ್ಲವ-ಮೀನುಗಾರ-ದಲಿತರ ಎದುರು "ಬಂಟೇತರ" ಎಂದು ಪ್ರತಿಪಾದಿಸುತ್ತಿದ್ದಾರೆ. ಹೊರಗೆ ಧರ್ಮದ ರಣರಂಗದಂತೆ ಕಂಡರೂ ಒಳಗೆ ದಕ್ಷಿಣ ಕನ್ನಡ ಜಾತಿ ಲೆಕ್ಕಾಚಾರದ ಅಖಾಡವೇ.

ಬಿಲ್ಲವ-ಬಂಟ-ಮುಸ್ಲಿಮ್-ಕ್ರೈಸ್ತರು-ಬೆಸ್ತರು ಈ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರವಾಡುತ್ತಾರೆ. ನಳಿನ್‌ಗೆ ಬಂಟರ ಮತ ದಂಡಿಯಾಗಿ ಬಂದರೆ ಅದೇ ತಕ್ಕಡಲ್ಲಿ ಕಾಂಗ್ರೆಸ್‌ನ ಪೂಜಾರಿಗೆ ಆತನ ಬಿಲ್ಲವ ಕೋಮಿನ ಓಟುಗಳೂ ಸಾರಾಸಗಟಾಗಿ ಹರಿದುಬರಬೇಕಲ್ಲವಾ? ಸುಮಾರು 3.25 ಲಕ್ಷದಷ್ಟಿರುವ ಮುಸ್ಲಿಮರು ನರಹಂತಕ ನಮೋನ ಪಂಜುಗಳನ್ನು ಕಂಡೂ ಆತನ ಬಿಜೆಪಿ ಅಭ್ಯರ್ಥಿಗೆ ಓಟು ಒತ್ತುವ ಹುಂಬತನ ಮಾಡಿಯಾರಾ? ಕರಾವಳಿಯಲ್ಲಿ ಚಡ್ಡಿ-ಭಜರಂಗಿ ಗ್ಯಾಂಗ್ ಮಾಡಿದ ಹಿಂದೂತ್ವದ ಅನಾಚಾರ-ಹಿಂದೂ ಹುಡುಗಿಯರದೇ ಬಟ್ಟೆ ಬಿಚ್ಚಿ ಶೀಲಭಂಗ ಮಾಡಿ ವಿಕೃತಾನಂದ ಹೊಂದಿದ ಕಿರಾತಕತನ ಸ್ಥಳೀಯರಿನ್ನೂ ಮರೆತಿಲ್ಲ.

ಕ್ರಿಶ್ಚಿಯನ್ನರು 1.75 ಲಕ್ಷ ಇದ್ದಾರೆ. ಇವರ ಚರ್ಚ್ ಸುಖಾಸುಮ್ಮನೆ ಒಡೆದು ಇಲೆಕ್ಷನ್ ಮೈಲೇಜ್‌ಗೆ ಹಿಂದೂಗಳನ್ನು ಕೆರಳಿಸಿದ್ದು ಬಿಜೆಪಿಗೆ ಲಾಭ ಮಾಡದ್ದಕ್ಕಿಂತ ಹಾನಿಯೇ ಹೆಚ್ಚು ಮಾಡಲಿವೆ. ಇದು ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಪ್ರತಿಫಲಿಸಿದೆ. ಕ್ಯಾಂಡಿಡೇಟ್‌ಗಳ ಸಾಮರ್ಥ್ಯದಲ್ಲೂ ಕಾಂಗ್ರೆಸ್‌ನ ಜನಾರ್ದನ್ ಪೂಜಾರಿಯೇ ವಜನ್‌ದಾರ; ಬಿಜೆಪಿಯ ನಳಿನ್‌ದು ಲೋಪ್ರೋಫೈಲ್. ಪೂಜಾರಿ ಬಾಯಿ ದೊಡ್ಡದಾದರೂ ಹೃದಯ ವಿಶಾಲ; ನಳಿನ್ ನಯವಂಚಕ, ಜಗಳಗಂಟ. ಸ್ವಂತಿಕೆ ಇಲ್ಲದ ನಳಿನ್ ರಸಿಕ ಶಿಖಾಮಣಿ ಎಂಬ ರಂಗೀಲಾ ಕತೆಗಳು ಕ್ಷೇತ್ರದಲ್ಲಿ ಹರಿದಾಡುತ್ತಿವೆ. ಚಡ್ಡಿಹರುಕ ಪಾಲೆಮಾರ್, ರಘುಪತಿ ಭಟ್ಟ, ರೇಣುಕಾಚಾರ್ಯ, ಹಾಲಪ್ಪ ರಾಮದಾಸ್ "ವಂಶಸ್ಥ" ಈ ನಳಿನ್ ಎಂದು ಚಡ್ಡಿಗಳೇ ಪಿಸುಗುಡುತ್ತಿದ್ದಾರೆ. ಇದೆಲ್ಲ ಗೊತ್ತಾಗಿಯೇ ಬಿಜೆಪಿಗಳು ನಳಿನ್‌ನನ್ನು ಮುಂದೆ ತೋರಿಸದೆ ಬರೀ "ಮೋದಿ... ಮೋದಿ...." ಎಂದು ಪ್ರಚಾರ ಮಾಡುತ್ತಿದ್ದಾರೆ. ನಳಿನ್‌ನನ್ನು ಮುನ್ನಡೆಗೆ ತಂದು ತೋರಿಸಿದರೆ ಡ್ಯಾಮೇಜ್ ಗ್ಯಾರಂಟಿ ಎಂದು ಚಡ್ಡಿ ಹೈಕಮಾಂಡ್‌ನ "ಡಾನ್"ಗೆ ಖಾತ್ರಿಯಾಗಿದೆ.

ಇಡೀ ಕ್ಷೇತ್ರದಲ್ಲಿ ಜನಾರ್ದನ ಪೂಜಾರಿ ಬಗ್ಗೆ ಸಿಂಪಥಿ ಮೂಡಿದೆ. 76 ವರ್ಷದ ಪೂಜಾರಿಗಿದು ಕೊನೆಯ ಹೋರಾಟ ಎಂಬುದು ಮತದಾರರಿಗೆ ಅರ್ಥವಾಗಿದೆ. ಆತ ಗೆದ್ದರೆ ಏನಾದರೂ ಒಳ್ಳೆಯದು ಮಾಡಬಹುದೆಂಬ ನಿರೀಕ್ಷೆ ಮೂಡಿದೆ. ಕಳೆದ ಕಾಲುಶತಮಾನದಿಂದ ದಕ್ಷಿಣ ಕನ್ನಡ ಬಿಜೆಪಿ ಕಮ್ಯುನಲ್ ಕಪಿಮುಷ್ಟಿಯಲ್ಲಿ ಅಭಿವೃದ್ಧಿಯೇ ಕಂಡಿಲ್ಲ. ಬರೀ ಕೋಮು ಕಿತಾಪತಿಯ ಕುರ್ಚಿ ರಾಜಕಾರಣ ಕಲ್ಲಡ್ಕನ ಕಂಪನಿ ಮಾಡಿದೆಯೇ ಹೊರತು ಒಂದೇ ಒಂದು ಜನಪರ ಪ್ಲಾನ್-ಪ್ರಾಜೆಕ್ಟ್ ತಂದಿಲ್ಲ. ಸತತ ಆರು ಬಾರಿ ಗೆದ್ದು ಬಿಜೆಪಿಯ ಸಂಸದರಾದ ಧನಂಜಯ್, ಡೀವಿ, ನಳಿನ್ ಸ್ವಹಿತಾಸಕ್ತಿಯ-ವಿಭಜಕ ರಾಜಕೀಯ ಮಾಡಿದರೇ ಹೊರತು ಕ್ಷೇತ್ರಕ್ಕೆ ನೆಮ್ಮದಿ ನೀಡುವ ಕೆಲಸ-ಕಾಮಗಾರಿ-ಕಾರ್ಯ ಯಾವುದೂ ಮಾಡಲಿಲ್ಲ. ಹೀಗಾಗಿ ಜನರೀಗ ಪೂಜಾರಿಯತ್ತ ಭರವಸೆಯ ದೃಷ್ಟಿ ನೆಟ್ಟಿದ್ದಾರೆ.

ಕಳೆದ ಲೋಕಸಭೆ ಇಲೆಕ್ಷನ್ (2009)ನಲ್ಲಿ ಬಿಜೆಪಿ ಗೆದ್ದಿದ್ದು 40 ಸಾವಿರ ಮತದಂತರದಿಂದ. ಅದೇ ಬಿಜೆಪಿ ಕಳೆದ ವರ್ಷದ ಅಸೆಂಬ್ಲಿ ಚುನಾವಣೆಯಲ್ಲಿ 87 ಸಾವಿರ ಮತದಂತರದಿಂದ ಜಿಲ್ಲೆಯಲ್ಲಿ ಹಿಂದೆಬಿದ್ದಿದೆ. ಈ ವರದಿ ಸಿದ್ಧವಾಗುವ ಹೊತ್ತಿಗೆ ಕ್ಷೇತ್ರದ ಎಂಟು ಅಸೆಂಬ್ಲಿ ಕ್ಷೇತ್ರಗಳಲ್ಲಿ ಬಿಜೆಪಿ-ಕಾಂಗ್ರೆಸ್ ಸಮಬಲದಲ್ಲಿದೆ. ಮಂಗಳೂರು ದಕ್ಷಿಣ, ಮಂಗಳೂರು, ಬಂಟ್ವಾಳ, ಬೆಳ್ತಂಗಡಿಯಲ್ಲಿ ಕಾಂಗ್ರೆಸ್ ಮುಂದಿದೆ. ಬಿಜೆಪಿ ಸುಳ್ಯ, ಮಂಗಳೂರು ಉತ್ತರದಲ್ಲಿ ಮೇಲ್ಮೈ ಸಾಧಿಸಿದೆ. ಪುತ್ತೂರು, ಮೂಡಬಿದಿರೆಯಲ್ಲಿ ಕಾಂಗ್ರೆಸ್-ಬಿಜೆಪಿ ಫಿಫ್ಟಿ-ಫಿಫ್ಟಿ ಬಲದಲ್ಲಿವೆ.

ಮೋದಿ ಅಲೆ ಏಳುವ ಭ್ರಮೆಯಲ್ಲಿ ಬಿಜೆಪಿ ಇದ್ದರೆ, ಕಾಂಗ್ರೆಸ್‌ನಲ್ಲಿ ಮೀರ್‌ಸಾಧಿಕ್ ಶಾಸಕರು ಪೂಜಾರಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ಪುತ್ತೂರಿನ ಶಾಸಕಿ ಶಕುಂತಲಾ ಶೆಟ್ಟಿ ಪೂರ್ವಾಶ್ರಮದ ಸಂಘಪರಿವಾರದ ಹುಂಗಲ್ಲಿರುವಂತೆ ಆಡುತ್ತಿರುವುದು ಪೂಜಾರಿಗೆ ಗಂಡಾಂತರಕಾರಿಯಾಗಿದೆ. ಮೊಯ್ಲಿಯೂ ತನ್ನ ಆಪ್ತ ಶಿಷ್ಯ ಮಂತ್ರಿ ಅಭಯ್ ಜೈನ್ ಮೂಲಕ ಆಟ ಆಡುತ್ತಿದ್ದಾರೆ. ಇಷ್ಟಾದರೂ ಕಾಂಗ್ರೆಸ್‌ಗೆ ಈ ಸಲ ಬಿಜೆಪಿಯ ಹಿಂದೂತ್ವದ ಬೇರುಗಳು ಒಣಗಿರುವುದೇ ಪ್ಲಸ್ ಆಗಲಿದೆ. ಹಿಂದೂತ್ವ ಹುಡುಗರು ಪಬ್ ದಾಳಿ-ಹೋಮ್‌ಸ್ಟೇ ದಾಳಿ ಹೊತ್ತಲ್ಲೇ ಕಲ್ಲಡ್ಕ ಗ್ಯಾಂಗ್ ಮಾಡಿದ ದ್ರೋಹ-ಮೋಸ ಇನ್ನೂ ಮರೆತಿಲ್ಲ. ಹೀಗಾಗಿ ಹಿಂದೂತ್ವದ ಕಟ್ಟರ್ ಕುಂಕುಮಧಾರಿ ಹುಡುಗರೀಗ ಫೀಲ್ಡ್‌ನಲ್ಲಿ ಸೊಕ್ಕಿನಿಂದ ಓಡಾಡುತ್ತಿಲ್ಲ. ನಮೋ ಬ್ರಿಗೇಡ್ ಸ್ವಯಂ ಬಹಿರ್ಗಸ್ತಾಗಿದೆ.

ಕ್ಷೇತ್ರದೊಳಗಿನ ಜಾತಿ ಕೆಮಿಸ್ಟ್ರಿ-ಧರ್ಮಾಂಧ ಕುತಂತ್ರಗಾರಿಕೆ, ಬಿಜೆಪಿಯ ನಳಿನ್ ಕಟೀಲ್ (ಶೆಟ್ರ)-ಕಾಂಗ್ರೆಸ್‌ನ ಜನಾರ್ದನ ಪೂಜಾರಿಯ ಯೋಗ್ಯತೆ-ಬದ್ಧತೆ, ಇಲ್ಲದ ಮೋದಿ ಅಲೆ ಎಲ್ಲ ಲೆಕ್ಕಹಾಕಿ ನೋಡಿದರೆ ಅಂತಿಮವಾಗಿ ಫೋಟೋ ಫಿನಿಶ್ ಫಲಿತಾಂಶ ಬರುವ ಸಾಧ್ಯತೆ ಕಾಣಿಸುತ್ತದೆ. ಆ ಫೋಟೋ ಪೂಜಾರಿಯವರೇ ಆಗುವ ಅವಕಾಶ ಹೆಚ್ಚಿದೆ!!

● ನಮುಹ

⏮


...ಕುಂದಾಪುರ ಒಂದರಲ್ಲೇ ಜೆಪಿಗೆ 10 ಸಾವಿರಕ್ಕಿಂತ ... ಲೀಡ್ ಸಿಗಲಿದೆ. ಕಾರ್ಕಳದಲ್ಲಿ ಪರಿಸ್ಥಿತಿ ...ಕೂಲಕರವಾಗುತ್ತಿದೆ. ಕಾಪುದಲ್ಲಿ ಸ್ಥಳೀಯ ಶಾಸಕ ...ಮಂತ್ರಿ ವಿನಯಕುಮಾರ್ ಸೊರಕೆ ತಾಕತ್ತು ತೋರಿಸಲು ...ರವಾದರೂ ಲೀಡ್ ಕೊಡಿಸಲಿದ್ದಾರೆ. ಉಡುಪಿಯ ...ವರ ಭಾಗದಲ್ಲಿ ಜೆಪಿಯದೇ ಮೇಲುಗೈ. ಬಿಜೆಪಿಯ ಬೆಂಬಲಿಗರಾದ ಕೊಂಕಣಿ-ಬ್ರಾಹ್ಮಣರಿಗೂ ...ಮ್ಮಿನಿಂದ ಜೆಪಿ ಎಂದರೆ ಚಡ್ಡಿ ಭೂಪರಿಗಿಂತಲೂ ...ಹ್ಯ ರಾಜಕಾರಣಿ! ಏನಿಲ್ಲವೆಂದರೂ ಕರಾವಳಿಯಲ್ಲಿ ... 15-20 ಸಾವಿರ ಲೀಡ್ ಮಾಡಲಿದೆ.


...ಪಿ ಎಂಪಿಯಾಗಿ ಹಲವು ರೈಲು ಯೋಜನೆ ಜಾರಿಗೆ ...ದ್ದಾರೆ. ಅಡಿಕೆ -ಕಾಫಿ ಬೆಳೆಗಾರರ ಹಿತ ಕಾಪಾಡಲು ...ಣಿಕವಾಗಿ ಕರ್ತವ್ಯ ನಿಭಾಯಿಸಿದ್ದಾರೆ. ಮೀನುಗಾರರ ...ಗೆ ಸ್ಪಂದಿಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಯಾರೇ ... ಮಾಡಿದರೂ ತಾನೇ ಸ್ವೀಕರಿಸಿ ಸಮಸ್ಯೆ ಅರಿತು ...ರಕ್ಕೆ ಪ್ರಯತ್ನಿಸಿದ್ದಾರೆ. ಸದಾ ರಿಚೇಬಲ್ ಎಂಪಿ ...ಹೊಂದಿರುವುದೇ ಈಗ ಜೆಪಿ ಅವರನ್ನು ಗೆಲುವಿನತ್ತ ...ಸುತ್ತಿದೆ. ಮೋದಿ ಅಲೆ-ಧರ್ಮದ ಕರ್ಮ...ವಾಗಿರುವ ಉಡುಪಿ-ಚಿಕ್ಕಮಗಳೂರು ಪಕ್ಕಾ ಜಾತಿ ...ಯುದ್ಧದ ಅಖಾಡ. ಕರಾವಳಿಯಲ್ಲಿ ಬಿಲ್ಲವ-ಬಂಟ-...ಪ್ರಾಬಲ್ಯವಾದರೆ, ಮಲೆನಾಡಲ್ಲಿ ಒಕ್ಕಲಿಗ, ಲಿಂಗಾಯತ ...ಪರು ಬಲಾಢ್ಯರು. ಸ್ವ-ಜಾತಿ ಬಂಟರ ಓಟು ...ಗಟಾಗಿ ಪಡೆವ ಜೆಪಿ ಬಿಲ್ಲವರಿಗೂ ಹತ್ತಿರದವರೇ. ...ರ ಸರಳ ನಡೆ-ನುಡಿಗಳೇ ಕಾರಣ. ಅತ್ತ ಮಲೆನಾಡು ಬಯಲುಸೀಮೆಯಲ್ಲಿರುವ 1.50 ಲಕ್ಷ ಅಲ್ಪಸಂಖ್ಯಾತರ ಮತ ಜೆಪಿ ಬಾಚಲಿದ್ದಾರೆ. ಇಲ್ಲಿ ಕರಾವಳಿಯಿಂದ ಬಂದು ನೆಲೆಸಿರುವ ವಲಸಿಗರೂ ಗಣನೀಯ ಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ಶೋಭಕ್ಕನಿಗಿಂತ ಜೆಪಿ ಪರ ಒಲವಿನವರೇ ಜಾಸ್ತಿ. 50 ಸಾವಿರದಷ್ಟಿರುವ ಕುರುಬರು ಸಿದ್ದರಾಮಣ್ಣನಿಂದಾಗಿ ಕಾಂಗ್ರೆಸ್ ಕೈ ಹಿಡಿಯಲಿದ್ದಾರೆ.


ಇನ್ನುಳಿದಿರುವುದು ಒಕ್ಕಲಿಗ-ಲಿಂಗಾಯತ ಬ್ರಾಹ್ಮಣರು. ಇದರಲ್ಲಿ ಯಡ್ಡಿಯಿಂದಾಗ 1.50 ಲಕ್ಷದಷ್ಟಿರುವ ಲಿಂಗಾಯತರಲ್ಲಿ ಬಹುಪಾಲು ಮತ ಶೋಭಕ್ಕ ಪಡೆದರೂ ಒಕ್ಕಲಿಗರು ಒಲಿಯಲಾರರು. ಇದಕ್ಕೆ ಬಿಜೆಪಿಯೊಳಗಿನ ಹಿಕಮತ್ತುಗಳೇ ಕಾರಣ. ಅರೆಭಾಷೆ ಗೌಡತಿಯಾದ ಶೋಭಕ್ಕನಿಗಿಂತ ಒಕ್ಕಲಿಗರೊಂದಿಗೆ ಸೇರಿಕೊಂಡಿರುವ ಬಂಟರ ಜೆಪಿಯೇ ಅವರಿಗೆಲ್ಲ ಪ್ರಿಯವಾಗಿ ಕಾಣುತ್ತಿದ್ದಾರೆ. ಕಳೆದ ಉಪ ಚುನಾವಣೆಯಲ್ಲಿ ಜೆಡಿಎಸ್ 72 ಸಾವಿರ ಮತ ಪಡೆದಿತ್ತು. ಈ ಸಲ ಜೆಡಿಎಸ್‌ನ ಧನಂಜಯ್‌ಕುಮಾರ್ ಎಂಬ ರಂಗೀಲಾ ಅಷ್ಟು ಮತ ಪಡೆಯುವುದೂ ಅನುಮಾನ. ಜೆಡಿಎಸ್‌ಗೆ ಓಟು ಹಾಕಿದರೆ ವೇಸ್ಟ್ ಎಂದು ತೀರ್ಮಾನಿಸಿರುವ ಜೆಡಿಎಸ್ ಪರವಿರುವ ಮತದಾರ ಕಾಂಗ್ರೆಸ್‌ನತ್ತ ನೋಡಬೇಕಾಗಿ ಬಂದಿದೆ.

ಕ್ಷೇತ್ರದಲ್ಲಿನ ಜಾತಿ ಲೆಕ್ಕಾಚಾರ, ಹಣದ ಹಗಾರಣೆ, ಬಿಜೆಪಿಯೊಳಗೆ ಒಳಸುಳಿ, ಕ್ಯಾಂಡಿಡೇಟ್‌ಗಳ ವಿಶ್ವಾಸಾರ್ಹತೆ-ಯೋಗ್ಯತೆ, ಇಲ್ಲದ ಮೋದಿ ಅಲೆ... ಎಲ್ಲ ತಾಳೆ ಹಾಕಿ ನೋಡಿದರೆ ಕಾಂಗ್ರೆಸ್‌ನ ಜೆಪಿಯೇ ಬಲಾಢ್ಯ ಸಮರ್ಥ! ಅಂತಿಮವಾಗಿ ಜೆಪಿಗೇ ಜೈ ಹೋ!!

● ಶುದ್ಧೋಧನ







ಅನಂತ್ ಅವನತಿಗೆ ಮುತಾಲಿಕ್ ಎಂಟ್ರಿ ನಿಲೇಕಣಿ ಎಂಬ ಹೊಸಗಾಳಿ

ಸದ್ಯ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಪದ್ಮನಾಭನಗರ, ಬಸವನಗುಡಿ, ಜಯನಗರ, ವಿಜಯನಗರ ಇತ್ಯಾದಿ ಏರಿಯಾಗಳಲ್ಲಿ ವಿಲಕ್ಷಣ ಕರಪತ್ರವೊಂದು ಸದ್ದಿಲ್ಲದೆ ಹರಿಸುತ್ತಿದೆ. ಅದರ ಕೆಲವು ಸಾಲುಗಳು ಹೀಗಿವೆ:

... ಸತತವಾಗಿ ಐದು ಬಾರಿ ಗೆದ್ದಿರುವ ಅನಂತ್‌ಕುಮಾರ್ ಒಂದಲ್ಲ ಎರಡು ಬಾರಿ ಕೇಂದ್ರ ಮಂತ್ರಿಯಾಗಿ ಈ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯೇನು? ಮೋದಿಗಿಂತಲೂ ಮೊದಲು ಚುನಾಯಿತನಾಗಿ ಮೋದಿಗಿಂತ ಮೊದಲು ಮಂತ್ರಿಯಾಗಿದ್ದ ಅನಂತ್ ತನ್ನ ಹೆಸರಲ್ಲಿ ಏಕೆ ಮತ ಕೇಳುತ್ತಿಲ್ಲ? ಹಾಗೊಮ್ಮೆ ಅವರೊಬ್ಬ ಉತ್ತಮ ನಾಯಕನಾಗಿದ್ದರೆ ಅಂಥಾ ಮೋದಿಯೇ ಅನಂತ್‌ಕುಮಾರ್ ಹೆಸರಲ್ಲಿ ಮತ ಕೇಳಬೇಕಿತ್ತೇ ಹೊರತು ಅನಂತ್ ಮೋದಿಯ ಹೆಸರಲ್ಲಿ ಅಲ್ಲ. ಅಂದು ಬಡವನಾಗಿದ್ದ ಅನಂತ್‌ಕುಮಾರ್ ಇಂದು ಕೋಟಿ ಕೋಟಿ ಲೂಟಿ ಹೊಡೆದು ಕರೋಡ್‌ಪತಿಯಾಗಿರುವುದು ಜನತೆಯ ಹಣದಿಂದಲೇ ತಾನೆ? ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅನಂತ್‌ಕುಮಾರ್ ವಿರುದ್ಧ ಪೊಲೀಸರಿಗೆ ಭ್ರಷ್ಟಾಚಾರದ ದೂರು ದಾಖಲಿಸಿದ್ದಾರೆ.

ಕರ್ನಾಟಕದ ಅಣ್ಣಾ ಹಜಾರೆ ಎಂದೇ ಜನ ಗೌರವಿಸುವ ಎಸ್.ಕೆ. ಹಿರೇಮಠ್ ಬಿಡುಗಡೆಗೊಳಿಸಿರುವ ಅತ್ಯಂತ ಭ್ರಷ್ಟರ ಪಟ್ಟಿಯಲ್ಲಿ ಅನಂತ್ ಹೆಸರೇ ಮುಂಚೂಣಿಯಲ್ಲಿದೆ. ಆ ಪಟ್ಟಿಯಲ್ಲಿ ನನ್ನ ಹೆಸರಿಲ್ಲ ಏಕೆ ಎಂದು ನೀವೇ ಯೋಚಿಸಿ. ಇದು ಬದಲಾವಣೆಯ ಕಾಲ. ಈ ಸುಳ್ಳು ಹಿಂದೂತ್ವವಾದಿ ಗೋಮುಖ ವ್ಯಾಘ್ರ, ಭ್ರಷ್ಟಾಚಾರಿ ರಾಜಕಾರಣಿಯನ್ನು ತ್ಯಜಿಸಿ ಪ್ರಾಮಾಣಿಕ ಹೋರಾಟಗಾರನಾದ ನನಗೆ ತಮ್ಮ ಅಮೂಲ್ಯವಾದ ಮತ ನೀಡಿ ಗೆಲ್ಲಿಸಬೇಕಾಗಿ ಪ್ರಾರ್ಥಿಸುತ್ತೇನೆ. ಹಾಗೊಮ್ಮೆ ನಿಮ್ಮೆಲ್ಲರ ಆಶೀರ್ವಾದದಿಂದ ನಾನು ಗೆದ್ದಿದ್ದೇ ಆದ ಪಕ್ಷದಲ್ಲಿ ನಾನು ಕೂಡ ಖಂಡಿತವಾಗಿ ಮೋದಿಯವರನ್ನೇ ಬೆಂಬಲಿಸುತ್ತೇನೆ..!

ಚಿಗುರಿದ ಕಾಂಗ್ರೆಸ್

ಇದು ಶ್ರೀರಾಮಸೇನೆಯ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ತನ್ನ ಕರಪತ್ರದಲ್ಲಿ ಬಿಚ್ಚಿಡುವ ಕೆಲ ವಿಲಕ್ಷಣ ಸಂಗತಿಗಳು. ಬಹುಶಃ ಮಾಧ್ಯಮಗಳ್ಯಾವವೂ ಹೇಳದ ಇಂಥ ಸಂಗತಿಗಳನ್ನು ಶ್ರೀರಾಮಸೇನೆಯ ಕಾರ್ಯಕರ್ತರು ಪ್ರಮೋದ್ ಮುತಾಲಿಕ್ ಮೂಲಕ ಮನೆಮನೆ ಮುಟ್ಟಿಸುತ್ತಿದ್ದಾರೆ. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಕಳೆದ 18 ವರ್ಷಗಳಿಂದ ಗೆದ್ದು ಬರುತ್ತಿರುವ ಅನಂತ್‌ಕುಮಾರ್ ವಿರುದ್ಧ 2009ರಲ್ಲಿ ಕೇವಲ 35 ಸಾವಿರ ಮತಗಳ ಅಂತರದಿಂದ ಸೋತಿದ್ದ ಕಾಂಗ್ರೆಸ್ ನಾಯಕ ಕೃಷ್ಣ ಭೈರೇಗೌಡ ಈಗ ಮಂತ್ರಿ. ಕಳೆದ ಬಾರಿ ಜೆಡಿಎಸ್ ಕೂಡ ಅನಂತ್ ವಿರುದ್ಧ ಕಣಕ್ಕಿಳಿದಿತ್ತು, ಆಗ ಬಿಜೆಪಿ ಸರ್ಕಾರವಿತ್ತು, ಈಗ ಮೋದಿಯ ಅಲೆಯೇರಿ ಅನಂತ್ ಅಖಾಡಕ್ಕಿಳಿದಿದ್ದಾರೆ.

ಆವತ್ತಿಗೂ ಇವತ್ತಿಗೂ ಅಜಗಜಾಂತರ ವ್ಯತ್ಯಾಸ. ಬಿಜೆಪಿ ಅಧಿಕಾರದಲ್ಲಿಲ್ಲ, ಬೆಂಗಳೂರು ದಕ್ಷಿಣದ ಪದ್ಮನಾಭನಗರ, ಜಯನಗರ, ಬಸವನಗುಡಿ, ಬಿಟಿಎಂ ಲೇಔಟ್, ಬೊಮ್ಮನಹಳ್ಳಿ, ಚಿಕ್ಕಪೇಟೆ, ವಿಜಯನಗರ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಗಳ ಪೈಕಿ ಚಿಕ್ಕಪೇಟೆ ಮತ್ತು ಗೋವಿಂದರಾಜನಗರಗಳು ಬಿಜೆಪಿಯ ಕೈತಪ್ಪಿವೆ. ಮೋದಿ ಅಲೆಗೆ ವಿರುದ್ಧವಾಗಿ ಕೇಜ್ರಿವಾಲ್ ಅಲೆಯಷ್ಟೇ ಅಲ್ಲ ಮಾಹಿತಿ ತಂತ್ರಜ್ಞಾನದ ದಿಗ್ಗಜ ನಂದನ್ ನಿಲೇಕಣಿಯ ಸುಪ್ತ ಅಲೆಯೂ ಒಳಗೊಳಗೇ ಕಾರ್ಯನಿರ್ವಹಿಸುತ್ತಿವೆ. ಕೃಷ್ಣ ಭೈರೇಗೌಡರ ಕಾಲದಂತೆ ಕಾಂಗ್ರೆಸ್ ಅನಾಥವಾಗಿ ಉಳಿದಿಲ್ಲ.

ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಬೊಮ್ಮನಹಳ್ಳಿ, ಪದ್ಮನಾಭನಗರ, ಬಸವನಗುಡಿ ಮತ್ತು ಜಯನಗರಗಳು ಬಿಜೆಪಿ ಅಧೀನಕ್ಕೊಳಪಟ್ಟಿದ್ದರೆ ಚಿಕ್ಕಪೇಟೆ, ಗೋವಿಂದರಾಜನಗರ, ವಿಜಯನಗರ ಮತ್ತು ಬಿಟಿಎಂ ಲೇಔಟ್‌ಗಳನ್ನು ಕಾಂಗ್ರೆಸ್ ಹಿಡಿದಿದೆ. ಗೆದ್ದ ಬಿಜೆಪಿ ಶಾಸಕರು ಪಡೆದ ಲೀಡಿಗೆ ಹೋಲಿಸಿದರೆ ಕಾಂಗ್ರೆಸ್ ಶಾಸಕರು ಪಡೆದಿರುವ ಲೀಡೇ ಹೆಚ್ಚು ತೂಗುತ್ತದೆ. ನಲವತ್ತಕ್ಕೂ ಅಧಿಕ ಬಿಜೆಪಿ ಕೌನ್ಸಿಲರ್‌ಗಳಿದ್ದಾರೆ ನಿಜ. ಮೇಯರ್ ಕಟ್ಟೆ ಸತ್ಯ ಕೂಡ ಇದೇ ವ್ಯಾಪ್ತಿಯವರಾದರೂ ಇಂಥ ಬಹುತೇಕ ಬಿಜೆಪಿ ಕೌನ್ಸಿಲರ್‌ಗಳ ಭ್ರಷ್ಟಾಚಾರದ ಕುರಿತಂತೆ ಜನಕ್ಕೆ ಆಕ್ರೋಶವಿದೆ. ಇಂಥ ಯಾವೊಬ್ಬ ಪಾಲಿಕೆ ಸದಸ್ಯನೂ ಜನಕ್ಕೆ ಮುಖ ತೋರಿಸುವ ಪರಿಸ್ಥಿತಿಯಲ್ಲಿಲ್ಲ.

ನಿಲೇಕಣಿ ಅಲೆ

2009ರ ಹೊತ್ತಿಗೆ ಅನಂತ್‌ಕುಮಾರ್ ಗೆಲ್ಲುವುದಕ್ಕಿಂತ ಮತ್ತೂ ಒಂದು ಕಾರಣವೆಂದರೆ ಆಗಿನ್ನೂ ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಲೈಂಗಿಕ ಹಗರಣಗಳನ್ನು ಜನ ಕಂಡಿರಲಿಲ್ಲ, ಅರ್ಧ ಡಜನ್ ಮಂತ್ರಿಗಳ ಜೊತೆ ಮುಖ್ಯಮಂತ್ರಿಯಿದ್ದಿಯೇ ಜೈಲುಪಾಲಾದ ಪ್ರಸಂಗವಿನ್ನೂ ಸಂಭವಿಸಿರಲಿಲ್ಲ. ಈಗ ಹಾಗಲ್ಲ, ಬಿಜೆಪಿಯ ಸರ್ಕಾರದ ಕುಖ್ಯಾತಿ ಮತ್ತು ಕರ್ಮಕಾಂಡಗಳು ಮತದಾರರ ಕಣ್ಣೆದುರಿಗಿವೆ. ಗೆದ್ದು ಪಾಲಿಕೆಯನ್ನು ಹಿಡಿದ ಬಿಜೆಪಿ ಹೇಗೆ ಬೆಂಗಳೂರನ್ನು ಕಸದ ತಿಪ್ಪೆಗುಂಡಿಯಾಗಿಸಿತು ಮತ್ತು ಬಿಬಿಎಂಪಿಯ ಬಡಪಾಯಿ ಗುತ್ತಿಗೆದಾರರೆಲ್ಲ ಹೇಗೆ ಒಬ್ಬೊಬ್ಬರಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತಾಯ್ತು ಎಂಬುದೂ ಸಾಬೀತಾಗಿಹೋಗಿದೆ.

ಬಿಜೆಪಿಗಾಗಲಿ, ಅನಂತ್‌ಕುಮಾರ್‌ಗಾಗಲಿ, ಬಿಜೆಪಿಯ ಕೌನ್ಸಿಲರ್‌ಗಳಿಗಾಗಲಿ ಹಿಂದಿನ ವರ್ಚಸ್ಸು, ಹಿನ್ನೆಲೆ ಮತ್ತು ಮುಖವಿಲ್ಲ, ಕಾಂಗ್ರೆಸ್ ವಿರುದ್ಧ ಭ್ರಷ್ಟಾಚಾರದ ಏನೇ ಪಟ್ಟಿಕೊಟ್ಟರೂ ಜನಕ್ಕೆ ಬಿಜೆಪಿ ಬಗ್ಗೆ ನಂಬಿಕೆ ಹುಟ್ಟುತ್ತಿಲ್ಲ. ಹೀಗಾಗಿ ಮಾಹಿತಿ ಪ್ರವರ್ತಕ ನಂದನ್ ನಿಲೇಕಣಿ ಅನಂತ್ ವಿರುದ್ಧ ಅಖಾಡಕ್ಕಿಳಿದಿರುವುದು ಬೆಂಗಳೂರು ದಕ್ಷಿಣದ ಮಟ್ಟಿಗೆ ಬಿಡುಗಡೆಯ ಬೆಳಕಾಗಿ ಪರಿಣಮಿಸಿದೆ.

ಮೋದಿ ಅಲೆ, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದರೆ ಅನಂತ್ ಮತ್ತೆ ಮಂತ್ರಿಯಾಗುತ್ತಾರೆ, ಅದು ಬೆಂಗಳೂರಿಗೇ ಲಾಭವಲ್ಲವೆ? ಎಂದು ಅನಂತ್ ಪರ ವಾದಿಗಳು ಏನೇ ಕಾಗೆ ಹಾರಿಸ ಹೊರಟರೂ ಜನ ಮಾತ್ರ 'ಬಿಜೆಪಿ ಸರ್ಕಾರವೇ ಇತ್ತಲ್ರೀ...! ಒಂದಲ್ಲ ಎರಡು ಬಾರಿ ಕೇಂದ್ರ ಮಂತ್ರಿಯಾಗಿ ಅನಂತ್‌ಕುಮಾರ್ ಕಡೆದು ಕಟ್ಟೆ ಹಾಕಿದ್ದನ್ನು ನೋಡಿಲ್ವೇನ್ರಿ...' ಎಂದು ತಿರುಗಿ ಬೀಳುತ್ತಿದ್ದಾರೆ!

ಇದು ಬೆಂಗಳೂರು ದಕ್ಷಿಣದಲ್ಲಿ ಜನಸಾಮಾನ್ಯರ ವಲಯದಲ್ಲಿ ಕಂಡುಬರುವ ಹವಾಮಾನ ಲಕ್ಷಣ. ಸದ್ಯ ಅನಂತ್‌ಕುಮಾರ್ ಮತ್ತು ಬಿಜೆಪಿ ಪಾಲಿಗೆ ದೊಡ್ಡ ತಲೆನೋವಾಗಿರುವುದು ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್‌ರ ಪೈಪೋಟಿ. ಮುತಾಲಿಕ್‌ಗೆ ದೊಡ್ಡಮಟ್ಟದ ಬೆಂಬಲ ಅಥವಾ ಅನುಕೂಲಗಳಿವೆ ಎಂದರ್ಥವಲ್ಲ, ಆದರೆ ಮುತಾಲಿಕ್ ವಿಶೇಷ ಕರಪತ್ರವನ್ನೇ ಹೊರತಂದು ಅನಂತ್‌ರ ಒಂದೊಂದೇ ಮುಖವಾಡವನ್ನು ಕಿತ್ತೆಸೆಯುತ್ತಿದ್ದಾರೆ.

ನೀರಾ ರಾಡಿಯಾ

1998ರ ಮಾರ್ಚ್‌ನಿಂದ 1999ರ ಅಕ್ಟೋಬರ್ ತನಕ ವಾಜಪೇಯಿ ಸಂಪುಟದಲ್ಲಿ ಕೇಂದ್ರ ವಿಮಾನಯಾನ ಖಾತೆ ಮಂತ್ರಿಯಾಗಿದ್ದ ಅನಂತ್‌ಕುಮಾರ್ ತನ್ನ ಅವಧಿಯಲ್ಲಿ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ಬೇಕಾಬಿಟ್ಟಿ ಲಾಭದಾಯಕವಾಗಿತ್ತೆಂದು ಎಷ್ಟೇ ರೈಲು ಬಿಟ್ಟರೂ ದಾಖಲೆಗಳು ಬೇರೆಯದೇ ವಾಸ್ತವವೊಂದನ್ನು ಬಿಚ್ಚಿಡುತ್ತವೆ. ವಿಮಾನಯಾನ ಮಂತ್ರಿಯಾಗಿ ರಾಜ್ಯಸಭೆಯಲ್ಲಿ ಇಲಾಖೆಗೆ 129 ಕೋಟಿ ರೂಪಾಯಿಗಳ ನಷ್ಟ ಸಂಭವಿಸಿದೆಯೆಂದು ಖುದ್ದು ಅನಂತ್‌ಕುಮಾರ್ ನೀಡಿದ ಹೇಳಿಕೆಯೇ ಸಾಕು ಕೇವಲ 15 ತಿಂಗಳಲ್ಲಿ ಅನಂತ್ ಯಾಪಾಟಿ ವಿಮಾನ ಖಾತೆಯನ್ನು ಎಕ್ಕುಡಿಸಿದರೆಂಬುದನ್ನು ಸಾರಿ ಹೇಳಲು-

ಅನಂತ್‌ರ 15 ತಿಂಗಳ ವಿಮಾನ ಖಾತೆ ಮಂತ್ರಿಗಿರಿಯಲ್ಲಿ ಅವರ ಇಡೀ ಇಲಾಖೆಯನ್ನು ಆಳಿದವಳು ನೀರಾ ರಾಡಿಯಾ ಎಂಬ ವಿಷಕನ್ನಿಕೆ. ತನ್ನ ವೈಯ್ಯಾರ, ಯೌವನ, ಸೌಂದರ್ಯ ಮಾತ್ರದಿಂದಲೇ ಅನಂತ್‌ರನ್ನು ಅಡಿಯಾಳಾಗಿಸಿಕೊಂಡ ನೀರಾ ರಾಡಿಯಾ ಮತ್ತು ಅನಂತ್

ಮುತಾಲಿಕ್ ಪರ ವಾಲಿದ ಆರೆಸ್ಸೆಸ್ ಹಿರಿಯರು


ತನ್ನ 18 ವರ್ಷಗಳ ಎಂಪಿಗಿರಿಯಲ್ಲಿ ಅನಂತ್‌ಕುಮಾರ್ ಉದ್ಧಾರ ಮಾಡಿದ್ದು ಆರ್. ಅಶೋಕ್, ವೇದವ್ಯಾಸ ಭಟ್ಟ, ಗಂಭೀರ್, ಸುಬ್ಬಣ್ಣರಂಥ ಚೇಲಾಗಳನ್ನಷ್ಟೇ ಹೊರತು ಪಕ್ಷಕ್ಕಾಗಿ ದುಡಿದ ಯಾರೇ ಒಬ್ಬ ಕಾರ್ಯಕರ್ತನಿಗೂ ನಯಾಪೈಸೆಯ ನೆರವಾಗಲಿಲ್ಲ ಎಂಬ ಅಸಮಾಧಾನ ಕೇವಲ ಬಿಜೆಪಿ ಕಾರ್ಯಕರ್ತರಲ್ಲಷ್ಟೇ ಅಲ್ಲ ತಳಮಟ್ಟದ ಆರೆಸ್ಸೆಸ್ ಕಾರ್ಯಕರ್ತರಲ್ಲೂ ಹೊಗೆಯಾಡುತ್ತಿದೆ.

ವಿಶೇಷವಾಗಿ ಮಾಗಡಿ ರಸ್ತೆ, ಬಸವನಗುಡಿ, ಜಯನಗರ ಭಾಗದ ಹಳೇ ಆರೆಸ್ಸೆಸ್ ಕಾರ್ಯಕರ್ತರನೇಕರು ಸದ್ಯ ಅನಂತ್‌ಕುಮಾರ್ ವಿರುದ್ಧ ತಿರುಗಿ ಬಿದ್ದಿದ್ದಾರೆ. ಗೆದ್ದ ನಂತರ ಕನಿಷ್ಠ ಸಭೆ ಕರೆದು ಕೃತಜ್ಞತೆ ಹೇಳುವಷ್ಟು ಸೌಜನ್ಯ ಕೂಡ ಅನಂತ್‌ಗಿಲ್ಲ ಎಂಬ ಇವರ ಸಿಟ್ಟಿಗೆ ತಕ್ಕಂತೆ ಅನಂತ್ ಮಾಡಿಕೊಂಡ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ಪಟ್ಟಿಯೂ ಕೆಲ ಹಿರಿಯರಲ್ಲಿದೆ. ಈ ರೀತಿ ಅನಂತ್ ವಿರುದ್ಧ ತಿರುಗಿಬಿದ್ದ ಆರೆಸ್ಸೆಸ್ ಮತ್ತು ಬಿಜೆಪಿ ಕಾರ್ಯಕರ್ತರ ಪಾಲಿಗೆ ಆಸರೆಯಂತಿರುವುದು ಪ್ರಮೋದ್ ಮುತಾಲಿಕ್.

ಶ್ರೀರಾಮಸೇನೆಯ ಕಾರ್ಯಕರ್ತರಷ್ಟೇ ಅಲ್ಲದೆ ಅನೇಕ ಹಿರಿಯ ಆರೆಸ್ಸೆಸ್ ಮತ್ತು ಬಿಜೆಪಿ ಕಾರ್ಯಕರ್ತರೂ ರಾಜಾರೋಷವಾಗಿ ಮುತಾಲಿಕ್ ಪರ ಮತ ಯಾಚಿಸುತ್ತಿದ್ದಾರೆ. ಬಿಜೆಪಿ ಮತ್ತು ಅನಂತ್ ಪಾಲಿಗೆ ಬೀಳಲಿದ್ದ ಕನಿಷ್ಠ ಐದು ಸಾವಿರ ಮತಗಳನ್ನಾದರೂ ಕಿತ್ತನೆಂದರೆ ಈ ಪರಿಸ್ಥಿತಿಯಲ್ಲಿ ಅನಂತ್ ಪಾಲಿಗದು ದೊಡ್ಡ ಹಾನಿಯೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ 2014ರ ಚುನಾವಣೆ

ರಾಷ್ಟ್ರಕ್ಕೇ ಮೋದಿ
ರಾಜ್ಯಕ್ಕೆ ಮುತಾಲಿಕ್

ಗುರುತು	ಕ್ರಮ ಸಂಖ್ಯೆ
 ತುತ್ತೂರಿ	17




ಪ್ರಮೋದ್ ಮುತಾಲಿಕ್

1. ನಾನು ಕಳೆದ 40 ವರ್ಷದಿಂದಲೂ ನನ್ನ ಸ್ವಂತ ಜೀವನವನ್ನು ತ್ಯಜಿಸಿ, ಮದುವೆಯಾಗದೆ ಕೇವಲ ದೇಶ ಸೇವೆಗಾಗಿ ಹಗಲು-ಇರುಳು ಎನ್ನದೇ ದುಡಿಯುತ್ತಿದ್ದೇನೆ.
2. ನಾನು ಮಾಡಿದ ಅನೇಕ ಹೋರಾಟಗಳಿಂದ ಇಂದು ಹಿಂದೂ ಹೆಣ್ಣು ಮಕ್ಕಳು ಲವ್ ಜಿಹಾದ್‌ಗೆ ಬಲಿಯಾಗುವುದು ಕಡಿಮೆಯಾಗಿದೆ. ಸಾವಿರಾರು ಗೋ-ಮಾತೆಯ ರಕ್ಷಣೆಯಾಗಿದೆ. ಮೋಸದ ಮತಾಂತರಗಳು ವಿಫಲವಾಗಿವೆ.
3. ನನ್ನ ಹೆಸರು ಇಂದಿಗೂ ಭಯೋತ್ಪಾದಕರ ಹಿಟ್ ಲಿಸ್ಟ್‌ನಲ್ಲಿದೆ. ಆದ್ದರಿಂದ ಸರ್ಕಾರವೇ ನನ್ನ ಭದ್ರತೆಗೆ ಗನ್‌ಮ್ಯಾನ್‌ಗಳನ್ನು ಒದಗಿಸಿದೆ. ಭಯೋತ್ಪಾದಕರು, ಅಂಡರ್ ವರ್ಲ್ಡ್ ಡಾನ್‌ಗಳು ಎಷ್ಟೇ ಬೆದರಿಸಿದ್ದರೂ ನಾನು ಹೆದರುವುದಿಲ್ಲ. ನನ್ನ ಕೊನೆಯ ಉಸಿರಿರುವವರೆಗೂ ದೇಶಕ್ಕಾಗಿ ದುಡಿಯುತ್ತೇನೆ.
4. ನನ್ನ ಹೋರಾಟಗಳನ್ನು ಮುಗಿಸಲು ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ನನ್ನ ಮೇಲೆ 90 ಕೇಸುಗಳನ್ನು ದಾಖಲಿಸಿದ್ದಾರೆ. ಎಲ್ಲಾ ಕೇಸುಗಳು ಗೋಮಾತೆಯ ರಕ್ಷಣೆಗೆ, ಹಿಂದು ಹೆಣ್ಣು ಮಕ್ಕಳನ್ನು ಉಳಿಸಿದ್ದಕ್ಕೆ, ಮತಾಂತರವನ್ನು ತಡೆದಿದ್ದಕ್ಕೆ ಎಂದು ನಿಮ್ಮ ಗಮನದಲ್ಲಿರಲಿ.
5. ಇಂದಿಗೂ ನನ್ನ ಬಳಿಯಲ್ಲಿ ಸ್ವಂತ ಮನೆಯಿಲ್ಲ, ಸ್ವಂತ ಕಾರು ಇಲ್ಲ, ಬ್ಯಾಂಕ್ ಖಾತೆಯಲ್ಲಿ ಹಣವಿಲ್ಲ, ನನ್ನೊಂದಿಗೆ ಇರುವುದು ನಿಮ್ಮ ಆಶೀರ್ವಾದ, ದೇವರ ಕೃಪೆ, ಹೋರಾಟದ ಮನೋಭಾವ ಮಾತ್ರ.

ಮುತಾಲಿಕ್ ಕರಪತ್ರ

ಅಶೋಕಾ ಹೋಟೆಲ್







...ನಾಟದ ಕುರಿತಂತೆ ಪತ್ರಿಕೆ ಆ ಕಾಲಕ್ಕೇ 'ಅನಂತನ ...ನಿಖಾ ಲೇವಿನ್‌ಸ್ಕಿ...' ಎಂಬ ತನಿಖಾ ವರದಿಯನ್ನು ...ಕಿಸಿತ್ತು. ಅನಂತ್ ಆಕೆಯ ಜೊತೆ ಪದೇ ಪದೇ ...ಶ ಯಾತ್ರೆಗೆ ಹೋಗಿದ್ದು, ಆಕೆಗೆಂದು ದೆಹಲಿ ...ರವಲಯದಲ್ಲಿ ಫಾರ್ಮ್‌ಹೌಸ್ ಮತ್ತು ಬಂಗಲೆ ...ದಿಸಿಕೊಟ್ಟಿದ್ದು, ಆಕೆಯ ಅಣತಿಯ ಮೇರೆಗೆ ...ಡಿಯನ್ ಏರ್‌ಲೈನ್ಸ್‌ನ ಲಾಭದಾಯಕ ಏರ್ ...ಟ್ಟುಗಳನ್ನು ಸಿಂಗಾಪೂರ್ ಏರ್‌ಲೈನ್ಸ್ ಕಂಪನಿಗೆ ...ೀ ಕಮ್ಮಿರೇಟಿಗೆ ಮಾರಿದ್ದು ಇದೆಲ್ಲದರ ಫಲವಾಗಿ ...ತ್‌ರನ್ನು ಮುಂದಿಟ್ಟುಕೊಂಡೇ ನೀರಾ ರಾಡಿಯಾ ... ಕೋಟಿ ರೂಪಾಯಿಗಳ ಲಾಭ ಮಾಡಿಕೊಂಡಳು.

...ಹಾಗೆ ಅನಂತ್‌ರ ಬದುಕನ್ನು ಪ್ರವೇಶಿಸಿದ ನೀರಾ ...ಯಾ ಎಂಬ ಮದನಿಕೆಯನ್ನು ಅನಂತ್ ಯಾವ ...ಹೊತ್ತು ಮೆರೆಸಿದರೆಂದರೆ; ಪೇಜಾವರ ಮಠಾಧೀಶರಾದ ...ತೀರ್ಥರನ್ನು ಮುಂದಿಟ್ಟುಕೊಂಡು ಆಕೆಯ ಒಡೆತನದ ... ಒಂದನ್ನು ಹುಟ್ಟು ಹಾಕಿ ಕೋಟ್ಯಾಂತರ ...ಪಾಯಿಗಳ ನಿಧಿಯನ್ನೇ ನಿರ್ಮಿಸಿಕೊಟ್ಟರು. ನೀರಾ ...ಯಾ ಮತ್ತು ಅನಂತ್ ಒಡನಾಟ ತೀರ ವಿಪರೀತಕ್ಕೆ ...ಟ್ಟಿದ್ದನ್ನು ಕಂಡು ಕಂಗಾಲಾದ ಅನಂತ್ ಪತ್ನಿ ತೇಜಸ್ವಿನಿ ...ಸ್ತು ಪ್ರಧಾನಿಯಾಗಿದ್ದ ವಾಜಪೇಯಿ ಕಾಲಿಗೆ ಬಿದ್ದು ...ಸಂಸಾರವನ್ನು ಉಳಿಸುವಂತೆ ಕಣ್ಣೀರಿಟ್ಟ ಫಲವಾಗಿಯೇ ...ಪೇಯಿ ಅನಂತ್‌ರನ್ನು ವಿಮಾನಯಾನ ಖಾತೆಯಿಂದ ... ಸಂಸ್ಕೃತಿ ಮತ್ತು ಯುವಜನ ಸೇವಾ ಇಲಾಖೆಗೆ ...ಗಡಿ ಮಾಡಿಬಿಟ್ಟರು!

ಅಶೋಕಾ ಹೋಟೆಲ್ ಹರಾಜು

...ನಂತರ ಸಂಸ್ಕೃತಿ, ಯುವಜನ ಸೇವೆ ಮತ್ತು ಕ್ರೀಡಾ ...ಖೆಗೆ ಅನಂತ್ ಸಚಿವರಾಗಿದ್ದದ್ದು 2000ರ ...ವರಿವರೆಗೆ ಅಂದರೆ ಕೇವಲ ನಾಲ್ಕು ತಿಂಗಳು ಮಾತ್ರ. ...ಐರು ಕೋಟಿ ಲೆಕ್ಕದ ಕಮಾಯಿ ಮತ್ತು ಮದನಿಕೆ ... ರಾಡಿಯಾಳ ಹರಕತ್ತಿಲ್ಲದೆ ಸಂಸ್ಕೃತಿ ಇಲಾಖೆಯೇ ಅನಂತ್ ಪಾಲಿಗೆ ನಿಷ್ಪ್ರಯೋಜನಕವಾಗಿತ್ತು. ಅನಂತ್ ನಿಷ್ಕ್ರಿಯತೆಯನ್ನು ಕಂಡೇ ವಾಜಪೇಯಿ ಕ್ರೀಡಾ ಇಲಾಖೆ ಕಿತ್ತು ಸಂಸ್ಕೃತಿ ಜೊತೆಗೆ ಪ್ರವಾಸೋದ್ಯಮ ಖಾತೆ ವಹಿಸಿಕೊಟ್ಟರು.

2000ರ ಫೆಬ್ರವರಿಯಿಂದ 2001ರ ತನಕ ಸೆಪ್ಟೆಂಬರ್‌ವರೆಗೆ ಅಂದರೆ ಹೆಚ್ಚೂ ಕಮ್ಮಿ ಒಂದೂವರೆ ವರ್ಷಗಳ ಕಾಲ ಪ್ರವಾಸೋದ್ಯಮ ಮಂತ್ರಿಯಾಗಿದ್ದ ಅನಂತ್ ಕರ್ನಾಟಕದ ಪ್ರವಾಸೋದ್ಯಮಕ್ಕೆ ಬೇಕಾಬಿಟ್ಟಿ ಕೊಡುಗೆ ನೀಡಬಹುದಿತ್ತು. ಮೈಸೂರನ್ನು ಭಾರತದ ಪ್ಯಾರಿಸ್ ಮಾಡುತ್ತೇನೆಂದು ಮೋದಿ ಹೇಳಿದಂತೆ ಕನಿಷ್ಠ ಆ ನಿಟ್ಟಿನಲ್ಲಿ ಪ್ರಯತ್ನವನ್ನಾದರೂ ಮಾಡಬಹುದಿತ್ತು. ಆದರೆ ಅನಂತ್ ತಮ್ಮದೇ ಚಿತ್ರವಿಚಿತ್ರ ರೀತಿಯ 'ಟೂರಿಸಂ ಅಭಿವೃದ್ಧಿ' ವರಸೆಗಳನ್ನು ಮೆರೆದರು. ಆ ಪೈಕಿ ಪ್ರಮುಖವಾದದ್ದು ಬೆಂಗಳೂರಿನಲ್ಲೇ ಸ್ವಂತ ಮನೆಯಿದ್ದೂ ಅಶೋಕಾ ಹೊಟೇಲಿನ 201 ಮತ್ತು 202ನೇ ನಂಬರಿನ ಐಷಾರಾಮೀ ರೂಮುಗಳನ್ನು ತನ್ನ ಶೋಕಿಗೆಂದೇ ಮೀಸಲಿಟ್ಟದ್ದು!

ಪ್ರತಿನಿತ್ಯ 18 ಸಾವಿರ ರೂಪಾಯಿಗಳ ಬಾಡಿಗೆಯ ಇಂಥ ಐಷಾರಾಮಿ ರೂಮುಗಳನ್ನು ಅನಂತ್ ಮಂತ್ರಿಯಾಗಿದ್ದಷ್ಟೂ ಕಾಲ ಅನುಭವಿಸಿದ್ದು ಮತ್ತು ಪ್ರತಿನಿತ್ಯದ ಊಟ, ತಿಂಡಿ, ತೀರ್ಥದ ಹೆಸರಲ್ಲಿ ಲಕ್ಷಾಂತರ ರೂಪಾಯಿಗಳನ್ನು ಹುಡಿ ಹಾರಿಸಿದ್ದೊಂದೇ ಅನಂತ್ ಬೆಂಗಳೂರಿಗೆ ಮಾಡಿದ ಮಹದುಪಕಾರ!

ಇದಲ್ಲದೆ ಕರ್ನಾಟಕಕ್ಕಾದ ಮತ್ತೂ ಒಂದು ಉಪಕಾರವೆಂದರೆ ದೆಹಲಿಯ ಅಶೋಕಾ ಯಾತ್ರಿ ನಿವಾಸ್ ಹೊಟೇಲಿನ ಕಾಳಿದಾಸನೆಂಬ ಅಡುಗೆಯವನನ್ನು ಸತತ 2 ವರ್ಷಗಳ ಕಾಲ ತಮ್ಮ ಮನೆಯ ಅಡುಗೆಗೆಂದು ಬಳಸಿಕೊಂಡಿದ್ದು. ತಿಂಗಳೊಂದಕ್ಕೆ 2 ಲಕ್ಷ ರೂಪಾಯಿಗಳ ಸಂಬಳವುಳ್ಳ ಸರ್ಕಾರಿ ಅಡುಗೆಯವನನ್ನು ಪ್ರವಾಸೋದ್ಯಮದ ಅಭಿವೃದ್ಧಿಗೆಂದು ಬಳಸದೆ ತನ್ನ ನಾಲಿಗೆ ಚಪಲಕ್ಕೆಂದು ಬಳಸಿಕೊಂಡಿದ್ದು ಅನಂತ್ ಸಾಹೇಬರ 'ದೇಶಭಕ್ತಿ'ಗೊಂದು ನಿದರ್ಶನ ಮಾತ್ರ. ಮುಂದೆ ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ ಅನಂತ್ ವಿರುದ್ಧ ಅವರು ಮಾಡಿದ ಗುರುತರ ಆರೋಪವೆಂದರೆ 'ಸರ್ಕಾರಿ ಸೌಮ್ಯದ ಅಶೋಕಾ ಹೋಟೆಲನ್ನು ಖಾಸಗಿ ಕಂಪನಿಗಳಿಗೆ ಮಾರಿಕೊಂಡು ದುಡ್ಡು ಲೂಟಿ ಹೊಡೆದರು...' ಎಂದು.

ಹುಡ್ಕೋ ಹಗರಣ

ಅವರದೇ ಪಕ್ಷದ ಯಡಿಯೂರಪ್ಪ ಮಾಡಿದ ಈ ಆರೋಪಕ್ಕೆ ಅನಂತ್‌ಕುಮಾರ್ ಬಳಿ ಉತ್ತರವಿರಲಿಲ್ಲ. ಇದಾದನಂತರ ಅನಂತ್ 2001ರ ಸೆಪ್ಟೆಂಬರ್‌ನಿಂದ 2003ರ ಜುಲೈವರೆಗೆ ಅಂದರೆ ಹೆಚ್ಚೂಕಮ್ಮಿ 2 ವರ್ಷ ಕಾಲ ನಗರಾಭಿವೃದ್ಧಿ ಮತ್ತು ಬಡತನ ನಿರ್ಮೂಲನ ಖಾತೆಯ ಮಂತ್ರಿಯಾಗಿದ್ದರು. ಹೆಚ್ಚುವರಿಯಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯೂ ಇತ್ತು. ಕರ್ನಾಟಕಕ್ಕೆ ಅದರಲ್ಲೂ ಬೆಂಗಳೂರಿಗೆ ಏನು ಬೇಕಾದರೂ ಮಾಡಬಹುದಿತ್ತು. ಮತ್ತೊಂದು ಕಬ್ಬನ್ ಪಾರ್ಕ್, ಲಾಲ್‌ಬಾಗ್ ಥರದ ಉದ್ಯಾನವನ, ವಿಕ್ಟೋರಿಯಾ, ಬೋರಿಂಗ್ ಥರದ ಮತ್ತಷ್ಟು ಆಸ್ಪತ್ರೆಗಳು, ಮಕ್ಕಳಿಗೆ ಆಟದ ಮೈದಾನಗಳು, ಅಸಂಖ್ಯಾತ ಕೆರೆಗಳ ರಕ್ಷಣೆ, ಹೊಸ ಹೊಸ ಬಸ್‌ನಿಲ್ದಾಣಗಳು ಏನು ಬೇಕಾದರೂ ಮಾಡಬಹುದಿತ್ತು. ಬಡವರಿಗೆಂದೇ ಮನೆಗಳನ್ನು ಕಟ್ಟಿಸಿಕೊಡಬಹುದಿತ್ತು. ಹೆಣ್ಣು ಮಕ್ಕಳ ಮಾನ ಪ್ರಾಣದ ರಕ್ಷಣೆಗೆಂದು ವಿಶೇಷ ಯೋಜನೆಗಳನ್ನು ರೂಪಿಸಬಹುದಿತ್ತು. ಆದರೆ ಅನಂತ್ ಮಾಡಿದ ಮಹಾಸಾಧನೆಯೆಂದರೆ 14,500 ಕೋಟಿ ರೂಪಾಯಿಗಳ ಹುಡ್ಕೋ ಹಗರಣ!

ನಗರವಾಸಿ ಬಡಬಗ್ಗರ ಕ್ಷೇಮಾಭಿವೃದ್ಧಿಗೆಂದು ಹುಡ್ಕೋ ನಿಧಿಯಲ್ಲಿದ್ದ 14,500 ಕೋಟಿ ರೂಪಾಯಿಗಳನ್ನು ಅನಂತ್ ತಮಗೆ ಬೇಕುಬೇಕಾದವರಿಗೆಲ್ಲ ಸಾಲವಾಗಿ ಮಂಜೂರು ಮಾಡಿಬಿಟ್ಟರು. ಈ ರೀತಿ ಸಾಲ ಮಂಜೂರು ಮಾಡುವಾಗ ಪಾಲಿಸಬೇಕಾಗಿದ್ದ ಯಾವುದೇ ನೀತಿನಿಯಮಾವಳಿಗಳನ್ನು ಪಾಲಿಸದೇ ಅಕ್ರಮವೆಸಗಿದ್ದು ಒಂದೆಡೆಯಾದರೆ ಮತ್ತೊಂದೆಡೆ ಯಾರೆಲ್ಲ ತಮಗೆ ಲಂಚ, ಕಮೀಷನ್ ಕೊಡುತ್ತಾರೋ ಅಂಥವರ ನೂರಾರು ಕೋಟಿ ರೂಪಾಯಿಗಳ ಹುಡ್ಕೋ ಸಾಲವನ್ನೇ ಮನ್ನಾ ಮಾಡಿಬಿಟ್ಟರು!

ಇದರಿಂದಾಗಿ ಕೇಂದ್ರ ಸರ್ಕಾರಕ್ಕಾದ ನಷ್ಟ ಬರೋಬ್ಬರಿ 500 ಕೋಟಿ ರೂಪಾಯಿಗಳು. ಅಂದರೆ ಈ 500 ಕೋಟಿಯಷ್ಟನ್ನು ಅನಂತ್ ಕಮೀಷನ್ ರೂಪದಲ್ಲಿ ಜೇಬಿಗಿಳಿಸಿದರೆಂದೇ ಅರ್ಥ ತಾನೆ?

ಇದು ಲೋಕಸಭೆಯಲ್ಲಿ ಇನ್ನೇನು ದೊಡ್ಡ ರಾದ್ಧಾಂತವಾಗಬೇಕೆನ್ನುವಷ್ಟರಲ್ಲಿ ಪ್ರಧಾನಿಯಾಗಿದ್ದ ವಾಜಪೇಯಿ ಜೈಲು ಪಾಲಾಗಲಿದ್ದ ಅನಂತ್‌ರನ್ನು ಬಚಾವು ಮಾಡಬೇಕೆಂದರೆ ಅವರ ಮಂತ್ರಿಗಿರಿ ಕಳೆದು ರಾಜ್ಯ ಬಿಜೆಪಿಯ ಅಧ್ಯಕ್ಷರನ್ನಾಗಿಸಬೇಕಾಯಿತು. ತೋರಿಕೆಗಿದು ರಾಜ್ಯ ಬಿಜೆಪಿಯ ಉದ್ಧಾರಕ್ಕಾಗಿ ಅನಂತ್ ತಮ್ಮ ಕೇಂದ್ರ ಮಂತ್ರಿಗಿರಿಯನ್ನು ತ್ಯಾಗ ಮಾಡಿದಂತೆ ಕಂಡರೂ ವಾಸ್ತವವಾಗಿ ಜೈಲು ಪಾಲಾಗುವುದನ್ನು ತಪ್ಪಿಸಿಕೊಳ್ಳಲು ಅನಂತ್ ಮಾಡಿದ ಷಡ್ಯಂತ್ರವಾಗಿತ್ತು. ತಾನು ಬೆಂಗಳೂರಿನ ಜನರಿಗಾಗಿ ಕಾವೇರಿ 2ನೇ ಮತ್ತು 3ನೇ ಹಂತದ ಕುಡಿಯುವ ನೀರಿನ ಯೋಜನೆ ರೂಪಿಸಿದ್ದೇನೆಂದು ಅನಂತ್ ರೈಲು ಬಿಡುತ್ತಿದ್ದಾರೆ ನಿಜ. ತಮಾಷೆಯೆಂದರೆ ಕಾವೇರಿ 2ನೇ ಮತ್ತು 3ನೇ ಯೋಜನೆ ಶುರುವಾಗುವ ಹೊತ್ತಿಗೆ ಅನಂತ್‌ಗೆ ಕೇವಲ 23 ವರ್ಷ ವಯಸ್ಸು!

ಗಾರ್ಬೇಜ್ ಸಿಟಿ

ಆ ಹೊತ್ತಿಗಿನ್ನೂ ಅನಂತ್ ಸಂಸದನಾಗುವುದಿರಲಿ, ರಾಜಕೀಯಕ್ಕೆ ಬಂದಿರಲಿಲ್ಲ ಬಹುಶಃ ಕಾಲೇಜು ಕೂಡ ಮುಗಿಸಿರಲಿಕ್ಕಿಲ್ಲ!

ಇನ್ನು ಅನಂತ್ ಬೆಂಗಳೂರಿಗೆ ಮಾಡಿದ ಅತೀ ದೊಡ್ಡ ಉಪಕಾರವೆಂದರೆ ಸೌತ್ ಎಂಡ್ ಸರ್ಕಲ್ಲಿನಲ್ಲಿ 90 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ತಮ್ಮ ಸಂಸತ್‌ನಿಧಿ ಬಳಸಿ ಗಡಿಯಾರ ಗೋಪುರವೊಂದನ್ನು ನಿರ್ಮಿಸಿದ್ದು. ಯಾವ ಪುರುಷಾರ್ಥಕ್ಕೆ? ಗೋಪುರದ ಬದಲಿಗೆ ಅದೇ ಜಾಗ ಉಳಿಸಿದ್ದರೆ ಕನಿಷ್ಠ ಮೂರ್ನಾಲ್ಕು ವಾಹನಗಳ ಪಾರ್ಕಿಂಗ್ ಜಾಗವಾದರೂ ಸಿಕ್ಕುತ್ತಿತ್ತು. ದಾರಿಹೋಕರಿಗಾದರೂ ಅನುಕೂಲವಾಗುತ್ತಿತ್ತು. ವಿಪರ್ಯಾಸವೆಂದರೆ ಈ ರೀತಿ ತಮ್ಮ ಸಂಸತ್‌ನಿಧಿಯ 90 ಲಕ್ಷವನ್ನು ಅನಂತ್ ಗೋಪುರ ನಿರ್ಮಿಸಿ ಜನಕ್ಕೆ ಉಪಕರಿಸುವ ಉದ್ದೇಶದಿಂದಲ್ಲ, ತಮ್ಮ ಛೇಲಾ ಕಂಟ್ರಾಕ್ಟರ್ ಒಬ್ಬನ ಉದ್ಧಾರಕ್ಕಾಗಿ. ಜಯನಗರ ಒಂದರಲ್ಲೇ ಐವರು ಹಿರಿಯ ನಾಗರಿಕರ ಹತ್ಯೆಯಾಯಿತು. ಬಿಜೆಪಿ ಅಧಿಕಾರದಲ್ಲಿದ್ದಾಗಲೇ ಅವರದೇ ಪಕ್ಷ ಪಾಲಿಕೆಯನ್ನು ಹಿಡಿದು 100 ಕೋಟಿ ರೂಪಾಯಿಗಳ ಕಸದ ಕರ್ಮಕಾಂಡ ನಡೆಯಿತು. ಸಿಲಿಕಾನ್ ಸಿಟಿ ಖ್ಯಾತಿಯ ಬೆಂಗಳೂರು ಗಾರ್ಬೇಜ್ ಸಿಟಿ ಅಂದರೆ ಕಸದ ತೊಟ್ಟಿಯಾಗಿ ಕುಖ್ಯಾತಿಗೀಡಾಯಿತು. ಸದ್ಯ ಅನಂತ್ ಪಾಲಿಗೆ ಹೇಳಿಕೊಳ್ಳಲು ತನ್ನದೆಂಬ ಒಂದೇ ಒಂದು ಸಾಧನೆಯಿಲ್ಲ. ಅದಮ್ಯ ಚೇತನದ ಹೆಸರಲ್ಲಿ ಶಾಲಾಮಕ್ಕಳಿಗೆ ಊಟ ಕೊಡುತ್ತಿದ್ದೇನೆಂದರೆ ಜನ 'ನಿಮ್ಮ ಸ್ವಂತ ದುಡ್ಡಿನಿಂದ ಕೊಡುತ್ತಿದ್ದೀರಾ? ಸರ್ಕಾರಿ ದುಡ್ಡು ತಂದು ಊಟ ಹಾಕಿಸೋದಕ್ಕೆ ನೀವೇ ಬೇಕಾ?' ಎಂದು ತಿರುಗೇಟು ಕೊಡುತ್ತಾರೆ. ಹೀಗಾಗಿ ತನ್ನದೆಂದು ಅನಂತ್ ಹೇಳಿಕೊಳ್ಳಲು ಇರುವ ಸಾಧನೆಗಳೆಂದರೆ ನೀರಾ ರಾಡಿಯಾ ಸಂಗ, ಹುಡ್ಕೋ ಹಗರಣ, ಅಶೋಕಾ ಹೋಟೆಲ್ ಬಿಕರಿ, ಬೆಂಗಳೂರನ್ನು ತಿಪ್ಪೆಗುಂಡಿಯಾಗಿಸಿದ್ದು, ಅಂತಿಮವಾಗಿ ಅದಮ್ಯ ಚೇತನದ ಹೆಸರಲ್ಲೂ ಪಾಲಿಕೆ ಭೂಮಿ ಕಬಳಿಸಿದ್ದು ಇತ್ಯಾದಿಗಳೆ.

ಇದಕ್ಕೆ ಇರಬೇಕು ಅನಂತ್‌ಕುಮಾರ್ ಮಾತುಮಾತಿಗೆ ಪಾಕಿಸ್ತಾನ, ಬಾಂಗ್ಲಾದೇಶ, ಮುಸ್ಲಿಂ ಟೆರರಿಸಂ, ಕಾಶ್ಮೀರ್ ಇತ್ಯಾದಿಗಳ ಭೋಂಗು ಬಿಡುತ್ತಾರೆ. ಆದರೆ ಈ ಬಾರಿ ಅನಂತ್‌ರ ಇಂಥ ಮಾತುಗಳೆಲ್ಲ ಅರ್ಥ ಕಳೆದುಕೊಂಡಿವೆ. ನಂಬುವ ಸ್ಥಿತಿಯಲ್ಲಿ ಯಾರೂ ಇಲ್ಲ. ಹೀಗಾಗಿ ಬೆಂಗಳೂರು ದಕ್ಷಿಣದ ಮಟ್ಟಿಗೆ ಸದ್ಯ ನಂದನ್ ನಿಲೇಕಣಿ ಎಂಬ ಹೆಸರೇ ಹೊಸಗಾಳಿಯಂತೆ ಬೀಸುತ್ತಿದೆ.

● ರಾ.ಸೋಮನಾಥ್

...ಫ್ಟ್‌ವೇರ್ ಕ್ರಾಂತಿಯ ಹಾಗೆ ನಿಲೇಕಣಿಯ ರಾಜಕೀಯ ಕ್ರಾಂತಿಗೂ ಬೆಲೆಯುಂಟಾ?!



ಮರುಳಸಿದ್ದಪ್ಪ



ಜಿ.ಕೆ. ಗೋವಿಂದರಾವ್



ಗಿರೀಶ್ ಕಾರ್ನಾಡ್



ಅನಂತಮೂರ್ತಿ

... ಹಿಂದೆ ಕೃಷ್ಣಬೈರೇಗೌಡ, ಬಿ.ಕೆ. ಹರಿಪ್ರಸಾದ್ ಥರದವರು ಅನಂತ್‌ಕುಮಾರ್ ...ದ್ಧ ನಿಂತಿದ್ದಕ್ಕೂ ಈಗ ನಿಲೇಕಣಿ ನಿಂತಿದ್ದಕ್ಕೂ ವ್ಯತ್ಯಾಸವಿದೆ. ನಿಲೇಕಣಿ ಮೂಲತಃ ...ಟಿ ತಂತ್ರಜ್ಞಾನ ವಲಯಕ್ಕೆ ಸೇರಿದ್ದರಿಂದಾಗಿ ಸಾಂಪ್ರದಾಯಿಕ ಮತದಾರರಷ್ಟೇ ... ಫೇಸ್‌ಬುಕ್, ಟ್ವಿಟ್ಟರ್‌ಗಳಿಂದ ಪ್ರಭಾವಿತ ಯುವ ಸುಶಿಕ್ಷಿತ ಸಮೂಹವೊಂದು ...ವಾಗಿ ರಾಜಕಾರಣದಲ್ಲಿ ಆಸಕ್ತಿ ವಹಿಸುತ್ತಿದೆ. ಬಹುತೇಕ ಕಾಲೇಜುಗಳಲ್ಲಿ ನಿಲೇಕಣಿ ...ಪರ ವಿದ್ಯಾರ್ಥಿ ಗುಂಪುಗಳು ಹುಟ್ಟಿಕೊಂಡು ಅದರ ವಿರುದ್ಧ ಎಬಿವಿಪಿ ಕಾರ್ಯತಂತ್ರ ...ರೂಪಿಸುತ್ತಿರುವ ಕುರಿತಂತೆ ವರದಿಗಳಿವೆ.

...ಒಂದಾದರೆ ಹಿಂದೂತ್ವಕ್ಕೋ, ಮುಸ್ಲಿಂ ಅಸಹನೆಗೋ ಅನಿವಾರ್ಯವಾಗಿ ಬಿಜೆಪಿಯನ್ನು ...ಬೆಂಬಲಿಸುತ್ತಿದ್ದ ಈ ಗುಂಪು ಈಗ ನಿಲೇಕಣಿ ಬೆಂಬಲಕ್ಕೆ ನಿಂತಿದೆ. ಬೆಂಗಳೂರು ...ದ ವ್ಯಾಪ್ತಿಯ ಯಾವುದೇ ಸುಶಿಕ್ಷಿತ ಮಧ್ಯಮ ವರ್ಗ ಏರಿಯಾಗಳನ್ನು ಗಮನಿಸಿದರೂ ...ಯುವ ಸಮೂಹ ಮೋದಿ ಅಲೆಗೆ ಮರುಳಾಗದೆ ನಿಲೇಕಣಿ ಎಂಬ ಭರವಸೆಯತ್ತ ಆಕರ್ಷಣೆಗೊಂಡಿರುವುದು ಕಾಣಿಸುತ್ತಿದೆ. ಪರಂಪರಾಗತ ಕಾಂಗ್ರೆಸ್ ಓಟುಗಳು, ಜೆಡಿಎಸ್ ಅಭ್ಯರ್ಥಿಯಾಗಿ ರುತ್ ಮನೋರಮಾ ಎಂಬ ಸ್ಲಂ ತಮಿಳರ ನಾಯಕಿ ಕೀಳುವ ಮತಗಳು, ಆಮ್ ಆದ್ಮಿ ಪಕ್ಷದ ಓಟುಗಳೆಲ್ಲ ಕಳೆದರೂ ಸುಶಿಕ್ಷಿತ ಮಧ್ಯಮ ವರ್ಗದ ಯುವ ಸಮೂಹವೊಂದು ನಿಲೇಕಣಿ ಸೃಷ್ಟಿಸಲಿರುವ ಸಾಧ್ಯತೆಗಳು ಮತ್ತು ಅವಕಾಶಗಳ ಬಗ್ಗೆಯೇ ಹೆಚ್ಚು ಆಸಕ್ತಿ ವಹಿಸುತ್ತಿದೆ.

ಈತನಕ ಅನಂತ್‌ಕುಮಾರ್ ಆಳ್ವಿಕೆಯ ಪರಿಚಯ ಈಗಾಗಲೇ ಜನಕ್ಕಾಗಿದೆಯಾದ್ದರಿಂದ ಸಾಫ್ಟ್‌ವೇರ್ ಮಾಂತ್ರಿಕ ನಿಲೇಕಣಿ ಮತ್ತವರ ಬಳಗ ಹೊಸದೇನನ್ನೋ ಮಾಡಿ ತೋರಿಸಲಿದೆಯೆಂಬ ನಿರೀಕ್ಷೆ ಸಹಜವಾಗೇ ದಟ್ಟವಾಗಿದೆ. ನಿಲೇಕಣಿ ಗೆಲ್ಲಲೇಬೇಕೆಂಬ ಪ್ರಜ್ಞಾವಂತರ ಅಭಿಲಾಷೆಗೂ ಇಂಥದ್ದೇ ಕಾರಣವಿದೆ. ಅನಂತ್‌ಮೂರ್ತಿ, ಕಾರ್ನಾಡ್, ಮರುಳಸಿದ್ದಪ್ಪ, ಗೋವಿಂದ ರಾವ್ ಥರದ ಸಾಹಿತಿಗಳು ನಿಲೇಕಣಿ ಪರ ಪ್ರಚಾರಕ್ಕಿಳಿದದ್ದೂ ಈ ನಿಟ್ಟಿನಲ್ಲಿ ಇನ್ನೊಂದು ಅನುಕೂಲವೆ.

ಮಂಡ್ಯ ಕಾಂಗ್ರೆಸ್ಸಿಗರ ಬೀದಿಕಾಳಗಕ್ಕೆ ರಮ್ಯಾ 'ಮಂಡೆ' ಬಿಸಿ!



ಮಂಡ್ಯ ಲೋಕಸಭಾ ಕಣದಲ್ಲಿ ಕಾಂಗ್ರೆಸ್‌ನಿಂದ ಹಾಲಿ ಸಂಸದೆ, ಚಿತ್ರನಟಿ ರಮ್ಯಾ ಪುನರಾಯ್ಕೆ ಬಯಸಿದ್ದರೆ ಜೆಡಿಎಸ್‌ನಿಂದ ಸಿ.ಎಸ್.ಪುಟ್ಟರಾಜು, ಬಿಜೆಪಿಯಿಂದ ದುಡ್ಡಿನ ಕುಳ ಬಿ.ಶಿವಲಿಂಗಯ್ಯ, 'ಬೆಹನ್' ಮಾಯಾವತಿಯ ಬಿಎಸ್‌ಪಿಯಿಂದ ಎಂ.ಕೃಷ್ಣಮೂರ್ತಿ, ಆಮ್‌ಆದ್ಮಿ ಪಾರ್ಟಿಯಿಂದ ಡಾ.ಹನುಮಂತಪ್ಪ ಸೇರಿದಂತೆ **16** ಅಭ್ಯರ್ಥಿಗಳು ಅಖಾಡದಲ್ಲಿದ್ದಾರೆ.

ಪ್ರಸ್ತುತ ಚುನಾವಣೆ ಮಂಡ್ಯದ ಮಟ್ಟಿಗೆ ಅಭ್ಯರ್ಥಿಗಳಿಗಿಂತ ಹೆಚ್ಚಾಗಿ ಪಕ್ಷಗಳಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜೆಡಿಎಸ್ ವರಿಷ್ಠ ದೇವೇಗೌಡರ ಕುಟುಂಬದ ನಡುವಣ ಸೋಲು-ಗೆಲುವಿನ ಲೆಕ್ಕಾಚಾರವೂ ಇಲ್ಲಿ ಮುಖ್ಯವಾಗಿದೆ. ಉಪಚುನಾವಣೆಯಲ್ಲಿ ಕಳೆದುಕೊಂಡಿದ್ದ ಸ್ಥಾನವನ್ನು ಮರಳಿ ಪಡೆಯಲು ಜೆಡಿಎಸ್ ಶತಪ್ರಯತ್ನ ನಡೆಸಿದರೆ, ಪಡೆದು ಕೊಂಡಿದ್ದ ಸ್ಥಾನವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಮುಂದಾಗಿದೆ. ಹಾಗಾಗಿ ಚುನಾವಣೆ ಅಕ್ಷರಶಃ ಜಿದ್ದಾಜಿದ್ದಿನಿಂದ ಕೂಡಿದ್ದು 'ದ್ವೇಷ ರಾಜಕಾರಣ'ದ ನಿಗಿನಿಗಿ ಕೆಂಡ ಬಿರುಬಿಸಿಲಿನ ಮಂಡ್ಯ ಕ್ಷೇತ್ರವನ್ನು ಕಾವೇರಿಸಿದೆ.

ಹೇಳಿಕೇಳಿ ಮಂಡ್ಯ ಜಿಲ್ಲೆ ಜಾ.ದಳದ ಭದ್ರಕೋಟೆ. ಅಂತಹ ಭದ್ರಕೋಟೆಯನ್ನು ಛಿದ್ರಗೊಳಿಸಲು ಚಿತ್ರನಟಿ ರಮ್ಯಾನೇ ಸರಿ ಎಂದು ಭಾವಿಸಿದ ರಾಹುಲ್ ಗಾಂಧಿ ಹಾಗೂ ಸಿದ್ದರಾಮಯ್ಯ ಕೊನೆಗಳಿಗೆಯಲ್ಲಿ ಉಪಚುನಾವಣೆಯಲ್ಲಿ ಕಣಕ್ಕೆ ಇಳಿಸಿ ಜಾ.ದಳದ ತೆಕ್ಕೆಯಿಂದ ಮಂಡ್ಯ ಕ್ಷೇತ್ರವನ್ನು ಕಿತ್ತುಕೊಂಡು ಕಾಂಗ್ರೆಸ್ ಮಡಿಲಿಗೆ ಹಾಕಿಕೊಂಡಿದ್ದರು. ಈ ಬಾರಿಯೂ ರಮ್ಯಾರವರನ್ನೇ ಕಾಂಗ್ರೆಸ್ ಕಣಕ್ಕಿಳಿಸಿದೆ. ಆದರೆ ಈಗ ಪರಿಸ್ಥಿತಿ ಅಷ್ಟು ಸುಲಭವಿಲ್ಲ, ದೇವೇಗೌಡರ ಮಾನಸಪುತ್ರನೆಂದೇ ಗುರುತಿಸಿಕೊಂಡಿರುವ ಸಿ.ಎಸ್.ಪುಟ್ಟರಾಜು ವಿರುದ್ಧ ಕಠಿಣ ಸ್ಪರ್ಧೆಯನ್ನು ರಮ್ಯ ಎದುರಿಸಬೇಕಾಗಿದೆ.

ಲಕ್ಷ್ಮಿಪುತ್ರ ಕಮ್ ಕ್ಯಾಪಿಟಲಿಸ್ಟ್ ಶಿವಲಿಂಗಯ್ಯನನ್ನು ಬಿಜೆಪಿ ಕಣಕ್ಕಿಳಿಸಿದ್ದರೂ ಇಲ್ಲಿ ಜಿದ್ದಾಜಿದ್ದಿನ ಕಾದಾಟ ಇರುವುದು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆಯೇ. ಮಾಯಾವತಿಯವರ ಬಿಎಸ್‌ಪಿ ಎಂ.ಕೃಷ್ಣಮೂರ್ತಿ ಎಂಬ ಉತ್ಸಾಹಿ ಯುವಕನನ್ನು ಕಣಕ್ಕಿಳಿಸಿದೆಯಾದರೂ ಕೇವಲ ದಲಿತ ಮತಗಳನ್ನೇ ನೆಚ್ಚಿಕೊಂಡಿರುವ ಬಿಎಸ್ಪಿ ಕ್ಷೇತ್ರದಲ್ಲಿನ್ನೂ ಅಂಬೆಗಾಲು ಇಡುತ್ತಿದೆ. 'ಆಪ್' ನಿಂದ ಸ್ಪರ್ಧಿಸಿರುವ ಡಾ.ಹನುಮಂತಪ್ಪ ಬೆಂಗಳೂರಿನವರಾಗಿದ್ದು, ಅವರ ಸ್ಪರ್ಧೆ ನಾಮಕಾವಸ್ತೆಯಷ್ಟೇ.

ಕಳೆದ ಉಪಚುನಾವಣೆಯಲ್ಲಿ ಕೇವಲ ಒಂದು ವಾರವಷ್ಟೇ ಪ್ರಚಾರ ನಡೆಸಿ ಗೆದ್ದಿದ್ದ ರಮ್ಯಾ ಪಾಲಿಗೆ ಈ ಬಾರಿಯ ಚುನಾವಣೆ ಕಬ್ಬಿಣದ ಕಡಲೆಯಾಗಿದೆ. ಜಿಲ್ಲಾ ಕಾಂಗ್ರೆಸ್ ಕೃಷ್ಣ ಹಾಗೂ ಅಂಬಿ ಎಂಬ ಎರಡು ಬಣಗಳಾಗಿ ಒಡೆದುಹೋಗಿದ್ದು ರಮ್ಯಾ ಪಾಲಿಗೆ ಅಕ್ಷರಶಃ ತಲೆನೋವು ತಂದಿಟ್ಟಿದೆ. ಎರಡು ಬಣಗಳು ಬಹಿರಂಗವಾಗಿ ಬೈಯುತ್ತಾ ಬೀದಿಗಿಳಿದು ಕಚ್ಚಾಡುತ್ತಿರುವುದು ಮತದಾರರಿಗೆ ಮನರಂಜನೆ ಒದಗಿಸಿದರೆ, ರಮ್ಯಾರ ಪಾಲಿಗೆ ಆತಂಕ ಸೃಷ್ಟಿಸಿದೆ. ಚುನಾವಣೆ ಪ್ರಚಾರ ಸಭೆಗಳಲ್ಲೇ ಎರಡೂ ಬಣಗಳು ಕಚ್ಚಾಟ ನಡೆಸಿ ಪರಸ್ಪರ ಹೊಡೆದಾಡಿಕೊಂಡ ಘಟನೆಗಳು ನಡೆದಿವೆ. ಚುನಾವಣೆ ಸಮೀಪವಿದ್ದರೂ ಕಾಂಗ್ರೆಸ್ಸಿಗರ ಕಚ್ಚಾಟ ಕೊನೆಗೊಂಡಿಲ್ಲ.

ಕಳೆದ ಏಪ್ರಿಲ್ 8ರಂದು ಕಿಕ್ಕೇರಿಯಲ್ಲಿ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಹಾಗೂ ಪ್ರಭಾವಿ ಕಾಂಗ್ರೆಸ್ ನಾಯಕ ಕಿಕ್ಕೇರಿ ಸುರೇಶ್ ನಡುವೆ ದೊಡ್ಡ ಮಾರಾಮಾರಿಯೇ ನಡೆದುಹೋಗಿದೆ. ಕಿಕ್ಕೇರಿಯಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಕೆ.ಬಿ.ಚಂದ್ರಶೇಖರ್ ಮಾತನಾಡಲು ಮುಂದಾದಾಗ ಕಿಕ್ಕೇರಿ ಸುರೇಶ್ ಬೆಂಬಲಿಗರು ಅಡ್ಡಿಪಡಿಸಿದ್ದರು. ಇದಕ್ಕೆ ಕೆ.ಬಿ.ಚಂದ್ರಶೇಖರ್ ಬೆಂಬಲಿಗರು ಆಕ್ರೋಶಗೊಂಡು ಕಿಕ್ಕೇರಿ ಸುರೇಶ್ ಬೆಂಬಲಿಗರಿಗೆ ನಾಲ್ಕು ಬಿಗಿದಿದ್ದರು. ಇಬ್ಬರ ಬೆಂಬಲಿಗರು ಚೇರುಗಳನ್ನು ಎತ್ತಿ ಬಿಸಾಡಿದ್ದಲ್ಲದೆ ಮಾಜಿ ಶಾಸಕ ಎಂಬುದನ್ನು ಮರೆತು ಚಂದ್ರಶೇಖರನನ್ನು ಅಮ್ಮ... ಅಕ್ಕ... ಎಂದೆಲ್ಲಾ ಬಾಯಿಗೆ ಬಂದಂತೆ ಅವಾಚ್ಯವಾಗಿ ಬೈದು ಹಲ್ಲೆ ನಡೆಸಲು ಮುಂದಾಗಿದ್ದರು.

ಕಿಕ್ಕೇರಿ ಸುರೇಶ್ ಮಾತನಾಡಲು ನಿಂತಾಗ, ಸಿಟ್ಟಿನಿಂದ ಕುದಿಯುತ್ತಿದ್ದ ಕೆ.ಬಿ.ಚಂದ್ರಶೇಖರ್ 'ಮಾಜಿ ಶಾಸಕನಾದ ನನಗೆ ಮಾತನಾಡಲು ಅವಕಾಶ ನೀಡದಿರುವಾಗ ನೀನ್ಯಾವನೋ ಮಾತನಾಡಲು ದೊಣ್ಣೆ ನಾಯಕ' ಎಂದಾಗ ಮತ್ತೆ ಉಗ್ರರಾದ ಇಬ್ಬರ ಬೆಂಬಲಿಗರು ಮತ್ತೊಂದು ರೌಂಡ್ ಚೇರುಗಳನ್ನು ಎಸೆದು ಕೈ ಕೈ ಮಿಲಾಯಿಸಿದ್ದರು. ಕೆ.ಬಿ.ಚಂದ್ರಶೇಖರ್ ರಮ್ಯಾರತ್ತ ತಿರುಗಿ 'ಆ ನನ್ಮಗ ಹಾಕಿಸುವ ಮತಗಳನ್ನು ನಾನೇ ಹಾಕಿಸುತ್ತೇನೆ. ಸಭೆ ಮುಕ್ತಾಯ ಮಾಡಿ' ಎಂದು ಸಿಟ್ಟಿನಿಂದ ಕೂಗಾಡಿದ್ದರು. ರಮ್ಯಾ ಎಷ್ಟೇ ಸಮಾಧಾನಪಡಿಸಿದರೂ ಸಭೆ ನಡೆಸಲೂ ಸಾಧ್ಯವಾಗಲಿಲ್ಲ.

ಕೆ.ಆರ್.ಪೇಟೆಯಲ್ಲಿ ಈ ಕಥೆಯಾದರೆ, ಶ್ರೀರಂಗಪಟ್ಟಣದಲ್ಲೂ ಮತ್ತದೇ ಕಥೆ. ಅಂಬಿ ಬಣದ ಸಚ್ಚಿದಾನಂದ ಹಾಗೂ ಅವನ ಮಾವ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್.ಎಲ್.ಲಿಂಗರಾಜು ರಮ್ಯಾ ವಿರುದ್ಧ ಬಹಿರಂಗವಾಗೇ ಮಾತನಾಡುವ ಮೂಲಕ ಭಿನ್ನಮತಕ್ಕೆ ತುಪ್ಪ ಸುರಿಯುತ್ತಿದ್ದಾರೆ. ಎಸ್.ಎಂ.ಕೃಷ್ಣ ಬಣದ ರವೀಂದ್ರ ಶ್ರೀಕಂಠಯ್ಯ ಶ್ರೀರಂಗಪಟ್ಟಣದಲ್ಲಿ ಬಹಳ ಪ್ರಭಾವಿ ಯುವನಾಯಕ. ರವೀಂದ್ರ ಶ್ರೀಕಂಠಯ್ಯನ ವಿರುದ್ಧ ಕೆಂಡಕಾರುವ ಅಂಬರೀಶ್ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಇವರಿಗೆ ಟಿಕೆಟ್ ತಪ್ಪಿಸಿ ತನ್ನ ಆಪ್ತ ಶಿಷ್ಯ ಸಚ್ಚಿದಾನಂದನಿಗೆ ಹೆಣ್ಣುಕೊಟ್ಟ ಮಾವ ಸಿ.ಎಸ್.ಲಿಂಗರಾಜುಗೆ ಟಿಕೆಟ್ ಕೊಟ್ಟಿದ್ದರು. ಇಷ್ಟಿದ್ದರೂ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ರವೀಂದ್ರ ಶ್ರೀಕಂಠಯ್ಯ ಅಂಬಿ ಬೆಂಬಲಿಗ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಲ್.ಲಿಂಗರಾಜುನನ್ನು ಮೂರನೇ ಸ್ಥಾನಕ್ಕೆ ತಳ್ಳಿದ್ದರು. **41** ಸಾವಿರ ಮತ ಪಡೆದ ರವೀಂದ್ರ ಶ್ರೀಕಂಠಯ್ಯ ಅಂಬಿಗೆ ತನ್ನ ಬಲವನ್ನು ತೋರಿಸಿದ್ದರು. ಕಳೆದ ಲೋಕಸಭೆ ಉಪಚುನಾವಣೆಯಲ್ಲಿ ರಮ್ಯಾ ಗೆಲ್ಲುವ ಉದ್ದೇಶದಿಂದ ಸಿಎಂ ಸಿದ್ದರಾಮಯ್ಯ ಮತ್ತು ಪರಮೇಶ್ವರ್ ಅವರು ಅಂಬಿ ಹಾಗೂ ಬೆಂಬಲಿಗರು ಎಷ್ಟೇ ವಿರೋಧಿಸಿದರೂ ಕ್ಯಾರೇ ಎನ್ನದೆ ರವೀಂದ್ರ ಶ್ರೀಕಂಠಯ್ಯನನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡಿದ್ದರು.

ಎಸ್.ಎಲ್.ಲಿಂಗರಾಜುಗಿಂತ ರವೀಂದ್ರ ಶ್ರೀಕಂಠಯ್ಯನೇ ಶ್ರೀರಂಗಪಟ್ಟಣದಲ್ಲಿ ಹೆಚ್ಚು ಪ್ರಭಾವಿ ಎನ್ನುವುದನ್ನು ಅರಿತಿದ್ದ ರಮ್ಯಾ ಅವರನ್ನು ಪ್ರಚಾರಕ್ಕೆ ಕರೆತಂದುದು ಲಿಂಗರಾಜು ಮತ್ತವನ ಅಳಿಯ ಸಚ್ಚಿದಾನಂದನಿಗೆ ಇಷ್ಟವಿರಲಿಲ್ಲ. ಏಪ್ರಿಲ್ 5ರಂದು ರಮ್ಯಾ ಶ್ರೀರಂಗಪಟ್ಟಣ ಕ್ಷೇತ್ರದ ಬೇಲೂರಿನಲ್ಲಿ ರವೀಂದ್ರ ಜೊತೆ ಪ್ರಚಾರ ನಡೆಸುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದ ಎಸ್.ಎಲ್.ಲಿಂಗರಾಜು ಹಾಗೂ ಸಚ್ಚಿದಾನಂದ ರಮ್ಯಾರಿದ್ದ ವಾಹನ ಏರಿದ್ದಾರೆ. ಈ ಮಧ್ಯೆ ಫ್ಲೆಕ್ಸ್‌ನಲ್ಲಿ ಲಿಂಗರಾಜು ಹಾಗೂ ಸಚ್ಚಿದಾನಂದ ಫೋಟೋ ಹಾಕಿಲ್ಲ ಎಂದು ಕ್ಯಾತೆ ತೆಗೆದ ಇವರ ಬೆಂಬಲಿಗರು ರವೀಂದ್ರ ಶ್ರೀಕಂಠಯ್ಯ ವಿರುದ್ಧ ಬೈಯ್ಯಲು ನಿಂತರು. ಇದಕ್ಕೆ ರವೀಂದ್ರರ ಬೆಂಬಲಿಗರು ಪ್ರತಿಯಾಗಿ ಬೈದಾಗ ಎರಡೂ ಗುಂಪುಗಳು ಪರಸ್ಪರ ಬಡಿದಾಡಿಕೊಂಡವು. ರಮ್ಯಾ ಗಲಾಟೆ ಬೇಡ ಎಂದರೂ ಕೇಳದ ಬೆಂಬಲಿಗರು ರಕ್ತ ಬರುವ ಹಾಗೆ ಹೊಡೆದಾಡಿಕೊಂಡರು. ಕೊನೆಗೆ ಬೇಸತ್ತ ರಮ್ಯಾ ವಾಹನ ಇಳಿದು ಹೊರಟುಹೋದರು. ಇದರಿಂದ ಸಿಟ್ಟಿಗೆದ್ದ ರವೀಂದ್ರ ಶ್ರೀಕಂಠಯ್ಯ ಅಂಬರೀಶ್ ಹಾಗೂ ಅವರ ಬೆಂಬಲಿಗರಿಗೆ ರಮ್ಯಾ ಗೆಲ್ಲುವುದು ಇಷ್ಟವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮದ್ದೂರು ಕ್ಷೇತ್ರದಲ್ಲೂ ಮಧು ಜಿ.ಮಾದೇಗೌಡ ಬೆಂಬಲಿಗರನ್ನು ಕಂಡರೆ ಎಸ್.ಎಂ.ಕೃಷ್ಣರ ತಮ್ಮ ಎಸ್.ಎಂ.ಶಂಕರ್ ಹಾಗೂ ಮಗ ಗುರುಚರಣ್‌ಗೆ ಆಗದು. ಒಂದು ಬಣವನ್ನು ರಮ್ಯಾ ಓಲೈಸಿದರೆ ಮತ್ತೊಂದು ಬಣಕ್ಕೆ ಸಿಟ್ಟು. ಪಾಂಡವಪುರದಲ್ಲಿ ಅಂಬಿ ಶಿಷ್ಯ ಎಲ್.ಡಿ.ರವಿ ಕಂಡರೆ ಮಾಜಿ ಶಾಸಕ ಹಲಗೇಗೌಡರ ಮಗ ಮಂಜುನಾಥ್‌ಗೆ ಅಷ್ಟಕಷ್ಟೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೇವಲ ಎರಡೂವರೆ ಸಾವಿರ ಚಿಲ್ಲರೆ ಮತ ಪಡೆದು ಕಾಂಗ್ರೆಸ್ ಪಕ್ಷದ ಮಾನವನ್ನು ಹೀನಾಯವಾಗಿ ಕಳೆದ ಎಲ್.ಡಿ.ರವಿಯಿಂದ ನಯಾಪೈಸೆ ಪ್ರಯೋಜನ ಇಲ್ಲ ಎಂದು ಬಹಿರಂಗವಾಗಿ ಅಂಬಿ ವಿರೋಧಿ ಗುಂಪು ಕೂಗುತ್ತದೆ.



ಹಾಗೆಯೇ ಮಂಡ್ಯದಲ್ಲಿ ಎಸ್.ಎಂ.ಕೃಷ್ಣರ ಗುಂಪಿನ ಆತ್ಮಾನಂದ, ಸತ್ಯಾನಂದ ಕಂಡರೆ ಅಂಬಿ ಬೆಂಬಲಿಗರಾದ ಅಮರಾವತಿ ಚಂದ್ರಶೇಖರ್, ಪಿ.ಎಂ.ಸೋಮಶೇಖರ್, ರವಿಶಂಕರೇಗೌಡ, ಬಿ.ಸಿ.ಶಿವಾನಂದ, ಬೇಲೂರು ಸೋಮಶೇಖರ್ ಮೊದಲಾದವರಿಗೆ ಆಗುವುದೇ ಇಲ್ಲ, ಹಾಗಾಗಿ ಜಿಲ್ಲಾಧ್ಯಕ್ಷ ಆತ್ಮಾನಂದರನ್ನು ಕಿತ್ತೊಗೆದು ಬಿ.ಸಿ.ಶಿವಾನಂದರನ್ನು ಅಧ್ಯಕ್ಷರನ್ನಾಗಿಸಬೇಕೆಂದು ಅಂಬಿ ಬಣ ಕಸರತ್ತು ನಡೆಸಿದರೂ ಸಿಎಂ ಸಿದ್ದರಾಮಯ್ಯ ಮತ್ತು ಕಾಂಗ್ರೆ. ರಾಜ್ಯಾಧ್ಯಕ್ಷ ಪರಮೇಶ್ವರ್ ಇದುವರೆಗೂ ಸೊಪ್ಪು ಹಾಕಿಲ್ಲ, ಹಾಗಂತ ಅಂಬಿ ಬಣದ ವಿರೋಧ ಕಟ್ಟಿಕೊಳ್ಳಲು ಬಯಸದ ಮುಖಂಡರು ಅಂಬಿ ಶಿಷ್ಯ ಸೋಮಶೇಖರ್‌ನನ್ನು ಕಾರ್ಯಾಧ್ಯಕ್ಷರಾಗಿ ಮಾಡಿ ತೇಪೆ ಹಾಕಿದ್ದರಿಂದ ಈಗ ಎರಡೂ ಗುಂಪುಗಳು ರಮ್ಯಾ ಪರವಾಗಿ ಪ್ರಚಾರ ನಡೆಸುತ್ತಿವೆ.

ನಾಗಮಂಗಲದಲ್ಲಿ ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡ ಹಾಗೂ ಸುರೇಶ್ ಗೌಡ ಎಂಬ ಎರಡು ಬಣಗಳಿದ್ದರೂ ಕಾರ್ಯಕರ್ತರಲ್ಲಿ ಅಷ್ಟಾಗಿ ಒಡಕಿಲ್ಲ, ಅಂಬಿ ಬಣದೊಂದಿಗೆ ಪ್ರಾರಂಭದಲ್ಲೇ ಗುರುತಿಸಿಕೊಂಡಿದ್ದ ಎಲ್.ಆರ್.ಶಿವರಾಮೇಗೌಡ ಪ್ರಾರಂಭದಲ್ಲಿ ರಮ್ಯಾ ವಿರುದ್ಧ ಹೇಳಿಕೆ ನೀಡುತ್ತಿದ್ದರು. ಕೊನೆಗೆ ಅದ್ಯಾರು ಬುದ್ಧಿ ಹೇಳಿದರೋ ಈಗ ಎಲ್.ಆರ್.ಶಿವರಾಮೇಗೌಡ ರಮ್ಯಾ ಜೊತೆ ಜೊತೆಯೇ ಪ್ರಚಾರ ಮಾಡುತ್ತಿದ್ದಾರೆ. ಇದು ಅಂಬಿ ಶಿಷ್ಯರ ಕಣ್ಣುರಿಗೆ ಕಾರಣವಾಗಿದೆ. ಮಾಜಿ ಶಾಸಕ ಸುರೇಶ್ ಗೌಡ ಮಾತ್ರ ತಮ್ಮ ಪಾಡಿಗೆ ರಮ್ಯಾ ಪರ ಪ್ರಚಾರದಲ್ಲಿ ನಿರತರಾಗಿದ್ದಾರೆ.



ಇದ್ದುದರಲ್ಲಿ ಕಾಂಗ್ರೆಸ್ ನಿಟ್ಟುಸಿರು ಬಿಡಬಹುದಾದ ಕ್ಷೇತ್ರವೆಂದರೆ ಮಳವಳ್ಳಿ, ಇಲ್ಲಿ ಕಾಂಗ್ರೆಸ್‌ಗೆ ಭಿನ್ನಮತ ಇಲ್ಲವೆಂದೇ ಹೇಳಬಹುದು. ಶಾಸಕ ನರೇಂದ್ರಸ್ವಾಮಿಯೇ ಪವರ್‌ಫುಲ್ ನಾಯಕ ಆಗಿರುವುದರಿಂದ ಇಲ್ಲಿ ಅಂಬಿ ಬಣವೇ ಇಲ್ಲ, ಸಿ.ಎಂ.ಸಿದ್ದರಾಮಯ್ಯ ಹಾಗೂ ಪರಮೇಶ್ವರ್‌ರನ್ನು ಕರೆಸಿ ಪ್ರಚಾರ ನಡೆಸಿರುವ ನರೇಂದ್ರಸ್ವಾಮಿ ಕಳೆದ ಬಾರಿಗಿಂತ **(23,000)** ಹೆಚ್ಚಿನ ಲೀಡ್ ಕೊಡಿಸಲು ಯತ್ನಿಸುತ್ತಿರುವುದು ರಮ್ಯಾ ಪಾಲಿಗೆ ಆಶಾದಾಯಕ ಬೆಳವಣಿಗೆ. ಈ ಮಧ್ಯೆ ಮೈಸೂರಿಗೆ ಬಂದಿದ್ದ ಸೋನಿಯಾ ಗಾಂಧಿ ರಮ್ಯಾ ಪರ ಮತ ಕೇಳಿರುವುದು ಸಮಾಧಾನ ತಂದಿದೆ. ಅನಾರೋಗ್ಯದಿಂದ ಚೇತರಿಸಿಕೊಂಡಿರುವ ಅಂಬರೀಶ್ ಇನ್ನೊಂದೆರಡು ದಿನಗಳಲ್ಲಿ ಮಂಡ್ಯಕ್ಕೆ ಆಗಮಿಸಿ, ಪ್ರಚಾರಕಾರ್ಯದಲ್ಲಿ ಭಾಗವಹಿಸಲಿರುವುದು ರಮ್ಯಾ ನಿಟ್ಟುಸಿರು ಬಿಡುವಂತೆ ಮಾಡಿದೆ.

ಕೃಷ್ಣ ಸಂಧಾನ ವಿಫಲ

ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ರಮ್ಯಾ ಕಾಂಗ್ರೆಸ್‌ನ ಯುವರಾಜ ರಾಹುಲ್ ಗಾಂಧಿ ಆಪ್ತ ಬಳಗದಲ್ಲಿರುವುದರಿಂದ ಅವರನ್ನು ಗೆಲ್ಲಿಸಲೇಬೇಕೆಂಬ ಆದೇಶ ದಿಲ್ಲಿಯಿಂದ ರವಾನೆಯಾಗಿದೆ. ಅದಕ್ಕಾಗಿ ಸಿದ್ದರಾಮಯ್ಯ ಹಾಗೂ ಪರಮೇಶ್ವರ್ ಜಿಲ್ಲಾ ಕಾಂಗ್ರೆಸ್‌ನಲ್ಲಿರುವ ಭಿನ್ನಮತ ಶಮನಕ್ಕೆ ಮುಂದಾಗಿ ಎಸ್.ಎಂ.ಕೃಷ್ಣ ಹಾಗೂ ಅಂಬಿ ಬಣಗಳನ್ನು ಸಮಾಧಾನಪಡಿಸಲು ಸಾಕಷ್ಟು ಪ್ರಯತ್ನಿಸಿದ್ದಾರೆ. ಅದರ ಭಾಗವಾಗಿ ಎಸ್.ಎಂ.ಕೃಷ್ಣ ಮನೆಗೆ ತೆರಳಿದ ಸಿದ್ದರಾಮಯ್ಯ ಹಾಗೂ ಪರಮೇಶ್ವರ್ ರಾಜ್ಯಾದ್ಯಂತ ಪ್ರಚಾರಕ್ಕೆ ಬರುವಂತೆ ಎಸ್.ಎಂ.ಕೃಷ್ಣರನ್ನು ಆಹ್ವಾನಿಸಿದ್ದಲ್ಲದೆ ಮಂಡ್ಯದಲ್ಲಿ ತಾರಕಕ್ಕೇರಿರುವ ಭಿನ್ನಮತ ಬಗೆಹರಿಸುವಂತೆ ಕೇಳಿಕೊಂಡಿದ್ದರು. ಅದರಂತೆ ತನ್ನ ಬೆಂಬಲಿಗರು ಹಾಗೂ ಅಂಬಿ ಬೆಂಬಲಿಗರನ್ನು ಕರೆಸಿಕೊಂಡ ಕೃಷ್ಣ ಭಿನ್ನಾಭಿಪ್ರಾಯ ಮರೆತು ರಮ್ಯಾ ಪರ ಕೆಲಸ ಮಾಡುವಂತೆ ಸಂಧಾನ ನಡೆಸಿದ್ದರು. ನಂತರ ಎಸ್.ಎಂ.ಕೃಷ್ಣ ಕೂಡ 'ಮಂಡ್ಯ ಕಾಂಗ್ರೆಸ್‌ನಲ್ಲಿ ನಟ್ಟು ಬೋಲ್ಟು ಸ್ವಲ್ಪ ಸಡಿಲವಾಗಿತ್ತು, ಈಗ ಟೈಟ್ ಮಾಡಿದ್ದೇನೆ' ಅಂತ ಥೇಟ್ ಮೆಕ್ಯಾನಿಕ್ ರೀತಿ ಡೈಲಾಗ್ ಹೊಡೆದಿದ್ದರು. ಅದಾಗಿ ಎರಡು ದಿನವೂ ಕಳೆದಿಲ್ಲ, ಆಗಲೇ ಎಸ್.ಎಂ.ಕೃಷ್ಣ ಹಾಗೂ ಅಂಬಿ ಬೆಂಬಲಿಗರ ಮಧ್ಯೆ ಮಳವಳ್ಳಿ, ಕೆ.ಆರ್.ಪೇಟೆ ನಗರ ಬಿಟ್ಟು ಉಳಿದ ತಾಲ್ಲೂಕುಗಳಲ್ಲಿ ಬಹಿರಂಗ ಮಾರಾಮಾರಿಯೇ ನಡೆದಿದೆ. ಕೃಷ್ಣರ ಮೆಕ್ಯಾನಿಕ್‌ಗಿರಿ ಸರಿಯಾಗಿ ನಡೆದಿಲ್ಲ ಎನ್ನುವುದಕ್ಕೆ ಈ ಮಾರಾಮಾರಿಗಳೇ ಸಾಕ್ಷಿ.

ಒಟ್ಟಾರೆ ಜಿಲ್ಲಾ ಕಾಂಗ್ರೆಸ್‌ನಲ್ಲಿರುವ ಬಹಿರಂಗ ಕಚ್ಚಾಟದ ನಡುವೆ ರಮ್ಯಾ ಏಗುತ್ತಿದ್ದಾರೆ. ಎಲ್ಲಿ ಇದು ಚುನಾವಣೆಯ ಮೇಲೆ ಪರಿಣಾಮ ಬೀರುವುದೋ ಎಂಬ ಆತಂಕದಲ್ಲಿ ರಮ್ಯಾ ಪ್ರಚಾರ ನಡೆಸುತ್ತಿದ್ದಾರೆ. ಕೇವಲ ಕಾಂಗ್ರೆಸ್ ಪಕ್ಷದೊಳಗಿನ ಕಚ್ಚಾಟವಲ್ಲದೆ ರೈತಸಂಘದೊಳಗಿನ ಒಡಕು ರಮ್ಯಾ ಗೆಲುವನ್ನು ಬಾಧಿಸುತ್ತಿದೆ. ಒಂದುಕಡೆ ರೈತಸಂಘದ ಮುಖಂಡ ಹಾಗೂ ಹಾಲಿ ಶಾಸಕ ಪುಟ್ಟಣ್ಣಯ್ಯ, ಶ್ರೀರಂಗಪಟ್ಟಣದ ಕೆ.ಎಸ್.ನಂಜೇಗೌಡ ಮೊದಲಾದವರು ರಮ್ಯಾರನ್ನು ಬೆಂಬಲಿಸುವುದಾಗಿ ಹೇಳಿದರೆ ಅದೇ ಶ್ರೀರಂಗಪಟ್ಟಣದ ರೈತ ಮುಖಂಡರುಗಳಾದ ಸ್ವಾಮಿಗೌಡ ಮತ್ತು ಮಂಜೇಶ್‌ಗೌಡ ಮೊದಲಾದವರು ರಮ್ಯಾರಿಗೆ ವಿರುದ್ಧವಾಗಿ ಕೆಲಸ ಮಾಡುವುದಾಗಿ ಹೇಳಿಕೊಂಡಿದ್ದಾರೆ. ರೈತ ಸಂಘದ ಈ ಭಿನ್ನಾಭಿಪ್ರಾಯವೂ ರಮ್ಯಾಗೆ ಕೊಂಚ ಹಿನ್ನಡೆ ತರಬಹುದು.

ಜೆಡಿಎಸ್‌ನಲ್ಲಿ ಒಗ್ಗಟ್ಟು

ಈ ಬಾರಿ ಶತಾಯಗತಾಯ ಮಂಡ್ಯ ಕ್ಷೇತ್ರದಿಂದ ಸಿ.ಎಸ್.ಪುಟ್ಟರಾಜು ಗೆಲ್ಲಿಸಿಕೊಂಡು ಬರಬೇಕೆಂದು ದೊಡ್ಡಗೌಡರು ಫರ್ಮಾನು ಹೊರಡಿಸಿರುವುದನ್ನು ಕಂಡೇ ಜೆಡಿಎಸ್ ಶಾಸಕರು, ಮುಖಂಡರೆಲ್ಲಾ ಭಿನ್ನಮತ ಮರೆತು ಒಗ್ಗಟ್ಟಾಗಿ ಪುಟ್ಟರಾಜು ಪರ ಪ್ರಚಾರದಲ್ಲಿ ತೊಡಗಿದ್ದಾರೆ. ಜೆಡಿಎಸ್ ಟಿಕೆಟ್ ಮೇಲೆ ಕಣ್ಣಿಟ್ಟಿದ್ದ ಡಿ.ಸಿ.ತಮ್ಮಣ್ಣನ ಪುತ್ರ ಸಂತೋಷ್‌ನನ್ನು ಸಮಾಧಾನಪಡಿಸಿದ ದೇವೇಗೌಡ ಹಾಗೂ ಕುಮಾರಸ್ವಾಮಿ ಪುಟ್ಟರಾಜು ಗೆಲ್ಲಿಸುವ ಹೊಣೆಯನ್ನು ಶಾಸಕರಾದ ಚಲುವರಾಯಸ್ವಾಮಿ ಹಾಗೂ ಡಿ.ಸಿ.ತಮ್ಮಣ್ಣನ ಹೆಗಲಿಗೆ ಹಾಕಿದ್ದಾರೆ. ಈ ಬಾರಿ ಶಾಸಕ ಚಲುವರಾಯಸ್ವಾಮಿಯ ನೇತೃತ್ವದಲ್ಲೇ ಪುಟ್ಟರಾಜು ಚುನಾವಣೆ ಕಣಕ್ಕೆ ಇಳಿದಿದ್ದಾರೆ. ಹಣಕಾಸಿನ ಸಂಪೂರ್ಣ ಉಸ್ತುವಾರಿ ಚಲುವರಾಯಸ್ವಾಮಿ ಕೈಯಲ್ಲಿದೆ. ಹಾಗಾಗಿ ಕಳೆದ ಉಪಚುನಾವಣೆಗಿಂತ ಈ ಬಾರಿ ಜೆಡಿಎಸ್ ಶಾಸಕರು ಮೈಚಳಿ ಬಿಟ್ಟು ಪುಟ್ಟರಾಜು ಗೆಲ್ಲಿಸಲು ಹೆಣಗಾಡುತ್ತಿದ್ದಾರೆ. ಕ್ಷೇತ್ರ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಐದರಲ್ಲಿ ಜೆಡಿಎಸ್ ಶಾಸಕರೇ ಇದ್ದರೂ ಉಪಚುನಾವಣೆಯಲ್ಲಿ ಜೆಡಿಎಸ್ ಸೋತದ್ದನ್ನು ಕಂಡು ಸಿಡಿಮಿಡಿಗೊಂಡ ದೇವೇಗೌಡರು 'ಈ ಬಾರಿ ಪುಟ್ಟರಾಜು ಗೆಲ್ಲಿಸಲೇ ಬೇಕು. ಇದು ಪಕ್ಷದ ಮಾನ-ಮರ್ಯಾದೆ ಪ್ರಶ್ನೆ. ಕಳೆದ ಉಪಚುನಾವಣೆಯಲ್ಲಿ ತೋರಿಸಿದ ಆಟವನ್ನೇ ಈ ಬಾರಿ ತೋರಿಸಿದರೆ ಹುಷಾರ್' ಎಂದು ರವಾನಿಸಿದ ಎಚ್ಚರಿಕೆಯೇ ಜೆಡಿಎಸ್ ಒಗ್ಗಟ್ಟಿನ ಹಿಂದಿರುವ ರಹಸ್ಯ.

ಇತ್ತೀಚೆಗೆ ಪ್ರಚಾರಕ್ಕೆಂದು ಮಂಡ್ಯಕ್ಕೆ ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಸಲವೂ ಜೆಡಿಎಸ್‌ಗೆ ಸೋಲೇ ಗತಿ ಎಂದು ಲೇವಡಿ ಮಾಡಿದ್ದನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿರುವ ದೇವೇಗೌಡರು 'ಜೆಡಿಎಸ್ ಪಕ್ಷದ ಕೈಬಿಡಬೇಡಿ. ರೈತರ ಪರ ಹೋರಾಡಲು ಅವಕಾಶ ನೀಡಿ' ಎಂದು ಮತದಾರರ ಮೇಲೆ ಭಾವನಾತ್ಮಕ ಅಸ್ತ್ರ ಬಳಸುತ್ತಾ ಜಿಲ್ಲೆಯಾದ್ಯಂತ ಬಿರುಸಿನ ಪ್ರಚಾರ ನಡೆಸಿದ್ದಾರೆ. ಈ ಬಾರಿಯೂ ಸೋತರೆ ರಾಮನಗರದಂತೆ, ಮಂಡ್ಯವೂ ಕೈತಪ್ಪಿ ಹೋಗುವ ಭೀತಿಗೆ ಬಿದ್ದಿರುವ ದೇವೇಗೌಡ ಮತ್ತು ಕುಮಾರಸ್ವಾಮಿ ಜೆಡಿಎಸ್ ಪಕ್ಷದ ಕೈಬಿಡಬೇಡಿ ಎಂದು ಕಣ್ಣೀರು ಹಾಕುತ್ತಾ ಸೆಂಟಿಮೆಂಟಲ್ ಡೈಲಾಗ್ ಹೊಡೆಯುತ್ತಿದ್ದಾರೆ.

ಸ್ವತಃ ಶಾಸಕ ಡಿ.ಸಿ.ತಮ್ಮಣ್ಣ ಪುಟ್ಟರಾಜುರನ್ನು ಕರೆದುಕೊಂಡು ಬಿರುಬಿಸಿಲನ್ನು ಲೆಕ್ಕಿಸದೆ ತಮ್ಮ ಕ್ಷೇತ್ರದಲ್ಲಿ ಸುತ್ತುತ್ತಿದ್ದಾರೆ. ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಕೆ.ಸಿ.ನಾರಾಯಣಗೌಡ, ಕೆ.ಆರ್.ನಗರದ ಶಾಸಕ ಸಾ.ರಾ.ಮಹೇಶ್ ತಮ್ಮ ಕ್ಷೇತ್ರಗಳಲ್ಲಿ ಪುಟ್ಟರಾಜು ಪರ ಮೈಚಳಿ ಬಿಟ್ಟು ಕೆಲಸ ಮಾಡುತ್ತಿರುವುದು ಪುಟ್ಟರಾಜುಗೆ ಪ್ಲಸ್ ಪಾಯಿಂಟ್.

● ಮಂಡ್ಯ ನಾಗೇಶ್


...ಾಗಲಕೋಟೆ: 'ಗದ್ದುಗೆ'ಯಿಂದ ಬೀಳಲಿರುವ ಗದ್ದಿಗೌಡರ್!

...ಎರಡು ಬಾರಿ ಜಾತಿಮತಗಳನ್ನು ಹೊಂಚಿ ...ವನಾಗಿದ್ದ ಬಿಜೆಪಿಯ ಪಿ.ಸಿ.ಗದ್ದಿಗೌಡರ 'ಗದ್ದುಗೆ' ...ಗಲೇ ಅಲ್ಲಾಡತೊಡಗಿದೆ. ಏಪ್ರಿಲ್ 17ರಂದು ಈ ...ಗೆ ಮತದಾರ ಗುದ್ದು ಕೊಡುವುದೊಂದೇ ಬಾಕಿ ...ದಿದೆ... ಅಲ್ಲಿಗೆ ಶೋಕಿಲಾಲ ಗದ್ದಿಗೌಡರನ ...ಯಾತ್ರ ಖತಂ...

...ತಾಶನಾಗಿರುವ ಗದ್ದಿಗೌಡರ್ ಈಗ 'ಮೋದಿ ಅಲೆ' ...ಬಡಬಡಿಸುತ್ತ ಓಟು ಗಿಟ್ಟಿಸಲು ಹರಸಾಹಸ ...ತ್ತಿದ್ದಾನೆ. ಆ ನಿಟ್ಟಿನಲ್ಲಿ ಇದೇ ಏಪ್ರಿಲ್ 8ರಂದು ...ಲಕೋಟೆಗೆ ಮೋದಿಯನ್ನು ಕರೆಸಿದ್ದ. ಎಲ್ಲ ಕಡೆ ...ಮುವಂತೆ ಇಲ್ಲಿಯೂ ಬಸ್ಸು, ಲಾರಿಗಳಲ್ಲಿ ಜನರನ್ನು ...ತ್ತು ತಂದಿದ್ದಷ್ಟೇ ಸಾಧನೆ! ಇಲ್ಲಿ ಮೋದಿಯ ಅಲೆಯೂ ... ಅವನ ಮಂಕುಬೂದಿಯೂ ಕೆಲಸ ಮಾಡುತ್ತಿಲ್ಲ.

...ದೆಲ್ಲ ಇರಲಿ, 2004ರಿಂದ ಇಲ್ಲಿವರೆಗೆ ಈ ಎಂಪಿ ...ಶಯ ಮಾಡಿದ್ದಾದರೂ ಏನು? ಏನೇನೂ ಇಲ್ಲ. ...ತ ಆತನ ಜಾತಿಬಾಂಧವರಾದ ಗಾಣಿಗರೇ ಆಕ್ರೋಶ ...ಡಿಸುತ್ತಿದ್ದಾರೆ. 2004ರಿಂದ ಇಲ್ಲಿವರೆಗಿನ ಗದ್ದಿಗೌಡರನ ...ಬಲದ ಗ್ರಾಫ್ ಕುಸಿಯುತ್ತಲೇ ಇದೆ.


2004ರಲ್ಲಿ ಗಾಣಿಗರು, ಬಣಜಿಗರು ಮತ್ತು ...ಮಸಾಲಿಗಳು ಉತ್ತರ ಕರ್ನಾಟಕದಲ್ಲಿ ಬಿಜೆಪಿ ಪರ ...ದ್ದರಿಂದ ಗದ್ದಿಗೌಡರ್ ನಿರಾಯಾಸವಾಗಿ ಗೆದ್ದುಬಿಟ್ಟಿದ್ದ. ... ಈತ ಒಂದೂವರೆ ಲಕ್ಷದಷ್ಟು ಮತಗಳ ಲೀಡ್ ...ದು, ಕಾಂಗ್ರೆಸ್ಸಿನ ರೆಡ್ಡಿ ಲಿಂಗಾಯತ ...ಎಸ್.ಪಾಟೀಲರನ್ನು ಸೋಲಿಸಿದ್ದ. ದೆಹಲಿಗೆ ...ಗಿದ್ದಷ್ಟೇ ಬಂತು; ಬಾಗಲಕೋಟೆಯ ಜನತೆಗೆ ಒಂದು ...ಪೈಸೆಯ ಅಭಿವೃದ್ಧಿಯನ್ನೂ ಮಾಡಲಿಲ್ಲ. 2009ರ ... ಚುನಾವಣೆ ಹೊತ್ತಿಗೆ ಕ್ಷೇತ್ರದ ಜನತೆಗೆ ಗದ್ದಿಗೌಡರ್ ...ಶೇ ಮರೆತು ಹೋಗಿರುತ್ತಿತ್ತೇನೋ? ಆದರೆ ...ಪಿ-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿ ...ಯೂರಪ್ಪರಿಗೆ 'ವಚನ ದ್ರೋಹ' ಎಸಗಿದರು ಎಂಬ ... ಉತ್ತರ ಕರ್ನಾಟಕದ ಲಿಂಗಾಯತರಲ್ಲಿ ...ಯೂರಪ್ಪನ ಪರ ಒಂದಿಷ್ಟು ಅನುಕಂಪ ಹುಟ್ಟುವಂತೆ ...ತ್ತು. ಆಗ ನಡೆದ ವಿಧಾನಸಭಾ ಚುನಾವಣೆಯಲ್ಲಿ ...ಕೋಟೆ ಕ್ಷೇತ್ರದ ಎಂಟು ಕ್ಷೇತ್ರಗಳಲ್ಲಿ ಬಿಜೆಪಿ ... ಸಾಧಿಸಿತ್ತು. ಈ ಎಂಟರಲ್ಲಿ ಆರು ಜನ ಲಿಂಗಾಯತ ...ರು. ಹೀಗಿರುವಾಗ 2009ರ ಲೋಕಸಭಾ ...ವಣೆಯಲ್ಲಿ ಗದ್ದಿಗೌಡರ್ ಭರ್ಜರಿ ಲೀಡ್‌ನೊಂದಿಗೆ ...ಬೇಕಿತ್ತು, ಆದರೆ ಅಷ್ಟು ಹೊತ್ತಿಗೆ ಈತ ನಿಷ್ಪ್ರಯೋಜಕ ...ಗಲೇ ಸಾಬೀತಾಗಿತ್ತು, ಹೀಗಾಗಿ ಈತ ಕೇವಲ ...ಸಾವಿರದಷ್ಟು ಲೀಡ್‌ನಿಂದ ಹೇಗೋ ಗೆದ್ದಿದ್ದ. ...4ರಲ್ಲಿ ಒಂದೂವರೆ ಲಕ್ಷದಷ್ಟಿದ್ದ ಲೀಡು, 2009ರ ಹೊತ್ತಿಗೆ- ಎಂಟೂ ಜನ ಶಾಸಕರು ಬಿಜೆಪಿಯವರಿದ್ದಾಗಲೂ- ಕೇವಲ 50 ಸಾವಿರಕ್ಕೆ ಇಳಿದಿತ್ತು. ಈ ಸಲ ಒಬ್ಬನೇ ಒಬ್ಬ ಬಿಜೆಪಿ ಶಾಸಕನಿದ್ದಾನೆ. ಮೋದಿ ಅಲೆಯೂ ಇಲ್ಲಿಲ್ಲ. ಹೀಗಾಗಿ ಗದ್ದಿಗೌಡರ್ ಮನೆ ಸೇರುವುದು ಸೆಂಟ್ ಪರ್ಸೆಂಟ್ ಗ್ಯಾರಂಟಿ!




ಗದ್ದಿಗೌಡರ್ ವಿರುದ್ಧ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಅಜಯಕುಮಾರ್ ಸರನಾಯಕ್ ಎಲ್ಲ ಜನಾಂಗದವರನ್ನು ಜೊತೆಯಲ್ಲಿ ಕರೆದೊಯ್ಯಬಲ್ಲ ಸಂಭಾವಿತ ಲೀಡರ್. ಮೇಲಾಗಿ ಕೆಲಸಗಾರ. ಗದ್ದಿಗೌಡರ್‌ನಂತಹ ಸೋಂಭೇರಿಯನ್ನು ಮನೆಗಟ್ಟಲು ಇದಕ್ಕಿಂತ ಕಾರಣ ಬೇಕೇ?

ಛಿದ್ರವಾಗಲಿದೆ ಲಿಂಗಾಯತ ಓಟ್ಸ್!

ಬಾಗಲಕೋಟೆ ಲೋಕಸಭಾ ಕ್ಷೇತ್ರದಲ್ಲಿ ಲಿಂಗಾಯತ ಮತದಾರರು ಮೂರು ಲಕ್ಷಕ್ಕಿಂತಲೂ ಜಾಸ್ತಿ ಇದ್ದಾರೆ. ಕಳೆದ ಚುನಾವಣೆಯಲ್ಲಿ ಲಿಂಗಾಯತರ ಒಳಪಂಗಡಗಳು ಒಟ್ಟಾಗಿ ಬಿಜೆಪಿಯನ್ನು ಬೆಂಬಲಿಸಿದ್ದವು. ಈ ಸಲ ಈ ಮತಗಳು ವಿಭಜನೆಗೊಳ್ಳಲಿವೆ.


...ಜಯ್‌ಕುಮಾರ್ ಸರನಾಯಕ್


ಚಿಮ್ಮನಕಟ್ಟಿ


ಎಸ್.ಆರ್.ಪಾಟೀಲ್

ಕಳೆದ ಸಲ ಎಂಟು ಬಿಜೆಪಿ ಶಾಸಕರ ಪೈಕಿ ಆರು ಜನ ಲಿಂಗಾಯತರೇ ಇದ್ದರು. ಲಿಂಗಾಯತರ ಪೈಕಿ ಪಂಚಮಸಾಲಿಗಳದ್ದು ಹೆಚ್ಚಿನ ಪ್ರಾಬಲ್ಯ. ಜಮಖಂಡಿಯ ಮುರುಗೇಶ್ ನಿರಾಣಿ, ತೇರದಾಳದ ಸಿದ್ದು ಸವದಿ (ಇಬ್ಬರೂ ಪಂಚಮಸಾಲಿಗಳು), ಬಾದಾಮಿಯ ಪಟ್ಟಣಶೆಟ್ಟಿ, ರೋಣದ ಕಳಸಪ್ಪ ಬಂಡಿ (ಇಬ್ಬರೂ ಬಣಜಿಗರು), ಹುನಗುಂದದ ದೊಡ್ಡನಗೌಡ ಪಾಟೀಲ್ (ರೆಡ್ಡಿ ಲಿಂಗಾಯತ) ಇವರೆಲ್ಲರೂ ಲಿಂಗಾಯತ 'ಧ್ವಜ'ದ ಅಡಿ ಕೆಲಸ ಮಾಡಿದ್ದರಿಂದ ಗದ್ದಿಗೌಡರ್ ಗೆಲುವು ಸುಲಭವಾಗಿತ್ತು, ಆದರೂ ನೆನಪಿಡಿ, ಆತ ಗೆದ್ದಿದ್ದು ಬರೀ 50 ಸಾವಿರ ಮತಗಳ ಲೀಡ್‌ನಿಂದ!

ಈಗ ಮೇಲೆ ಉಲ್ಲೇಖಿಸಿರುವ ಇವರ್‍ಯಾರೂ ಶಾಸಕರಾಗಿಲ್ಲ, ಅಷ್ಟೇ ಅಲ್ಲ; ಮಾಡಬಾರದ ಹುಚ್ಚಾಟಗಳನ್ನು ಮಾಡಿ ಜನರಿಂದ 2013ರಲ್ಲಿ ತಿರಸ್ಕೃತರಾಗಿದ್ದಾರೆ.

ಈಗ ಬಾಗಲಕೋಟೆ ಕ್ಷೇತ್ರದಲ್ಲಿ ಏಳು ಜನ ಕಾಂಗ್ರೆಸ್ ಶಾಸಕರಿದ್ದು ನಾಲ್ವರು ಲಿಂಗಾಯತರು, ಇಬ್ಬರು ಕುರುಬರು ಮತ್ತು ಒಬ್ಬರು ದೇವಾಂಗ ಜನಾಂಗಕ್ಕೆ ಸೇರಿದ್ದಾರೆ. ಈ ಕಾಂಬಿನೇಷನ್ ಲಿಂಗಾಯತ ಮತಗಳ ಜೊತೆಗೆ, ಅಹಿಂದ ಮತಗಳನ್ನು ಅಜಯಕುಮಾರ್ ಸರನಾಯಕ್‌ಗೆ ತಂದುಕೊಡಲಿದೆ. ರೆಡ್ಡಿ ಲಿಂಗಾಯತರಾಗಿರುವ ಸರನಾಯಕ್ ಅಪ್ಪಟ ಜಾತ್ಯತೀತ ವ್ಯಕ್ತಿ. ಲಿಂಗಾಯತರ ಎಲ್ಲ ಉಪಪಂಗಡಗಳೊಂದಿಗೂ ಸರನಾಯಕ್ ಕುಟುಂಬದ ವೈವಾಹಿಕ ಸಂಬಂಧಗಳಿವೆ.

ಹಿಂದೆ ಎರಡು ಬಾರಿ ಜನತಾ ಪರಿವಾರದಿಂದ ಬಾಗಲಕೋಟೆಯ ಶಾಸಕರಾಗಿದ್ದ ಅಜಯಕುಮಾರ್ ಸರನಾಯಕ್ ಹೆಸರು ಕೆಡಿಸಿಕೊಳ್ಳಲಿಲ್ಲ. ಕ್ರೀಡಾ ಸಚಿವರಾಗಿ ರಾಜ್ಯದ ಕ್ರೀಡಾಪಟುಗಳಿಗೆ ಅತ್ಯಗತ್ಯ ಸೌಲಭ್ಯಗಳನ್ನು ಒದಗಿಸಿದ್ದರು. ರಾಷ್ಟ್ರದಲ್ಲೇ ಅತ್ಯುತ್ತಮ ಹೆಸರು, ಸ್ಥಾನ ಗಳಿಸಿರುವ ಬಿಜಾಪುರ-ಬಾಗಲಕೋಟೆಯ ಸೈಕ್ಲಿಂಗ್ ಪಟುಗಳಿಗಾಗಿ ಬಿಜಾಪುರದಲ್ಲಿ ಅತ್ಯಾಧುನಿಕ ಸೈಕ್ಲಿಂಗ್ ಟ್ರ್ಯಾಕ್ ನಿರ್ಮಿಸಿದ್ದು ಇದೇ ಸರನಾಯಕರು. ಬಿಜಾಪುರದ ಸೈನಿಕ್ ಸ್ಕೂಲ್‌ನಲ್ಲಿ ಓದಿರುವ ಸರನಾಯಕ್ ಶಿಸ್ತಿನ ಮನುಷ್ಯ. ಬಾಗಲಕೋಟೆಯ ಕೃಷಿ ವ್ಯವಸ್ಥೆ ಇಲ್ಲಿನ ನೀರಾವರಿ ಸಾಧ್ಯತೆಗಳ ಬಗ್ಗೆ ವಿವರವಾಗಿ ಬಲ್ಲವರು. ಬಾಗಲಕೋಟೆಯ ತೋಟಗಾರಿಕಾ ಬೆಳೆಗಳಿಗೆ ಅಂತಾರಾಷ್ಟ್ರೀಯ ಮೌಲ್ಯ ತರುವ ಕುರಿತು ಕ್ರಿಯಾಶೀಲವಾಗಿ ಅಧ್ಯಯನ ಮಾಡಿದವರು. ಇಂತಹ ವ್ಯಕ್ತಿ ಸಂಸತ್ತಿನಲ್ಲಿರಬೇಕಾದದ್ದು ಅಗತ್ಯ. ಅದನ್ನು ಬಾಗಲಕೋಟೆ ಲೋಕಸಭೆ ಕ್ಷೇತ್ರದ ಜನರೂ ಅರಿತಿದ್ದಾರೆ.

ಸಿದ್ದು ಇಮೇಜ್ ವರ್ಕ್ಸ್

ಲಿಂಗಾಯತನಿಗೆ ಅನ್ಯಾಯವಾಗಿದೆ ಎಂದು ಯಡ್ಡಿಯನ್ನು ಬೆಂಬಲಿಸಿದ್ದ ಜನ, ಯಡ್ಡಿಯ ಲೂಟಿಯನ್ನು ನೋಡಿ ಬೆಚ್ಚಿಬಿದ್ದುಬಿಟ್ಟರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಾಗಲಕೋಟೆ ಕ್ಷೇತ್ರದ ಜನರು ಯಡ್ಡಿ ವಿರೋಧಿ, ಬಿಜೆಪಿ ವಿರೋಧಿ ನಿಲುವು ತಳೆದು, ಎಂಟರಲ್ಲಿ ಏಳು ಬಿಜೆಪಿ ಶಾಸಕರನ್ನು ಹೀನಾಯವಾಗಿ ಸೋಲಿಸಿ ಮನೆಗೆ ಕಳಿಸಿದರು.

ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಇಲ್ಲೀವರೆಗೆ ಕ್ಲೀನ್ ಇಮೇಜ್ ಇಟ್ಟುಕೊಂಡೇ ಬಂದಿದ್ದಾರೆ. ಅನ್ನಭಾಗ್ಯ ಕಾರ್ಯಕ್ರಮ ಸುಸೂತ್ರವಾಗಿ ಜಾರಿಯಾಗುತ್ತಿದೆ. ಪ್ರಣಾಳಿಕೆಯಲ್ಲಿ ಭರವಸೆ ಕೊಟ್ಟಂತೆ ಸಿದ್ದರಾಮಯ್ಯ ನೀರಾವರಿ ಯೋಜನೆಗಳಿಗೆ ಪ್ರತಿವರ್ಷ 10 ಸಾವಿರ ಕೋಟಿ ರೂಪಾಯಿ ಮೀಸಲಿಡುವ ವಾಗ್ದಾನಕ್ಕೆ ಬದ್ಧರಾಗಿದ್ದಾರೆ. ನೀರಾವರಿ ಯೋಜನೆಗಳ ಬಹುಪಾಲು ಫಲ ಈ ಭಾಗದ ಜನತೆಗೆ ಒದಗಲಿದೆ.

ಗಣನೀಯ ಸಂಖ್ಯೆಯಲ್ಲಿರುವ ಮುಸ್ಲಿಮರು ಅಭದ್ರತೆಯಿಂದ ಹೊರಬಂದಿದ್ದಾರೆ. ಚೆಡ್ಡಿಗಳ, ಭಜರಂಗಿಗಳ ರಣಕೇಕೆ ಈಗ ನಿಂತುಹೋಗಿದೆ. ಹಿಂದುಳಿದ ವರ್ಗಗಳ ಸ್ವಾಭಿಮಾನ ಗರಿಗೆದರಿದೆ. ದಲಿತರು ಸಿದ್ದರಾಮಯ್ಯ ಸರ್ಕಾರದೊಂದಿಗಿದ್ದಾರೆ.

ಹೀಗಾಗಿ, ಹಲವು ಮಾಧ್ಯಮಗಳ ಸೃಷ್ಟಿಯಾದ 'ಮೋದಿ ಅಲೆ' ಇಲ್ಲಂತೂ ಇಲ್ಲವೇ ಇಲ್ಲ. ಈ ಎಲ್ಲ ಕಾರಣಗಳಿಂದಾಗಿ, ಇಲ್ಲಿ ಗದ್ದಿಗೌಡರ್ ಎಂಬ ಸೋಮಾರಿ ಮನೆ ದಾರಿ ಹಿಡಿಯುವುದು ಖಚಿತವಾಗಿದೆ. ಜನಾನುರಾಗಿ, ಜಾತ್ಯತೀತ ವ್ಯಕ್ತಿ ಕಾಂಗ್ರೆಸ್‌ನ ಅಜಯಕುಮಾರ್ ಸರನಾಯಕ್ ಗೆಲುವು ನಿಶ್ಚಿತವಾಗಿದೆ.

● ವಿ.ಪಿ.ಮೇಘರಾಜ್

ಪ್ರವಾಹ ಬಂದಾಗ ಪ್ರವಾಸ ಹೋಗಿದ್ದ!

ಈ ನಾಲ್ಕು ವರ್ಷಗಳ ಹಿಂದೆ ಅತಿವೃಷ್ಟಿಯಿಂದಾಗಿ ಉತ್ತರ ಕರ್ನಾಟಕ ದಿಕ್ಕೆಟ್ಟು ಹೋದ ಸಂದರ್ಭದಲ್ಲಿ ಇಲ್ಲಿಯ ಬಿಜೆಪಿ ಶಾಸಕರ ಪೈಕಿ ಕೆಲವರು ಹೈದರಾಬಾದಿನ ರೆಸಾರ್ಟಿನಲ್ಲಿ ಜನಾರ್ದನ ರೆಡ್ಡಿಯ ಬೆಂಬಲಾರ್ಥವಾಗಿ ಮೋಜು ನಡೆಸಿದ್ದರು. ಸಂಸದ ಗದ್ದಿಗೌಡರ್ ನೆರೆಪೀಡಿತ ಜನರ ಸಮಸ್ಯೆಗಳನ್ನು ಪರಿಹರಿಸುವ ಬದಲು ದೆಹಲಿ, ಬೆಳಗಾವಿ, ಗೋವಾಗಳಲ್ಲಿ ಮಜಾ ಮಾಡುತ್ತಿದ್ದ. ಸಂಸತ್ತಿನಲ್ಲೂ ಈ ಕುರಿತು ತುಟಿಪಿಟಿಕ್ ಎನ್ನಲಿಲ್ಲ.

ರೋಮ್ ಹೊತ್ತಿ ಉರಿಯುವಾಗ ದೊರೆ ನೀರೊ ಪಿಟೀಲು ಬಾರಿಸುತ್ತ ಕುಳಿತಂತೆ, ಪ್ರವಾಹದಲ್ಲಿ 'ಕೋಟೆ' ಮುಳುಗುತ್ತಿರುವಾಗ ಈ ಕೊತ್ವಾಲ್ ಗದ್ದಿಗೌಡ್ರ ಇನ್ನೆಲ್ಲೋ ಎಂಜಾಯ್ ಮಾಡುತ್ತಿದ್ದ...

ಎಸ್.ಆರ್. ಪಾಟೀಲ್: ಸರನಾಯಕ್‌ಗೆ ಪ್ಲಸ್

ಮಾಹಿತಿ ತಂತ್ರಜ್ಞಾನ ಸಚಿವ ಮತ್ತು ಬಾಗಲಕೋಟೆ ಜಿಲ್ಲೆ ಉಸ್ತುವಾರಿ ಸಚಿವ ಎಸ್.ಆರ್.ಪಾಟೀಲ್ ಬೆಂಬಲ ಅಜಯಕುಮಾರ್ ಸರನಾಯಕ್‌ಗೆ ಪ್ಲಸ್ ಪಾಯಿಂಟ್. ಜಾತ್ಯತೀತ ಮನೋಭಾವದ ಎಸ್.ಆರ್.ಪಾಟೀಲ್‌ಗೆ ಜಿಲ್ಲೆಯಾದ್ಯಂತ ಜನಬೆಂಬಲವಿದೆ. ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿಯೂ ಎಸ್.ಆರ್.ಪಾಟೀಲ್ ಗಮನಾರ್ಹ ಕೆಲಸ ಮಾಡಿದ್ದರು.

ಎಸ್.ಆರ್. ಪಾಟೀಲ್ ಜನಪ್ರಿಯತೆಗೆ ಇಲ್ಲೊಂದು ಸ್ಯಾಂಪಲ್ ನೋಡಿ. ಕಳೆದ ಸಲ ಬಹುಪಾಲು ನಗರಸಭೆ, ಪುರಸಭೆಗಳೆಲ್ಲ ಬಿಜೆಪಿಯ ಹಿಡಿತದಲ್ಲಿದ್ದಾಗಲೂ, ಎಸ್.ಆರ್.ಪಾಟೀಲ್ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿದ್ದರು. ಹೀಗೆ ಪಕ್ಷಾತೀತ ಬೆಂಬಲ ಹೊಂದಿರುವ ಪಾಟೀಲ್ ಸರನಾಯಕ್ ಗೆಲುವಿನಲ್ಲಿ ಮಹತ್ತರ ಕಾಣಿಕೆ ನೀಡಲಿದ್ದಾರೆ...

ಬಿದರಿ: ಬಿಜೆಪಿ ಓಟಿಗೆ ಕತ್ತರಿ!



ಮೊದಲು 'ಕೈ' ಹಿಡಿದು, ಅಷ್ಟೇ ವೇಗವಾಗಿ ಅಲ್ಲಿಂದ ಕಾಲ್ಕಿತ್ತು 'ಸೈಕಲ್' ಸವಾರಿ ಮಾಡಲು ಹೋಗಿ ತಾನೇ ಪಂಕ್ಚರ್ ಆದ ಮಾಜಿ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಇಲ್ಲಿ ತಮ್ಮ 'ಜನಶಕ್ತಿ' ಪಕ್ಷದಿಂದ ಸ್ಪರ್ಧಿಸಿ, ಜಾತಿಮಂತ್ರವ ಪಠಿಸುತ್ತಿದ್ದಾರೆ. ಮೂಲತಃ ಜಮಖಂಡಿಯವರಾದ ಶಂಕರ್ ಬಿದರಿಯವರ ಸಾಹಸ, ಆಪರೇಷನ್‌ಗಳು ಇಲ್ಲಿ ವರ್ಕ್‌ಔಟ್ ಆಗುತ್ತಿಲ್ಲ.

ಆದರೆ, ಜಮಖಂಡಿ-ತೇರದಾಳದ ಭಾಗದಲ್ಲಿ ಬಿದರಿ ಒಂದಿಷ್ಟು ಸಾವಿರ ಮತಗಳನ್ನು ಹೆಕ್ಕಿ ಬಿಜೆಪಿಗೆ ಪೆಟ್ಟು ಕೊಡಲಿದ್ದಾರೆ. ಜಮಖಂಡಿ-ತೇರದಾಳದ ಒಂದಿಷ್ಟು ಲಿಂಗಾಯತ ಮತಗಳನ್ನು ಬಿದರಿ ಕಿತ್ತುಕೊಂಡರೆ, ಅದು ಬಿಜೆಪಿಗೆ ನಷ್ಟ!

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ ಸಂಯಮದಿಂದ, ದಕ್ಷತೆಯಿಂದ ತಣ್ಣಗೆ ಕೆಲಸ ಮಾಡುತ್ತಿರುವ ತೇರದಾಳದ ಶಾಸಕಿ ಉಮಾಶ್ರೀ ಮಹಿಳೆಯರ ಮತಗಳನ್ನು ಸೆಳೆಯುತ್ತಿದ್ದಾರೆ. ಇದು ಕೂಡಾ ಬಿಜೆಪಿಗೆ ದೊಡ್ಡ ಹಿನ್ನಡೆಯೇ!

ಸೋಮಾರಿ ಸಂಸದ ಗದ್ದಿಗೌಡರ್

...ಸೋಮಾರಿ ಸಂಸದರ ಲಿಸ್ಟ್ ತಯಾರಿಸಿದರೆ, ಬಹುಶಃ ಗದ್ದಿಗೌಡರನೇ ಟಾಪ್ ಪೊಸಿಷನ್‌ನಲ್ಲಿ ಇರುತ್ತಾನೇನೋ? ...ಈತ ಬಾಗಲಕೋಟೆ ಕ್ಷೇತ್ರದಿಂದ ಎರಡು ಸಾರಿ ಎಂಪಿಯಾಗಿ ಸಾಧಿಸಿದ್ದು ಶೂನ್ಯ. ಜನರನ್ನಂತೂ ಹತ್ತಿರಕ್ಕೆ ...ಕೊಳ್ಳಲ್ಲ. ಇನ್ನೊಂದು ಕಡೆ ಅಂತಹ ಕಿತಬಿ ಕೆಲಸಗಳನ್ನೂ ಮಾಡಲ್ಲ ಎಂಬ ಸಮಾಧಾನ ಇದೆ. ಆದರೆ ...ತಹ ಘನಕಾರ್ಯಕ್ಕೆ ಈತ ಸಂಸತ್ತಿನಲ್ಲಿರಬೇಕಾ?

...ಬಾಗಲಕೋಟೆಯ ಸಮಸ್ಯೆಗಳ ಕುರಿತು ಸಂಸತ್ತಿನಲ್ಲಿ ಈತ ಧ್ವನಿ ಎತ್ತಿದ್ದೇ ಇಲ್ಲ, ಅದು ಬಿಡಿ; ಸಂಸದರ ...ಭಿವೃದ್ಧಿ ನಿಧಿಯನ್ನು ಈತ ಸರಿಯಾಗಿ ಬಳಸಿಕೊಂಡಿಲ್ಲ. ಕೆಲವೇ ಕೆಲವು ಮನೆಹಾಳರನ್ನು ಜೊತೆಗಿಟ್ಟುಕೊಂಡಿರುವ ...ಗೌಡರ್ ದೂರದ ಊರುಗಳಲ್ಲಿ ಮೋಜು-ಮಸ್ತಿ ಮಾಡುವುದರಲ್ಲೇ ಹತ್ತು ವರ್ಷಗಳನ್ನು ದೂಡಿಬಿಟ್ಟ.

...ಎಂಪಿಯಾಗುವ ಮೊದಲು, ವಕೀಲಿ ವೃತ್ತಿಯಲ್ಲಿದ್ದ ಗದ್ದಿಗೌಡರ್ ಹಲವಾರು ಸಲ ಬಾದಾಮಿ ವಿಧಾನಸಭೆ ...ದಲ್ಲಿ ಚುನಾವಣೆಗೆ ನಿಂತು ಮಣ್ಣುಮುಕ್ಕಿದ್ದ. ಹಿಂದೊಮ್ಮೆ ತಾಲೂಕ್ ರಚನಾ ಸಮಿತಿಗೆ ಅಧ್ಯಕ್ಷನಾಗಿದ್ದ ...ಪುರ ಸಂಸದ ಜಿಗಜಿಣಗಿ ಕುಟುಂಬದೊಂದಿಗೆ ಈ ಗದ್ದಿಗೌಡರ್ ಕುಟುಂಬಕ್ಕೆ ಎರಡು ತಲೆಮಾರುಗಳ ...ದೆ. ರಾಮಕೃಷ್ಣ ಹೆಗಡೆ ಅವಧಿಯಲ್ಲಿ ಈ ಸೋಮಾರಿಯನ್ನು ಎಂಎಲ್‌ಸಿ ಮಾಡಿದ್ದರು. ಬಾದಾಮಿಯಲ್ಲಿ ...ಪಟ್ಟಣಶೆಟ್ಟಿಗೆ ಈತ ಮುಳುವಾಗಿದ್ದ, ಆದರೆ ತಾನೂ ಗೆಲ್ಲುತ್ತಿರಲಿಲ್ಲ. ಇದನ್ನು ಗಮನಿಸಿದ ಜಿಗಜಿಣಗಿ ...ೇಶ ಶೆಟ್ಟರ್ ಅವರೊಂದಿಗೆ ಚರ್ಚಿಸಿ, ಒಂದು ಪರಿಹಾರ ಹುಡುಕಿದರು.

...ಒಪ್ಪಂದದಂತೆ ಬಾದಾಮಿ ವಿಧಾನಸಭಾ ಕ್ಷೇತ್ರವನ್ನು ಶೆಟ್ಟರ್ ಸಂಬಂಧಿ ಪಟ್ಟಣಶೆಟ್ಟಿಗೆ ಬಿಟ್ಟುಕೊಟ್ಟು, ಈ ...ಗೌಡನಿಗೆ ಬಾಗಲಕೋಟೆ ಲೋಕಸಭಾ ಕ್ಷೇತ್ರವನ್ನು ಕೊಡಲಾಯ್ತು. ಹೇಗೋ ಎರಡು ಸಾರಿ ಗೆದ್ದು ದೆಹಲಿ ...ಗೆ ಬಂದ ಗದ್ದಿ ಈಗ ಗದ್ದುಗೆ ಕಳೆದುಕೊಳ್ಳುವ ಸ್ಥಿತಿ ತಲುಪಿದ್ದಾನೆ. ಅದು ನ್ಯಾಯವೂ ಹೌದು!

ಚಿಮ್ಮನಕಟ್ಟಿಯೊಂದಿಗೆ ಫಿಕ್ಸಿಂಗ್!?

ಮಂತ್ರಿಗಿರಿ ಸಿಗಲಿಲ್ಲವೆಂದು ಅಸಮಾಧಾನಗೊಂಡಿರುವ ಬಾದಾಮಿಯ ಶಾಸಕ ಕಾಂಗ್ರೆಸ್‌ನ ಬಿ.ಬಿ. ಚಿಮ್ಮನಕಟ್ಟಿಯೊಂದಿಗೆ ಗದ್ದಿಗೌಡರ್ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡಿದ್ದಾನೆಯೇ? ಹೀಗಂತ ಬಾದಾಮಿ ಜನ ಸಂಶಯ ಪಡುತ್ತಿದ್ದಾರೆ.

ಬಾದಾಮಿ ಬಳಿ ಒಂದು ಶುಗರ್ ಫ್ಯಾಕ್ಟರಿ ಸ್ಥಾಪಿಸುತ್ತಿರುವ ಚಿಮ್ಮನಕಟ್ಟಿ ಸಾಕಷ್ಟು 'ವಸೂಲಿ' ... ಆರೋಪಗಳಿವೆ. ಚಿಮ್ಮನಕಟ್ಟಿ ಪತ್ನಿ ರತ್ನವ್ವ ಮತ್ತು ಪುತ್ರ ಬಾಲಪ್ಪ ಅಲಿಯಾಸ್ ರಾಜು ಈ 'ವಸೂಲಿ' ಯೋಜನೆಯ ಮುಂದಾಳುಗಳಂತೆ. ಮಂತ್ರಿಗಿರಿ ಸಿಗದ್ದಕ್ಕೆ ಬೇಸರಗೊಂಡ ಚಿಮ್ಮನಕಟ್ಟಿ ತಮ್ಮ ಶಾಸಕತ್ವದ ಜವಾಬ್ದಾರಿಯನ್ನೂ ಮರೆತು, ಬರಿ ಶುಗರ್ ಫ್ಯಾಕ್ಟರಿ ಗುಂಗಲ್ಲಿದ್ದಾರೆ. ಈ ಎಲೆಕ್ಷನ್ನಿನಲ್ಲಿ ಚಿಮ್ಮನಕಟ್ಟಿ ಸಕ್ರಿಯವಾಗಿ ಪ್ರಚಾರದಲ್ಲಿ ಪಾಲ್ಗೊಳ್ಳುತ್ತಿಲ್ಲ. ಹೀಗಾಗಿ ಗದ್ದಿಗೌಡರ್ ಮತ್ತು ಚಿಮ್ಮನಕಟ್ಟಿ ನಡುವೆ 'ಒಳಒಪ್ಪಂದ'ವಾಗಿದೆ ಎಂದು ಜನ ಮಾತಾಡಿಕೊಳ್ಳುತ್ತಿದ್ದಾರೆ.

ಆದರೆ, ಇದರಿಂದಂತೂ ಗದ್ದಿಗೌಡರ್‌ಗೆ ಚುನಾವಣಾ ಲಾಭ ಖಂಡಿತ ಆಗದು. ಪಾಪ 'ಮೋದಿ ಅಲೆ'ಯ ಮೇಲಿರುವ 'ಗದ್ದಿ'ಗೆ ಚಿಮ್ಮನಕಟ್ಟಿಯ 'ಕೈ'ಯ ನೆರವು ಬೇಕಿತ್ತೇ?

ದಾವಣಗೆರೆ: ಲಿಂಗಾಯತರ ಮಹಾಸಮರ

ಈ ಬಾರಿ ದಾವಣಗೆರೆ ಪಾರ್ಲಿಮೆಂಟ್ ಚುನಾವಣೆಯನ್ನು ಲಿಂಗಾಯತ ಅಭ್ಯರ್ಥಿಗಳ ನಡುವೆಯೇ ನಡೆಯುತ್ತಿರುವ ಮಹಾಸಮರ ಎಂದೇ ಬಣ್ಣಿಸಬಹುದು.

ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ - ಈ ಮೂರೂ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಲಿಂಗಾಯತ ಜಾತಿಯವರಾಗಿದ್ದಾರೆ. ಒಂದೇ ವ್ಯತ್ಯಾಸ ಯಾವುದೆಂದರೆ ಕಾಂಗ್ರೆಸ್ ಪಕ್ಷದ ಮಲ್ಲಿಕಾರ್ಜುನ್ ಮತ್ತು ಬಿಜೆಪಿಯ ಸಿದ್ದೇಶ್ವರ ಸಾದು ಲಿಂಗಾಯತರಾಗಿದ್ದರೆ, ಜೆಡಿಎಸ್‌ನ ಮಹಿಮಾ ಪಟೇಲ್ ಪಂಚಮಸಾಲಿ ಲಿಂಗಾಯತರಾಗಿರುವುದು.

ಈ ಮೂರೂ ಪಾರ್ಟಿಯ ಅಭ್ಯರ್ಥಿಗಳು ತಮ್ಮ ತಮ್ಮ ಜಾತಿಯ ಮತದಾರರನ್ನಲ್ಲದೆ ಉಳಿದ ವಿವಿಧ ಜಾತಿ ಮತ್ತು ಸಮುದಾಯಗಳ ಮತಗಳನ್ನು ಸೆಳೆಯಲು ಹೊಸ ತಂತ್ರಗಳನ್ನು ಉಪಯೋಗಿಸುತ್ತಿದ್ದಾರೆ.

ಮೇಲುನೋಟಕ್ಕೆ ಸಾದು ಲಿಂಗಾಯತರ ಮತಗಳು ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಹರಿದುಹಂಚಿ ಹೋಗುವಂತೆ ಕಾಣಿಸುತ್ತಿದ್ದರೂ ಮಲ್ಲಿಕಾರ್ಜುನ್ ದೊಡ್ಡ ಮಟ್ಟದಲ್ಲಿ ಸಾದು ಲಿಂಗಾಯತರ ಮತಗಳನ್ನು ಸೆಳೆಯುವ ಸಾಧ್ಯತೆಗಳಿವೆ. ಯಾಕೆಂದರೆ ಚುನಾವಣೆ ನಿರ್ಣಾಯಕ ಘಟ್ಟವನ್ನು ತಲುಪಿದಂತೆ 2009ರ ಲೋಕಸಭಾ ಚುನಾವಣೆಯಲ್ಲಿ ಮಲ್ಲಿಕಾರ್ಜುನರನ್ನು ಸೋಲಿಸಿದ್ದರಿಂದ ಅವರ ಪರ ಈ ಬಾರಿ ಸಿಂಪಥಿ ಶುರುವಾಗಿದೆ. ಜೊತೆಗೆ ಎರಡು ಬಾರಿ ಸಂಸತ್ತಿಗೆ ಇಲ್ಲಿನ ಜನ ಸಿದ್ದೇಶ್ವರರನ್ನು ಗೆಲ್ಲಿಸಿ ಕಳುಹಿಸಿದ್ದರೂ ಅವರು ಕ್ಷೇತ್ರಕ್ಕಾಗಲಿ, ಲಿಂಗಾಯತ ಸಮುದಾಯಕ್ಕಾಗಲಿ ಕಡಿದು ಕಟ್ಟೆಹಾಕಿದ್ದು ಏನೇನೂ ಇಲ್ಲ ಎಂಬ ಅಸಮಾಧಾನ ಹೆಚ್ಚಾಗುತ್ತಿದೆ.

ಉಲ್ಟಾಪಲ್ಟಾ ಆಗ ಪರಿಸ್ಥಿತಿ


ಕಳೆದ ಲೋಕಸಭಾ ಚುನಾವಣೆ ನಡೆದಾಗ ಬಿಜೆಪಿ ರಾಜ್ಯದಲ್ಲಿ ಅಧಿಕಾರ ಹಿಡಿದಿತ್ತಲ್ಲದೆ ದಾವಣಗೆರೆ ಮಹಾನಗರ ಪಾಲಿಕೆಯಲ್ಲೂ ಅಧಿಕಾರದಲ್ಲಿತ್ತು, ಜೊತೆಗೆ ಆಗ ಯಡ್ಡಿ ಜೊತೆ ಲಿಂಗಾಯತರು ಸಾಲಿಡ್ ಆಗಿ ನಿಂತಿದ್ದರು. ಇವೆಲ್ಲ ಕಾರಣಗಳು ಜೊತೆಗೂಡಿ ಸಿದ್ದೇಶ್ವರರ ಗೆಲುವಿಗೆ ನೆರವಾಗಿದ್ದವು. ಆದರೆ ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ.

ಮೊದಲನೆಯದಾಗಿ ಬಿಜೆಪಿ ಅಧಿಕಾರದಲ್ಲಿದ್ದಾಗ ಗಳಿಸಿದ ಕುಖ್ಯಾತಿ ಈಗ ಸಿದ್ದೇಶ್ವರರಿಗೆ ದೊಡ್ಡ ತಲೆನೋವಾಗಿದೆ. ಯಡಿಯೂರಪ್ಪನ ಸರ್ಕಾರ ಭ್ರಷ್ಟಾತಿಭ್ರಷ್ಟಾಚಾರಗಳಲ್ಲಿ ತೊಡಗಿದ ಕಾರಣಕ್ಕೆ ಸ್ವತಃ ಯಡ್ಡಿ ಸೇರಿದಂತೆ ನಾಲ್ಕಾರು ಮಂತ್ರಿಗಳು ಜೈಲು ಕಂಡುಬಂದರು. ವಿಧಾನಸಭೆಯಲ್ಲಿ ಬ್ಲೂ ಫಿಲಂ ವೀಕ್ಷಣೆ, ಪರಸ್ತ್ರೀಯ ಮಾನಹರಣ, ಮಹಿಳೆಯೊಂದಿಗೆ ಅಕ್ರಮ ಸಂಬಂಧ, ಅಲ್ಪಸಂಖ್ಯಾತ ಮುಸಲ್ಮಾನರ ಮೇಲೆ ದಾಳಿ, ಕ್ರಿಶ್ಚಿಯನ್ನರ ಪ್ರಾರ್ಥನಾ ಸ್ಥಳಗಳ ಮೇಲೆ ಹಲ್ಲೆ ರೈತರ ಮೇಲೆ ಪೊಲೀಸ್ ಗುಂಡು, ಇತ್ಯಾದಿಗಳೆಲ್ಲವೂ ರಾಷ್ಟ್ರ ಮಟ್ಟದಲ್ಲಿ ಬಿಜೆಪಿಯ ಮಾನಮರ್ಯಾದೆಯನ್ನು ಹರಾಜು ಹಾಕಿದ್ದವು.


ಇದಲ್ಲದೆ ಸ್ಥಳೀಯವಾಗಿಯೂ ಬಿಜೆಪಿಯ ಕಾರ್ಪೊರೇಟರ್‌ಗಳ ಭೂ ದಂಧೆ, ಲಂಚಾವತಾರಗಳೂ ಸಾಮಾನ್ಯ ಜನರಲ್ಲಿ ಹೇಸಿಗೆ ಹುಟ್ಟಿಸಿದ್ದವು. ಉದಾಹರಣೆಗೆ ಧಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಅಜಮಾಸು 400 ಕೋಟಿ ಅನುದಾನ ಸರಕಾರದಿಂದ ಬಂದಿತ್ತು, ಇಷ್ಟೊಂದು ಹಣವನ್ನು ನಗರದ ಅಭಿವೃದ್ಧಿಗೆ ಬಳಸಿರುವುದಾಗಿ ಚಡ್ಡಿಗಳು ಬೊಗಳೆ ಬಿಟ್ಟಿದ್ದರು.



ಎಸ್.ಎಸ್.ಮಲ್ಲಿಕಾರ್ಜುನ್



ಮಹಿಮಾ ಪಾಟೀಲ್



ಸಿದ್ದೇಶ್ವರ

ಆದರೆ ದಾವಣಗೆರೆ ಯಾವ ಅಭಿವೃದ್ಧಿಯನ್ನೂ ಕಂಡಿಲ್ಲ ಎಂಬುದಕ್ಕೆ ಹಲವಾರು ಸಾಕ್ಷಿಗಳಿವೆ. ಮಾತ್ರವಲ್ಲ 400 ಕೋಟಿ ರೂಪಾಯಿಗಳನ್ನು ಚಡ್ಡಿಗಳೇ ಮುಕ್ಕಿಹಾಕಿದ್ದರು ಎಂಬುದಕ್ಕೂ ಸಾಕಷ್ಟು ಸಾಕ್ಷಿಗಳಿವೆ. ಈಗ ಈ ಬಹುಕೋಟಿ ಭ್ರಷ್ಟಾಚಾರದಿಂದ ಬಿಜೆಪಿಯ ಯಾವ ನಾಯಕನೂ ಮತದಾರರ ಮುಂದೆ ತಲೆ ಎತ್ತದಂತಹ ಪರಿಸ್ಥಿತಿ ಇಲ್ಲಿದೆ.

ಕಳೆದ ಬಾರಿಯ ಚುನಾವಣೆಯ ಸಂದರ್ಭದಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಸೇರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿಯ ಏಳು ಜನ ಶಾಸಕರಿದ್ದರು. ಜೊತೆಗೆ ಈ ಕ್ಷೇತ್ರದಿಂದ ಮೂವರು ಮಂತ್ರಿಗಳೂ ಆಗಿದ್ದರು. ಅವರೆಲ್ಲ ಆಗ ಸಿದ್ದೇಶ್ವರರ ಪರ ಕೆಲಸ ಮಾಡಿದ್ದರು. ಆದರೀಗ ಎಲ್ಲವೂ ಉಲ್ಟಾಪಲ್ಟಾ ಆಗಿದೆ.

ಯಾಕೆಂದರೆ ಈಗ ದಾವಣಗೆರೆಯಲ್ಲಿ ಒಬ್ಬನೇ ಒಬ್ಬ ಬಿಜೆಪಿಯ ಶಾಸಕನಿಲ್ಲ, ಹರಿಹರದಲ್ಲಿ ಜೆಡಿಎಸ್ ಪಕ್ಷದಿಂದ ಗೆದ್ದಿರುವ ಶಿವಶಂಕರ್ ಹೊರತುಪಡಿಸಿದರೆ ಮಿಕ್ಕ ಏಳೂ ಕಡೆ ಕಾಂಗ್ರೆಸ್ ಶಾಸಕರೇ ಇದ್ದಾರೆ. ಅವರುಗಳಲ್ಲಿ ಸ್ವತಃ ಮಲ್ಲಿಕಾರ್ಜುನ್ ಮತ್ತು ಅವರ ತಂದೆ ಶಾಮನೂರು ಶಿವಶಂಕರಪ್ಪನವರೂ ಇದ್ದಾರೆ. ಅಷ್ಟೇ ಅಲ್ಲದೆ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದಿದೆ. ಇದೆಲ್ಲ ಸಿದ್ದೇಶ್ವರ್ ಪಾಲಿಗೆ ದೊಡ್ಡ ಮೈನಸ್ ಪಾಯಿಂಟ್‌ಗಳಾಗುತ್ತಿವೆ.

ಕ್ಷೇತ್ರ ಅಭಿವೃದ್ಧಿಯಲ್ಲ, ಸ್ವಯಂ ಅಭಿವೃದ್ಧಿ

ದಾವಣಗೆರೆ-ಹರಿಹರ ಹೆಬ್ಬಾವಿನಂತಹ ಹೆದ್ದಾರಿಯಲ್ಲೇ ಜಿಎಂಐಟಿ ಇಂಜನಿಯರಿಂಗ್ ಕಾಲೇಜಿದೆ. ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದಾಗ ಈ ಕಾಲೇಜಿನ ಮಗ್ಗುಲಲ್ಲೇ ಇರುವ ಫಲವತ್ತಾದ ನೂರಾರು ಎಕರೆ ಭೂಮಿಯನ್ನು ರೈತರಿಂದ ಬಲವಂತವಾಗಿ ಕಸಿದು ಟೆಕ್ಸ್‌ಟೈಲ್ ಪಾರ್ಕಿಗೆಂದು ಇಟ್ಟಿತ್ತು, ಆದರೆ ಅದ್ಯಾವ ಮಾಯದಲ್ಲೋ ಸಿದ್ದೇಶ್ವರರು ಆ ಭೂಮಿಯಲ್ಲಿ ಬರೋಬ್ಬರಿ ಮೂವತ್ತು ಎಕರೆಗಳನ್ನು ತಮ್ಮ ಮಾಲೀಕತ್ವದ ಜಿಎಂಐಟಿ ಕಾಲೇಜಿಗೆಂದು ಕಡಿಮೆ ದರದಲ್ಲಿ ಪಡೆದುಬಿಟ್ಟರು. ಈಗ ಭೂಮಿ ಕಳೆದುಕೊಂಡ ರೈತರು ಸಿದ್ದೇಶ್ವರರನ್ನು ಸೋಲಿಸಲು ಹಟ ಹಿಡಿದು ನಿಂತಿದ್ದಾರೆ. ಈ ಹಗರಣ ಕುರಿತು ಜನರ ಪ್ರಶ್ನೆಗಳಿಗೆ ಉತ್ತರ ನೀಡಲು ಸಾಧ್ಯವಾಗದೆ ಸಿದ್ದೇಶ್ವರ ಈಗ ಗ್ರಾಮಾಂತರದ ಕಡೆ ಮುಖ ಮಾಡಿದ್ದಾರೆ.

ಮಹಾನಗರ ಪಾಲಿಕೆಯಲ್ಲಿ ಭ್ರಷ್ಟಾಚಾರ, ರಾಜ್ಯದಲ್ಲಿ ಬಿಜೆಪಿಯ ದುರಾಡಳಿತ ಮತ್ತು ಸಿದ್ದೇಶ್ವರರ ಸ್ವಯಂ ಅಭಿವೃದ್ಧಿಯನ್ನೆಲ್ಲ ಮರೆ ಮಾಚಿ 'ಮೋದಿ ಅಲೆ'ಯನ್ನು ಸೃಷ್ಟಿಸಿ ಗೆಲ್ಲಬೇಕೆಂದು ಸಂಚು ಹಾಕಿರುವ ಚಡ್ಡಿಗಳು ಈಗ ದಾವಣಗೆರೆ ಮತ ಕ್ಷೇತ್ರದ ತುಂಬ ಕೋಮುವಾದಿ ಆರೆಸ್ಸೆಸ್‌ನ ಚಡ್ಡಿ ಕೇಡರ್‌ಗಳನ್ನು ತಂದು ಬಿಟ್ಟಿದ್ದಾರೆ. ಮೋದಿ ಪ್ರಧಾನಿ ಆದರೆ ದೇಶ ಮತ್ತು ಹಿಂದೂ ಧರ್ಮ ಎರಡೂ ಉದ್ಧಾರವಾಗುತ್ತದೆಂದು ಈ ಚಡ್ಡಿಗಳು ಸುಳ್ಳು ಹೇಳುತ್ತಾ ಜನರಿಗೆ ಮಂಕುಭೂದಿ ಎರಚಲು ಯತ್ನಿಸುತ್ತಿದ್ದಾರೆ. ಆದರೆ ಮಹಾತ್ಮ ಗಾಂಧಿಯನ್ನೇ ಕೊಂದ ಈ ಹಿಂದೂತ್ವ ಸಿದ್ಧಾಂತಿಗಳಿಂದ ಜನರಿಗಾಗಲಿ, ದೇಶಕ್ಕಾಗಲಿ ಎಂದೂ ಒಳಿತಾಗುವುದಿಲ್ಲ ಎಂದು ದಾವಣಗೆರೆಯ ಬುದ್ಧಿವಂತರು ಹೇಳುತ್ತಿದ್ದಾರೆ.

ಮಹಿಮಾನ 'ಮಹಿಮೆ'

ಜೆಡಿಎಸ್ ಅಭ್ಯರ್ಥಿ ಮಹಿಮಾ ಪಟೇಲ್ ಪಂಚಮಸಾಲಿ ಮತ್ತು ಬಣಜಿಗ ಲಿಂಗಾಯತರ ಸುಮಾರು ಒಂದೂವರೆ ಲಕ್ಷ ಮತಗಳನ್ನು ಪಡೆಯುವ ಮೂಲಕ ಕಾಂಗ್ರೆಸ್‌ನ ಮಲ್ಲಿಕಾರ್ಜುನ್ ಗೆಲುವಿಗೆ ಅಡ್ಡಗಾಲು ಹಾಕುತ್ತಾರೆ ಎಂಬುದು ಕೆಲವರ ಅಂದಾಜಾಗಿತ್ತು, ಆದರೀಗ ಅದೆಲ್ಲವೂ ತಲೆಕೆಳಗಾಗಿದೆ.

ಅದಕ್ಕೆ ದಾವಣಗೆರೆಯ ಅರ್ಬನ್ ಕೋಆಪರೇಟೀವ್ ಬ್ಯಾಂಕ್ ಚುನಾವಣೆಯೇ ಕಾರಣವಾಗಿದೆ. ಈ ಬ್ಯಾಂಕ್ ಬಣಜಿಗ ಮತ್ತು ಪಂಚಮಸಾಲಿ ಲಿಂಗಾಯತರ ಹಿಡಿತದಲ್ಲಿದೆ. 2011ರಲ್ಲಿ ನಡೆದ ಬ್ಯಾಂಕಿನ ಮಹಾ ಚುನಾವಣೆಯಲ್ಲಿ ಬಣಜಿಗರ ಅಥಣಿ ಕೊಟ್ರಪ್ಪ ಮತ್ತು ಪಂಚಮಸಾಲಿಗಳ ವಿಜಯಕುಮಾರ್ ಸ್ಪರ್ಧಿಸಿದ್ದರು. (ಆ ಚುನಾವಣೆಯಲ್ಲಿ ಇತರೆ ಘಟಾನುಘಟಿಗಳೂ ಸ್ಪರ್ಧಿಸಿದ್ದರು). ಆಗ ಪಂಚಮಸಾಲಿಗಳು ಒಗ್ಗಟ್ಟಾಗಿ ವಿಜಯಕುಮಾರ್ ಅವರನ್ನು ಗೆಲ್ಲಿಸಿದ್ದರು. ಈಗ ಬ್ಯಾಂಕಿನ ಅಧ್ಯಕ್ಷರಾಗಿರುವ ವಿಜಯಕುಮಾರ ಸಭ್ಯ ಮನುಷ್ಯ. ಅವರ ಸಹಜ ಸ್ಪರ್ಧೆಗೆ ಜಾತಿಬಣ್ಣ ಬಂದದ್ದೇ ದುರಂತ. ಆದರೆ ಅವರ ಎದುರು ಬಣಜಿಗ ಕೊಟ್ರಪ್ಪ ಸೋತಿದ್ದು, ಆನಂತರ ಅವರ ಮರಣ ಹೊಂದಿದ್ದು, ಎಲ್ಲದಕ್ಕೂ ಜಾತಿ ಪಂಗಡದ ಬಣ್ಣ ಸೇರಿಕೊಂಡಿದೆ.

ಹೀಗೆ ಪ್ರಾರಂಭವಾದ ಪಂಚಮಸಾಲಿ ಮತ್ತು ಬಣಜಿಗರ ನಡುವಿನ ಭಿನಾಭಿಪ್ರಾಯದಿಂದಾಗಿ ಈಗ ಬಣಜಿಗರು ಮಹಿಮಾ ಪಟೇಲ್‌ಗೆ ಕೈಕೊಡುವ ಸಾಧ್ಯತೆಗಳನ್ನು ಹೆಚ್ಚಾಗಿಸಿದೆಯಲ್ಲದೆ, ಆ ಮೂಲಕ ಅವರನ್ನು ಗೆಲ್ಲಿಸುವುದಿರಲಿ ಮೂರನೇ ಸ್ಥಾನದಲ್ಲಿ ನಿಲ್ಲಿಸುವುದು ಗ್ಯಾರಂಟಿಯಾಗಿದೆ.

ಈ ಮಧ್ಯೆ ಅರ್ಬನ್ ಬ್ಯಾಂಕ್ ವಿಚಾರದಲ್ಲಿ ಲಿಂಗಾಯತರೇ ಸುಮ್ಮನಿದ್ದರೂ ಬಿಜೆಪಿಯ ಪಟಾಲಂ ಬಣಜಿಗರು ಮತ್ತು ಪಂಚಮಸಾಲಿಗಳ ನಡುವೆ ಕಿರಿಕ್ಕು ತಂದಿಟ್ಟು, ತಮ್ಮ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರುವುದು ನಿಜಕ್ಕೂ ದುರಂತ. ಸಮಾಧಾನದ ಸಂಗತಿ ಯಾವುದೆಂದರೆ ಈ ಎರಡೂ ಪಂಗಡಗಳ ನಾಯಕ... ಶಾಮನೂರು ಶಿವಶಂಕರಪ್ಪನವರ ಆಪ್ತ ವಲಯದಲ್ಲಿರುವುದ... ಈ ಕಾರಣಕ್ಕಾದರೂ ಈ ಎರಡೂ ಪಂಗಡಗಳ ನಾಯಕ... ಮಲ್ಲಿಕಾರ್ಜುನ್ ಪರ ಕೆಲಸ ಮಾಡಲಿದ್ದಾರೆ.

ಚನ್ನಗಿರಿಯಲ್ಲೂ ಬೆಂಬಲವಿಲ್ಲ

ಚನ್ನಗಿರಿ ವಿಧಾನಸಭಾ ಕ್ಷೇತ್ರದ ಮತದಾರರಾದರ... ಮಹಿಮನ ಅಳಿದುಳಿದ ರಾಜಕೀಯ ಮರ್ಯಾದೆಯನ... ಕಾಪಾಡಬಹುದು ಎಂಬುದು ಕೆಲವರ ನಿರೀಕ್ಷೆ ಆಗಿತ್ತು...

ಸದ್ಯದ ಪರಿಸ್ಥಿತಿಯಲ್ಲಿ ಚನ್ನಗಿರಿ ಮತದಾರರಲ್ಲಿ ಜೆಡಿಎಸ್... ಬಗ್ಗೆ ಗಮನವೇ ಇಲ್ಲ, ಅಲ್ಲಿ ಏನಿದ್ದರೂ ಕಾಂಗ್ರೆಸ್ ಪ... ನಿಲುವು. ಇದಕ್ಕೆ ಕಾರಣ ಕಾಂಗ್ರೆಸ್ ಶಾಸಕ ವಡ್ನಾಳ... ರಾಜಣ್ಣ. ಚನ್ನಗಿರಿಯಲ್ಲಿ ಉಬ್ರಾಣಿ ಹೋಬ... ಎಂಬುದೊಂದಿದೆ. ಈ ಹೋಬಳಿಯಲ್ಲಿ ಹಲವಾರು... ದಶಕಗಳಿಂದ ಕುಡಿಯುವ ನೀರಿಗೆ ಹಾಹಾಕಾರವಿತ್ತು, ಸ್ವತ... ಮಹಿಮಾರ ತಂದೆ ಜೆ.ಎಚ್.ಪಟೇಲರು ಶಾಸಕರಾ... ದ್ದಾಗಲೂ, ಆನಂತರ ಮುಖ್ಯಮಂತ್ರಿ ಆದಾಗಲೂ ಇಲ್ಲಿ... ಕುಡಿಯುವ ನೀರಿನ ಬವಣೆಯನ್ನು ತಣಿಸಿರಲಿಲ್ಲ, ಅವ... ನಂತರ ಗೆದ್ದ ಮಹಿಮಾ ಕೂಡ ಇತ್ತ ತಿರುಗಿ ನೋಡಿರಲಿಲ್ಲ... ಅಷ್ಟೇ ಯಾಕೆ, ಮಹಿಮಾ ನಂತರ ಗೆದ್ದ ಬಿಜೆಪಿಯ... ಮಾಡಾಳು ವಿರೂಪಾಕ್ಷಪ್ಪ ಕೂಡ ಈ ಸಮಸ್ಯೆಯ ಬ... ತಲೆ ಕೆಡಿಸಿಕೊಂಡಿರಲಿಲ್ಲ.

ಆದರೆ 2013ರ ಚುನಾವಣೆಯಲ್ಲಿ ಗೆದ್ದು ಶಾಸಕರಾ... ಕೂಡಲೆ ವಡ್ನಾಳು ರಾಜಣ್ಣ ಮಾಡಿದ ಮೊದಲ ಕೆಲಸವೆಂದು... ವಡ್ನಾಳು ಕೆರೆಗೆ ನೀರು ತುಂಬಿಸಿ ಸುತ್ತಲ ಹಳ್ಳಿಗಳಿ... ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು. ಈಗ ಉಬ್ರಾಣಿ... ಹೋಬಳಿಯ ಇತರೆ ಪ್ರಮುಖ ಕೆರೆಗಳಿಗೂ ನೀರು... ತುಂಬಿಸುವ ವಿಶೇಷ ಯೋಜನೆಯನ್ನು ರಾಜಣ್ಣ... ಹಾಕಿಕೊಂಡಿದ್ದು ಜನ ಕಾಂಗ್ರೆಸ್ ಬೆಂಬಲಿಸುವಂತೆ ಮಾಡಿದೆ...

ಈ ಮತ ಕ್ಷೇತ್ರದಲ್ಲಿ ಲಿಂಗಾಯತರದ್ದು ಅದೆಷ್ಟೇ... ಅಬ್ಬರ ಇದ್ದರೂ ಇಲ್ಲಿ ಅಲ್ಪಸಂಖ್ಯಾತ ಮುಸಲ್ಮಾನರು... ಪ್ರಮುಖ ಪಾತ್ರ ವಹಿಸುತ್ತಾರೆ. ಅವರು ಬರುವ ಶುಕ್ರವಾ... ಯಾವ ಕ್ಷೇತ್ರದಲ್ಲಿ ಯಾವ ಪಕ್ಷದ ಅಭ್ಯರ್ಥಿಯನ್ನು... ಬೆಂಬಲಿಸಬೇಕು ಎಂದು ತೀರ್ಮಾನಿಸಲಿದ್ದಾರೆ. ಈ ಬಾರಿ... ಯಾವ ಕಾರಣಕ್ಕೂ ನರಹಂತಕ ಮೋದಿ ಆಗಲಿ ಆತ... ಬಿಜೆಪಿಯಾಗಲಿ ಗೆಲ್ಲಬಾರದು ಎಂದು ನಿರ್ಧರಿಸು... ಮುಸಲ್ಮಾನರು ಸಿದ್ದೇಶ್ವರರನ್ನು ಸೋಲಿಸುವ ತಾಕತ್ತಿರು... ಕಾಂಗ್ರೆಸ್‌ನ ಮಲ್ಲಿಕಾರ್ಜುನರನ್ನೇ ಬೆಂಬಲಿಸುವ ನಿರೀಕ್ಷೆ... ಇದೆಯಲ್ಲದೆ ಸೋಲುವ ಕುದುರೆ ಆಗಿರುವ ಜೆಡಿಎಸ್‌ನ... ಮಹಿಮಾ ಪಟೇಲರನ್ನಲ್ಲ.

ಇವೆಲ್ಲದರ ಹಿನ್ನೆಲೆಯಲ್ಲಿ ಬಿಜೆಪಿಯ ಸಿದ್ದೇಶ್ವರರಿಗೆ... ನಡುಕ ಶುರುವಾಗಿದೆ. ಅತ್ತ ಮಹಿಮಾ ಕೀಳುವ ಮತಗಳು... ಬಿಜೆಪಿಯದ್ದೇ ಆಗಿರುತ್ತದೆ ಎಂಬ ಭಯ, ಇ... ಮಲ್ಲಿಕಾರ್ಜುನ್ ಅವರಿಗೂ ಲಿಂಗಾಯತರ ಬೆಂಬಲ ಇ... ಎಂಬ ಅರಿವು, ಮತ್ತೊಂದೆಡೆ ಅಲ್ಪಸಂಖ್ಯಾತರು ಮತ್ತು... ಹಿಂದುಳಿದ ವರ್ಗದವರು ಕಾಂಗ್ರೆಸ್ ಬೆನ್ನಿಗೆ ನಿಲ್ಲುತ್ತಾರೆಂಬ... ಅಂಶ, ಮಗದೊಂದೆಡೆ ಬಿಜೆಪಿ ರಾಜ್ಯದಲ್ಲಿ ಗಳಿಸಿ... ಕುಖ್ಯಾತಿ... ಇವೆಲ್ಲವೂ ಸೇರಿದರೆ ಬಿಜೆಪಿಗೆ ಸೋಲು... ಕಟ್ಟಿಟ್ಟ ಬುತ್ತಿ ಅಲ್ಲದೆ ಇನ್ನೇನು?

● ಟಿ.ಎಸ್.ಷಣ್ಮು...

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಗೌರಿ ಮೃದುನಾರಿ ಮತ್ತು ಕಾಳಿ ಗಂಡುಬೀರಿ

ಪ್ರಕೃತಿಯದೇ ಪುರುಷ ರೂಪ ಶಿವ. ಶಿವನ ...ಗಳನ್ನು ಮತ್ತು ಅವನ ವರ್ತನೆಗಳನ್ನು ಗಮನಿಸಿದರೆ, ...ವ ನಿರ್ಮಿತ ಧರ್ಮ ಮತ್ತು ಸಮಾಜದಿಂದ ...ವಾಗಿ ಕಾಣುತ್ತಾನೆ. ಕಾಡುಮಲೆಗಳಲ್ಲಿ ಪ್ರಕೃತಿ ...ವಾಗಿ ವರ್ತಿಸುವ ಅಥವಾ ಬದುಕಿನ ಕಥೆಗಳನ್ನು ...ರುವ ಶಿವನೆಂಬ ಪರಿಕಲ್ಪನೆಯು ಪ್ರಕೃತಿಯಿಂದಲೇ ...ದಾಗಿರುವುದು ಎಂಬುದರ ಸ್ಪಷ್ಟ ಸೂಚನೆಗಳಿವೆ. ...ಶಿವನಿಗೆ ಸಂಗಾತಿಯಾಗಿ ಗೌರಿ ಎಂಬ ಮೃದು ...ಕೆಯ ಹೆಣ್ಣನ್ನೂ, ನಂತರ ಕಾಳಿ ಎಂಬ ಗಡಸು ...ಳಿಕೆಯ ಹೆಣ್ಣನ್ನೂ ಕೂಡಿಸುತ್ತಾರೆ.

...ಸಾಮಾನ್ಯವಾಗಿ ಕಠಿಣವಾಗಿ ವರ್ತಿಸುವ ಅಥವಾ ...ದರಯುತವಾಗಿ ನಿಷ್ಠುರವಾಗಿರುವ ಹೆಣ್ಣನ್ನು ಗಂಡುಬೀರಿ ...ಎ ಕರೆಯುವ ವಾಡಿಕೆಯು ತಪ್ಪು ಕಲ್ಪನೆಯಿಂದ



...ಬುವುದು ಎಂಬುದು ನನ್ನ ಗ್ರಹಿಕೆ. ಗಡಸುತನ, ವೀರತ್ವ ...ೀರ ವಿಲುವುಗಳು ಇವುಗಳ ಮೂಲ ಗಂಡಾಗಿರದೇ ...ದು ತೋರುತ್ತದೆ. ಹೀಗಿರುವ ಹೆಣ್ಣನ್ನು ನೋಡಿ ...ಬ ಅದನ್ನು ಮೈಗೂಡಿಸಿಕೊಂಡಿರುವ ಅಥವಾ ಅದೇ ...ಲ್ಲಿ ತಯಾರಾಗಿರುವ ಸಾಧ್ಯತೆಗಳಿವೆ.

...ಪ್ರಕೃತಿಯ ಜೀವ ಜಗತ್ತಿನಲ್ಲಿ ಹೆರುವ ಹೆಣ್ಣೇ ಅಧಿಪತ್ಯ ...ಸುವುದು ಪ್ರಾಣಿಜಗತ್ತಿನಲ್ಲಿಯೂ ಮತ್ತು ...ಷ್ಯರಲ್ಲಿಯೂ ಕೂಡ ಸಹಜವೇ ಆಗಿದ್ದು, ಆದಿಮ ...ದ ಮಾತೃ ಪ್ರಧಾನ ಗುಂಪುಗಳನ್ನು ನೆನಪಿಸಿಕೊಳ್ಳಿ. ... ನಾಯಕಿಯಾಗಿದ್ದು, ಅವಳೇ ಇಡೀ ತಂಡವನ್ನು ...ನ್ನಡೆಸುವಾಗ ಸಹಜವಾಗಿಯೇ ಮುಂದಾಳಿಗೆ ...ಬೇಕಾದ ಗಡಸುತನ ಮತ್ತು ವೀರತ್ವ ಇರುತ್ತಿದ್ದವು. ...ಯೇ ಅವಳು ತನ್ನ ಅಧಿಕಾರವನ್ನು ಸ್ಥಾಪಿಸಿಕೊಂಡಿದ್ದಳು. ...ತ್ವದ ಮತ್ತು ಹೋರಾಟದ ಹಾದಿಯಲ್ಲಿ ಗಂಡಿನದು ...ನೆಯ ಸ್ಥಾನ. ಪ್ರತಿರೂಪವೊಂದರ ಸೃಷ್ಟಿಗೆ ಅವಳು ...ಎಂಬ ನಿದರ್ಶನವೇ ಅವಳನ್ನು ಒಂದು ಹಂತಕ್ಕೆ ...ಕ್ಕೇರಿಸಲ್ಪಟ್ಟಿತ್ತು. ಜೊತೆಗೆ ಹೆತ್ತಾದ ನಂತರ ...ನೆಪಾಲನೆ ಮಾಡುತ್ತಾ ಆಕೆ ಕೊಡುತ್ತಿದ್ದ ...ಶನಗಳನ್ನು ಸಹಜವಾಗಿ ಪಾಲಿಸುತ್ತಿದ್ದ ಗಂಡಿಗೆ ...ಮನ್ನು ಅನುಸರಿಸುವುದು ಕೂಡ ರೂಢಿಯಾಗಿತ್ತು. ...ಗಿಯೇ ಅವಳು ಉಚಿತ ಸಂದರ್ಭಗಳಲ್ಲಿ ಮತ್ತು ...ಪರಿಸ್ಥಿತಿಗಳಲ್ಲಿ ಗಂಡಸರನ್ನು ಒಳಗೊಂಡ ಗುಂಪನ್ನು ...ಚೂಣಿಯಲ್ಲಿ ನಿಂತು ನಿರ್ವಹಿಸುತ್ತಿದ್ದಳು. ಹೆಣ್ಣು ...ಸಂತಾನುವವಳು ಎಂಬ ಅರ್ಥದಲ್ಲಿ ಗಂಡುಬೀರಿ ಎಂದು ...ಯುವುದು ತಪ್ಪಾಗುತ್ತದೆ. ವಾಸ್ತವವಾಗಿ ಗಟ್ಟಿತನ ಅಥವಾ ...ತನ ಹೆಣ್ಣಿನ ಮೂಲ ಸ್ವಭಾವವಾಗಿದ್ದು, ವೀರತ್ವವನ್ನು ...ದು ಕಲಿತಿದ್ದು ಹೆಣ್ಣಿನಿಂದ.

...ಪುರಾಣಗಳಲ್ಲಿ ಬರುವ ಕಥೆಗಳನ್ನು ನೆನಪಿಸಿಕೊಳ್ಳಿ. ...ದ್ರಾದಿ ದೇವತೆಗಳು, ಸಿದ್ಧರು, ಮುನಿಗಳು ಹಾಗೂ ...ರು ದೇವಿಯಲ್ಲಿಗೆ ಬಂದು ಹಾಡಿ ಹೊಗಳಿ ತಮ್ಮ ...ವನ್ನು ನಿವೇದಿಸಿಕೊಂಡು ಆಕೆಯನ್ನು ಯುದ್ಧಕ್ಕೆ ...ದುಂಬಿಸಿ ಅಸುರರ ಕಡೆಗೆ ಕಳುಹಿಸುತ್ತಾರೆ. ಆಕೆ ಆ ...ರೊಂದಿಗೆ ಯುದ್ಧಮಾಡುವಾಗ ಈ ದೇವತೆಗಳ ಪ್ರಧಾನ ...ವೆಂದರೆ ಯುದ್ಧದಲ್ಲಿ ಆಕೆಯದು ಮೇಲ್ಕೈಯಾದಾಗೆಲ್ಲಾ ...ಘೋಷಗಳನ್ನು ಕೂಗುವುದು ಮತ್ತು ಪುಷ್ಪ ವೃಷ್ಟಿ ...ವುದು. ಉಳಿದಂತೆ ಯುದ್ಧದ ನಂತರ ಉದ್ಭುದ್ಧ ...ತೆಗಳನ್ನು ಹಾಡುವುದು. ಇಲ್ಲಿ ಗಮನಿಸಲೇ ಬೇಕಾದ ...ವೆಂದರೆ, ಆರ್ಯರ ಅಥವಾ ವೈದಿಕ ದೇವತೆಗಳ ...ಅವು ಮಾತೃಪ್ರಧಾನವಾಗಿದ್ದು ನಂತರ ಯಾವಾಗಲೋ ...ರ ಪಲ್ಲಟವಾಗಿದೆ. ಪಿತೃದೇವತೆಗಳಿಗೆ ಮಾನ್ಯತೆಯನ್ನು ...ಲಾಗಿದೆ. ಆದರೆ, ಇಲ್ಲಿನ ಅಸುರ ಅಥವಾ ರಾಕ್ಷಸರು

ಮೂಲ ನಿವಾಸಿಗಳಾಗಿದ್ದು, ಅವರಲ್ಲಿ ಮಾತೃಪ್ರಧಾನದ ವ್ಯವಸ್ಥೆಯೇ ಮುಂದುವರಿದಿರುವಂತೆ ಕಾಣುತ್ತದೆ. ಒಟ್ಟಿನಲ್ಲಿ ರಾಜಪ್ರಭುತ್ವವು ವ್ಯವಸ್ಥಿತವಾಗಿ ಬರುವ ಹೊತ್ತಿಗೆ ಮಾತೃಪ್ರಧಾನದ ವ್ಯವಸ್ಥೆಯು ಶಿಥಿಲಗೊಂಡಿವೆ.

ಅಸುರರಿಗೆ ಎದುರಾಗಿ ಸೆಣಸಿರುವ ದೇವಿಯರು ಚಾರಿತ್ರಿಕವಾಗಿ ನಿಜವೇ ಆದರೆ, ಆ ದೇವಿ ಆರ್ಯ ಸ್ತ್ರೀಯಾಗಿರುವುದಿಲ್ಲ, ಬದಲಿಗೆ ಆ ದೇವಿಯರೂ ರಾಕ್ಷಸಿಯರೇ ಆಗಿದ್ದು ಅಥವಾ ಇತರೇ ಬುಡಕಟ್ಟು ಗಣಗಳ ನಾಯಕಿಯರಾಗಿರುತ್ತಾರೆ. ಅವರೊಂದಿಗೆ ಆರ್ಯರು ಮಾಡಿಕೊಂಡಿರುವ ಒಪ್ಪಂದವೋ ಅಥವಾ ವಿನಂತಿಯ ಪುರಸ್ಕಾರವೋ ತಮ್ಮದೇ ಜನಾಂಗದ ಅಥವಾ ತಮ್ಮಂತಹದೇ ಬುಡಕಟ್ಟಿನ ಜನರೊಂದಿಗೆ ಹೋರಾಡಿದ್ದಾರೆ. ಮುಖಸ್ತುತಿಯ ಸ್ವಭಾವವನ್ನು ರಕ್ತಗತವಾಗಿರಿಸಿಕೊಂಡಿರುವ ಆರ್ಯ ಜನಾಂಗದವರು ತಮ್ಮ ಪರವಾಗಿರುವವರನ್ನು ಉನ್ನತಿಗೇರಿಸಿ, ವಿರೋಧಿಗಳಾದವರನ್ನು ಸಕಲ ವಿಕೃತ ಗುಣಾರೋಪಗಳನ್ನು ಮಾಡಿ ವಿಲಕ್ಷಣವಾಗಿ ದಾಖಲು ಮಾಡುವ ಸಂಪ್ರದಾಯವನ್ನು ಮುಂದುವರಿಸಿರುತ್ತಾರೆ.


ಮುಂದೆ ಸಹಜವಾಗಿ ಆರ್ಯರೂ ಮತ್ತು ದ್ರಾವಿಡ ಹಾಗೂ ಇತರ ಸ್ಥಳೀಯ ಬುಡಕಟ್ಟುಗಳೂ ಸೇರಿ ಹೋಗಿ, ಮುಂದೆ ಉತ್ಪಾದಿತರಾದ ವ್ಯಕ್ತಿಗಳು ಜನಾಂಗೀಯವಾಗಿ ಆರ್ಯ ಅಥವಾ ಮೂಲನಿವಾಸಿಗಳಾಗಿರದೇ ಕೇವಲ ಮನೋಭಾವದಿಂದ ಮತ್ತು ರಾಜಕೀಯವಾಗಿ ಆರ್ಯಪರ ಅಥವಾ ವೈದಿಕ ಪರವಾಗಿರುವ ಅಥವಾ ಮೂಲನಿವಾಸಿಗಳ ಮೌಲ್ಯಪರ ಸೂಚನೆಗಳೂ ಕೂಡ ಕಾಣುತ್ತವೆ.


ಅದೇನೇ ಇರಲಿ, ಆರ್ಯ ಸ್ತ್ರೀಯಾದವಳು ಗೌರಿಯಂತೆ ಮೃದುವಾಗಿಯೂ, ಮೆದುವರ್ತನೆಗಳಿಂದ ಕೂಡಿದವಳಾಗಿಯೂ, ಕೋಮಲವಾಗಿಯೂ ಚಿತ್ರಿಸಲ್ಪಟ್ಟಿರುವವಳು. ಇದಕ್ಕೆ ಹೊರತಾಗಿ ನಿಂತವಳು ಕಾಳಿ.

ತ್ರಿಪುರಸುಂದರಿ ಮತ್ತು ತ್ರಿಪುರಭೈರವಿ

ಮೂರು ಲೋಕಗಳನ್ನೂ ತಲ್ಲಣಗೊಳಿಸುವ, ಹೆದರಿಕೆಯನ್ನುಂಟುಮಾಡುವ ಗಂಡುಬೀರಿ ಕಾಳಿಯು ತ್ರಿಪುರ ಭೈರವಿಯಾದರೆ, ಮೂರೂ ಲೋಕಗಳಲ್ಲಿ ತಾಮಸಗೊಳಿಸುವ, ಸಮಾಧಾನ ನೀಡುವ, ಪೋಷಣೆ ಮಾಡುವ ಗೌರಿಯು ತ್ರಿಪುರಸುಂದರಿಯಾಗುವಳು. ಒಟ್ಟಾರೆ ಹೆಣ್ಣು ಲಾಲಿತ್ಯವುಳ್ಳಂತಹ ಲಲಿತೆಯೂ ಮತ್ತು ರುದ್ರಳಾದ ಕಾಳಿಯೂ ಆಗುತ್ತಾಳೆ. ಈ ಎರಡೂ ಸ್ವಭಾವ ಮತ್ತು ಸ್ವರೂಪಗಳು ಅವಳಿಗೆ ಸಹಜವೂ, ನೈಸರ್ಗಿಕವೂ ಆಗಿರುತ್ತದೆ.

ಸುಮ್ಮನೆ ಹಾಗೇ ಗಮನಿಸಿ; ಹೆಣ್ಣೊಂದು ಲಾಲಿತ್ಯದಿಂದ, ವಯ್ಯಾರದಿಂದ ಲತೆಯಂತೆ ಬಳುಕಿ ಆಡಿದರೂ, ಗಡುಸಾಗಿ, ವೀರತ್ವದಿಂದ ವರ್ತಿಸಿದರೂ ಆಕೆಯ ಸ್ವಭಾವದ ಭಾಗವಾಗಿಯೋ ಅಥವಾ ಸಾಂದರ್ಭಿಕ ಅಭಿವ್ಯಕ್ತಿಯಂತೆಯೋ ಕಾಣುವುದು. ಆದರೆ, ಪುರುಷನಲ್ಲಿ ವಯ್ಯಾರವನ್ನು ನೋಡುವುದು ಅಸಹಜವಾಗಿಯೂ, ಅಸ್ವಾಭಾವಿಕವಾಗಿಯೂ ಕಾಣುವುದು. ಇದಕ್ಕೆ ನಮ್ಮ ಅಭ್ಯಾಸ ಬಲವೇ ಕಾರಣವಾಗಿದ್ದರೂ, ಹೆಣ್ಣಿನ ದೇಹಕ್ಕೆ ನಾವೇನು ಗಂಡಸ್ತನದ್ದು ಎಂದು ಹೇಳುವ ನಡವಳಿಕೆಯು ಅಸ್ವಾಭಾವಿಕವಾಗೇನೂ ಕಾಣುವುದಿಲ್ಲ, ಪುರುಷಾಧಿಕ್ಯದ





ಪೌರುಷದ ಅಮಲಿನಲ್ಲಿರುವ ಸಾಮಾನ್ಯವಾದ ಪುರುಷ ಸಮೂಹವು ಆಕೆ ಸಮಬಲಳಾಗಿರುವುದನ್ನು ಸಹಿಸುವುದಿಲ್ಲ. ಕಾರಣವೆಂದರೆ, ತಮ್ಮ ಹಿಂಸೆಗೆ ತಾವೇ ಪ್ರತಿಹಿಂಸೆ ಅನುಭವಿಸಬೇಕಾಗುತ್ತದೆ. ಕೊಡುವ ಹಿಂಸೆಗೆ ಬಲಿಪಶುವಾಗಿ ನರಳುತ್ತಾ ಹೋಗುವ ಮೂಕ ಪ್ರಾಣಿ ಇದ್ದಲ್ಲಿ ಬಲಾಬಲಗಳ ಸಂಘರ್ಷವಿರುವುದಿಲ್ಲ, ಹಾಗಾಗಿ ಬಲಿಪಶು 'ಅವಳೇ' ಆಗಿರಲಿ! ಆದರೆ ಕಾಳಿಯ ವಿಚಾರದಲ್ಲಿ ಹಾಗಲ್ಲ, ಅವಳು ಪುರುಷಾಧಿಪತ್ಯದಿಂದ ಹೊರತಾದವಳು. ಕೆದರಿದ ಕೂದಲನ್ನು ಹೊಂದಿರುವ ಸ್ವತಂತ್ರಳು. ಗಂಡನ್ನು ಮೆಟ್ಟುವವಳು. ರಕ್ತವನ್ನು ಕುಡಿಯುವವಳು. ಬೆತ್ತಲಾಗಿರುವವಳು.

ಪ್ರಕೃತಿ ಸಹಜವಾಗಿರುವುದು ಹೆಣ್ಣಾದ್ದಾದರೆ, ಸಮಾಜ ಮತ್ತು ರೀತಿನೀತಿಗಳು ಪುರುಷನ ಕೊಡುಗೆಯಂತೆ ರೂಪುಗೊಂಡವು. ಅಬಲೆಯೂ ಮತ್ತು ಲಲಿತೆಯೂ ಆದ



ಸುಕೋಮಲ ಹೆಣ್ಣನ್ನು ಯಾವುದೇ ಆಕ್ರಮಣದಿಂದ ರಕ್ಷಿಸಲೆಂದೇ ರೂಪಿತವಾಗಿರುವಂತೆ ತೋರುವ ಆ ಎಲ್ಲಾ ರೀತಿನೀತಿಗಳು ಅವನಿಂದಲೇ ಮುರಿಯಲ್ಪಡುವವು. ದ್ರೌಪದಿಯ ಅಪಮಾನವನ್ನು ಗಮನಿಸಿ. ಪುರುಷರು ತಮ್ಮ ತಮ್ಮಲ್ಲಿ ಜೂಜಾಡಿಕೊಂಡು, ಅವರೇ ಹೆಣ್ಣನ್ನು ಪಣಕ್ಕಿಟ್ಟುಕೊಂಡು ಕೊನೆಗೆ ಅವರೇ ಅವಳನ್ನು ಒಬ್ಬಂಟಿಯಾಗಿಸಿ ತಮ್ಮ ಗುಂಪಲ್ಲಿ ಎಳೆದೊಯ್ದಾಗ ಅವಳು ಅವರೇ ನಿರ್ಮಿಸಿರುವ ಧರ್ಮವನ್ನೂ ಮತ್ತು ನೀತಿಯನ್ನೂ ಪ್ರಶ್ನಿಸಿದಳು. ಆದರೆ ಅದಕ್ಕೆ ಪ್ರತಿಯಾಗಿ ಅವಳನ್ನೇ ನಿರ್ವಸ್ತ್ರಳನ್ನಾಗಿಸಿ ಅಪಮಾನಿಸುವಂತಹ ಅವಮಾನವನ್ನು ಮಾಡಿದರು. ಹಾಗೆಯೇ ಮುಂದಿನ ನಡೆಯನ್ನು ಗಮನಿಸಿ, ಕೃಷ್ಣನೆಂಬ ಮತ್ತೊಬ್ಬ ಪುರುಷನೇ ಅವಳನ್ನು ರಕ್ಷಿಸುವಂತೆ ಮಾಡಿದರು. ಅಂತೂ ಪ್ರಕೃತಿ ಸಹಜವಾಗಿರುವ ಹೆಣ್ಣನ್ನು ದಮನಿಸಲು ಯತ್ನಿಸುವುದೂ, ಕಾಪಾಡುವುದೂ ಪುರುಷನೇ ಎಂಬ ಸಂದೇಶವನ್ನಿತ್ತರು. ಇನ್ನೂ ಮುಂದುವರಿದ ಭಾಗವಾಗಿ ಗೌರಿಯಾಗಿದ್ದ ದ್ರೌಪದಿ ತನಗಾದ ಅಪಮಾನದ ಪ್ರತೀಕಾರವಾಗಿ ತನ್ನ ಬಿಚ್ಚಿದ ಮುಡಿಯನ್ನು ಬಿಚ್ಚಿದಂತೆಯೇ ಇರಿಸಿ ಕಾಳಿಯನ್ನು ಪ್ರತಿನಿಧಿಸಿದಳು. ಬಿಚ್ಚಿದ ಮುಡಿಯು ರಕ್ತದಾಹದಿಂದ ಕೂಡಿತ್ತು, ಅದೂ ಪುರುಷರ ರಕ್ತದಾಹ. ಆ ಕೌರವರೆಂಬ ಪುರುಷರ ರಕ್ತವನ್ನು ಬಸಿಯಲು ಪಾಂಡವರೆಂಬ ಪುರುಷರೇ ಸನ್ನದ್ಧರಾಗಬೇಕಾಯ್ತು. ಇದು ಪುರುಷ ಪ್ರಧಾನ ಸಮಾಜದ ದುರ್ಗತಿ. ಪ್ರಕೃತಿಗೆ ವಿರೋಧವಾಗಿ ನಡೆದವರ ದುಃಸ್ಥಿತಿ.

ದ್ರೌಪದಿಯ ಕರಗವನ್ನು ಸೀರೆಯುಟ್ಟ ಪುರುಷನು ಹೊತ್ತು ನಡೆಯುವುದನ್ನು ನೋಡುವಾಗೆಲ್ಲಾ ಪ್ರಾಕೃತಿಕವಾಗಿರುವ ಸ್ತ್ರೀಯ ಅಧೀನದಲ್ಲಿರುವುದನ್ನು ಅಹಂಕಾರದ ಪುರುಷನು ಒಪ್ಪದೇ ಕೊನೆಗೆ ತನ್ನ ರಕ್ತವನ್ನು ತಾನೇ ಬಸಿದುಕೊಳ್ಳಲು ಕತ್ತಿಯನ್ನು ಹಿಡಿದು ಹೊರಟವನಾಗಿ ಕಾಣುತ್ತಾನೆ.

ರಕ್ತಬೀಜಾಸುರ

"ಪುರುಷಾಧಿಕಾರದ ಹಸಿವು ಹೇಗಿರುವುದೆಂದು ರಕ್ತಬೀಜಾಸುರನ ಕಥೆ ಹೇಳುತ್ತದೆ.

ಪುರಾಣಗಳು ಹೇಳುವಂತೆ ಯಾವುದೇ ಅಸುರರು ಅಥವಾ ಯಾವುದೇ ಪುರುಷನು ವರ ಪಡೆದು ಲೋಕಕಂಟಕರಾಗುವುದು ಪುರುಷ ದೇವತೆಗಳಿಂದಲೇ. ಭಸ್ಮಾಸುರ ಶಿವನಿಂದಾದರೆ, ಹಿರಣ್ಯಕಶಿಪುನಂತವರು ಬ್ರಹ್ಮನಿಂದ. ಅಂತೆಯೇ ರಕ್ತಬೀಜನು ಕೂಡ ಬ್ರಹ್ಮನಿಂದ. ನೆನಪಿರಲಿ, ಬ್ರಹ್ಮ ಮಹಾ ಪುರುಷವಾದಿ. ಹೆಣ್ಣಿಗೆ ಆತನಲ್ಲಿ ಯಾವುದೇ ಭಾವನಾತ್ಮಕ ಸ್ಥಾನವಿಲ್ಲ, ಇರಲಿ, ಬ್ರಹ್ಮನಿಂದ ಅಮರನಾಗುವ ವರವನ್ನು ಪಡೆದುಕೊಂಡ ರಕ್ತಬೀಜ ತನ್ನ ರಕ್ತವು ಭೂಮಿಯ ಮೇಲೆ ಬಿದ್ದ ಎಡೆಯಿಂದೆಲ್ಲಾ ಅವನಷ್ಟೇ ಸಮರ್ಥ ರಕ್ತಬೀಜನು ಹುಟ್ಟಿಕೊಳ್ಳುವಂತಹ ವರವನ್ನು ಪಡೆದಿದ್ದು, ರಕ್ತಬೀಜವು ಪುರುಷ ಸ್ವಾಮ್ಯದ ದ್ಯೋತಕ. ಆದರೆ, ಈ ಸದಾ ಪುರುಷಸ್ವಾಮ್ಯದ ಆಸೆ ಎಷ್ಟರಮಟ್ಟಿಗೆ ನಿರ್ವೀರ್ಯವಾಗುವುದು ಎಂದು ಕೂದಲು ಕಟ್ಟದ, ಸ್ವತಂತ್ರ ಸ್ವಭಾವದ, ಬೆತ್ತಲೆ ಕಾಳಿ ಎಂಬ ಹೆಣ್ಣು ನಿರೂಪಿಸುತ್ತಾಳೆ. ಅವನ ರಕ್ತವೇ ಕೆಳಗೆ ಬೀಳದಂತೆ ನಾಲಿಗೆಯನ್ನು ಹರಡಿ ಅವನನ್ನು ಕೊಂದು ಅಥವಾ ತಿಂದು ಮುಗಿಸಿದಳು ಎಂದು ಕಾಳಿಕಾ ಪುರಾಣದ ಕಥೆ ಹೇಳಿದರೆ, ಭೂಮಿಯೇ ಹೆಣ್ಣು, ಅವನ ರಕ್ತವನ್ನು ಸಹಜವಾಗಿಯೇ ಹೀರಲ್ಪಡುತ್ತದೆ ಎಂದು ಸ್ತ್ರೀತತ್ವ ಹೇಳುತ್ತದೆ.

ಲೈಂಗಿಕತೆ ಎಂಬುದು ಗಂಡಿನಲ್ಲಿ ಮಾನಸಿಕ ಮತ್ತು ಶಾರೀರಿಕ ತೃಷೆಯು ತಣಿಯುವ ಆನಂದದ ಉತ್ತುಂಗವಾದರೆ, ಅದೇ ಲೈಂಗಿಕತೆ ಎಂಬುದು ಹೆಣ್ಣಿನಲ್ಲಿ ಜೈವಿಕ ಅಗತ್ಯವೂ ಆಗಿದೆ. ಪುರುಷ ತನ್ನ ವಂಶವನ್ನು ಅಥವಾ ಸಂತತಿಯನ್ನು ಮುಂದುವರಿಸುತ್ತಾನೆ ಎಂಬ ಸಿದ್ಧಾಂತವೇ ಸ್ವಾಮ್ಯತ್ವದ ಆಸೆಯಾಗಿದ್ದು ಅಸ್ವಾಭಾವಿಕವಾಗಿದೆ. ಪ್ರಕೃತಿಯಲ್ಲಿ ಹೆಣ್ಣು ತನ್ನ ಸಂತತಿಯನ್ನು ಮುಂದುವರಿಸಲು ಗಟ್ಟಿಮುಟ್ಟಾದ ಗಂಡನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಪ್ರಕೃತಿಯಲ್ಲಿ ಪ್ರಾಣಿಗಳ ಸಂತಾನೋತ್ಪತ್ತಿಯನ್ನೂ, ಅದರ ಮುಂದುವರಿಕೆಯ ಭಾಗವಾದ ಸ್ವಯಂವರ ಪದ್ಧತಿಗಳನ್ನೂ ನೆನಪಿಸಿಕೊಳ್ಳಿ. ಹೆಣ್ಣು ಗಂಡಿನ ವಂಶವನ್ನಲ್ಲ ಮುಂದುವರಿಸುವುದು, ತನ್ನ ಸಂತತಿಯನ್ನು ಅವಳು ಮುಂದುವರಿಸುವುದು. ಆದರೆ, ಅವಳ ಮೇಲೆ ರಾಜಕೀಯವಾಗಿ, ಸಾಮಾಜಿಕವಾಗಿಯಾದರೂ ಸ್ವಾಮ್ಯ ಸಾಧಿಸಲು, ಸ್ವತಂತ್ರ ಸ್ತ್ರೀಯನ್ನು ಪಳಗಿಸಲು, ಗೌರಿಯನ್ನಾಗಿಸಲು ಪುರುಷ ನಾನಾ ಪ್ರಯತ್ನಗಳನ್ನು ಮಾಡಿದ. ಶೀಲ, ಸಂಯಮ, ಚಾರಿತ್ರ್ಯ, ಮುತ್ತೈದೆತನ, ಮೈತುಂಬಾ ವಸ್ತ್ರ ತಲೆಯ ಮೇಲೆ ಮುಸುಕು, ಪಾತಿವ್ರತ್ಯಗಳಿತ್ಯಾದಿಯಾಗಿ ಅವಳ ಸುತ್ತ ಹೆಣೆದ. ಇವನ್ನೆಲ್ಲಾ ಧಿಕ್ಕರಿಸಿ, ಪ್ರತಿರೋಧಿಸಿ ಸೆಟೆದು ನಿಂತವಳು ಕಾಳಿ. ಶಿಷ್ಟಾಚಾರಗಳು ಪುರುಷ ನಿರ್ಮಿತವಾಗಿದ್ದು, ಅವು ಸಾಮಾನ್ಯವಾಗಿ ಹೆಂಗಸರಿಗೆ ಉಸಿರುಗಟ್ಟಿಸುತ್ತವೆ. ನೈಸರ್ಗಿಕವಾಗಿ ಇರ ಬಯಸುತ್ತಾ, ಕಟ್ಟಳೆಗಳ ಶೃಂಖಲೆಗಳನ್ನು ಹೆಣ್ಣು ಕಿತ್ತೊಗೆದಾಗೆಲ್ಲಾ ಶಿವನ ಮೆಟ್ಟಿ ಕಾಳಿಯಾಗುತ್ತಾಳೆ ಅಥವಾ ಸಮಾಜವನ್ನು ಒಪ್ಪಿದ ಮೇಲೆ ಪುರುಷನಿಂದ ನಿರ್ಮಿತವಾದ ಕಟ್ಟಳೆಗಳನ್ನು ಪುರುಷನೇ ಮುರಿದಾಗ ಅದೇ ಪುರುಷನಿಂದ ಪುರುಷನ ದಮನ ಮಾಡುವ ದ್ರೌಪದಿಯಾಗುತ್ತಾಳೆ. ದ್ರೌಪದಿ ಅಥವಾ ಕಾಳಿ ಇಬ್ಬರಿಗೂ ಬೇಕಾಗಿರುವುದು ಪುರುಷ ರಕ್ತ. ತನ್ನ ಕಟ್ಟಳೆಯಿಂದ ಸ್ತ್ರೀಯನ್ನು ಕಟ್ಟಿ ಹಾಕಲು ಮತ್ತು ಅನುಭೋಗಿಸಲು ಯತ್ನಿಸುವ ಪುರುಷನೊಬ್ಬನಾದರೆ, ಮತ್ತೊಬ್ಬ ತನ್ನ ರಕ್ತದ, ಬೀಜದ ಸಂತತಿಯನ್ನೇ ಸ್ಥಾಪಿಸಲು ಯತ್ನಿಸುವ ಪುರುಷ.

ಮತ್ತೊಬ್ಬರನ್ನು ಅಧೀನದಲ್ಲಿಟ್ಟುಕೊಳ್ಳುವ ಅಧಿಕಾರದ ವ್ಯಾಧಿ ಬರಿಯ ವ್ಯಕ್ತಿಗಳದ್ದಲ್ಲ. ಜನಾಂಗಗಳದ್ದು, ಸಮಾಜಗಳದ್ದು, ವರ್ಗಗಳದ್ದೂ ಕೂಡ. ಯಾವ ರೀತಿಯಲ್ಲಾದರೂ ಸ್ವಾಮ್ಯತೆ ಸಾಧ್ಯವಾಗದಿದ್ದ ಪಕ್ಷದಲ್ಲಿ ತಮ್ಮ ಶ್ರೇಷ್ಠತೆಯನ್ನು ಸಾಧಿಸಿಕೊಳ್ಳಲು ಮತ್ತೊಬ್ಬರನ್ನು ಕೀಳಾಗಿಸುತ್ತಾರೆ. ಈ ವಿಷಯದಲ್ಲಿ ಬರಿಯ ಬ್ರಾಹ್ಮಣಿಕೆಯನ್ನೇ ದೂರಿದರೆ ವಿಚಾರ ವಸ್ತುನಿಷ್ಠವಾಗುವುದಿಲ್ಲ. ಅಬ್ರಾಹ್ಮಣ್ಯದ ಎಲ್ಲಾ ಜಾತಿ ಮತ್ತು ಧರ್ಮಗಳಲ್ಲಿಯೂ ಕೂಡ ಒಬ್ಬರ ಶ್ರೇಷ್ಠತ್ವವನ್ನು ಸಾಧಿಸಲು ಅದೇ ಜಾತಿಗಳಲ್ಲಿ ಮತ್ತೊಂದು ಉಪಜಾತಿಗಳನ್ನು ನಿರ್ಮಿಸಿ ಅವರವರಲ್ಲೇ ಅಂತರವನ್ನು ಕಾಯ್ದುಕೊಳ್ಳುವ ಅಥವಾ ಶ್ರೇಷ್ಠತೆಯನ್ನು ಘೋಷಿಸುವ ಪಿಡುಗುಗಳಿವೆ.

ರಸ್ತೆಬದಿಯ ಪಟ್ಟಾಸಿಯಲ್ಲಿದ್ದ ಅಲೆಮಾರಿ ಜನಾಂಗದ ತಮಟೆ ಹೊಡೆಯುವನೊಬ್ಬ ಮಾತಿಗೆ ಮಾತು ಬಂದು "ನಾವು ದೇವರ ಉತ್ಸವಕ್ಕೆ ಮಾತ್ರ ತಮಟೆ ಹೊಡೆಯುವವರು. ಶವಗಳಿಗೆಲ್ಲಾ ತಮಟೆ ಹೊಡೆಯುವವರಲ್ಲ, ಅವರಲ್ಲಿ ಕೊಟ್ಟು ತೆಗೆದುಕೊಳ್ಳುವ ... ಬೆಳೆಸಲು ತಮಗೆ ಇಷ್ಟವಾಗುವುದಿಲ್ಲ" ಎಂದ!

ಬ್ರಾಹ್ಮಣಿಕೆ ವಿರುದ್ಧ ಸಿಡಿದೆದ್ದ ಶರಣರು

"ಕಲ್ಲಿಯ ಹಾಕಿ ನೆಲ್ಲವ ತುಳಿದು
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
ವಾಗದ್ವೈತವ ಕಲಿತು
ಸಂಸ್ಕೃತದ ಮಾತಿನ ಪುರವ ಮುಂದೆ ಇಕ್ಕಿಕೊಂದು
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಅದೇತರ ನುಡಿ? ಮಾತಿನ ಮರೆ
ಆತುರವೈರಿ ಮಾರೇಶ್ವರ."

-ನಗೆಯ ಮಾರಿತಂದೆ

ಬಲೆಬೀಸಿ ಕಾಳು ಹಾಕಿ ಗುಬ್ಬಿಗಳನ್ನು ಹಿಡಿಯುವ ಹಾಗೂ ಗಾಳ ಹಾಕಿ ಮೀನು ಹಿಡಿಯುವ ಎರಡು ಚಿತ್ರಣಗಳೊಂದಿಗೆ ನಗೆಯ ಮಾರಿ ತಂದೆ ವಾಗದ್ವೈತದ ಹಿಂದಿರುವ ಮೋಸದಾಟವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಹಕ್ಕಿಗೆ ಹಾಕುವ ಧಾನ್ಯ ಮತ್ತು ಮೀನಿಗೆ ಹಾಕುವ ಆಹಾರ ಅವುಗಳನ್ನು ಬದುಕಿಸಲಿಕ್ಕಲ್ಲ, ಸಾಯಿಸಲಿಕ್ಕೆ! ಸಂಸ್ಕೃತವೆಂಬ ಮಾತಿನಂಗಡಿಯ ಸರಕಿನಿಂದ ಈ ಮೋಸವನ್ನು ಸಾಧಿಸಲಾಗಿದೆ. ಅದೇತರ ಮಾತು? ಅದು ಸತ್ಯವನ್ನು ಮರೆಮಾಚುವಂಥದ್ದು ಎಂದು ನಗೆಯ ಮಾರಿತಂದೆ ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ. ಅನುಭವದಿಂದ ಕೂಡಿದ ಈ ಪ್ರಜ್ಞೆಯೊಂದಿಗೆ ವಚನಕಾರರು ಅನುಭಾವದ ಮೆಟ್ಟಲೇರಿದ್ದಾರೆ.

"ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟ ದ್ವಿಜರ ಮಾತದೇಕೋ?
ಹಗಲು ಕಾಣದ ಗೂಗೆ ಇರುಳಾಯಿತೆಂದರೆ, ಜಗಕ್ಕೆ ಇರುಳಪ್ಪುದೆ?
ಹೋಮದ ನೇಮದಲ್ಲಿ ಹೋತವ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು, ಕೂಡಲಸಂಗಮದೇವಾ?

-ಬಸವಣ್ಣ

ಶರಣರು ವ್ಯರ್ಥ ವಾಗ್ಯುದ್ಧಕ್ಕೆ ಇಳಿಯುವವರಲ್ಲ. ತಲೆಸುತ್ತುವ ಇಟ್ಟಿಯ ಹಣ್ಣನ್ನು ತಿಂದು ತನ್ನ ಮುಂದಿರುವುದೆಲ್ಲ ತಿರುಗುತ್ತಿದೆ ಎಂದು ಹೇಳುವ ನರಿಯ ಹಾಗೆ ನಾಮ ಬಡಿದುಕೊಂಡ ದ್ವಿಜರು ಹೇಳುತ್ತಾರೆ. ಗೂಬೆಗೆ ಹಗಲೆಂದರೆ ಆಗದು. ಅದು 'ಕತ್ತಲಾಯಿತು' ಎಂದರೆ ಕತ್ತಲಾಗುವುದೆ? ಹೀಗೆ ಇಲ್ಲದ್ದನ್ನು ಇರುವ ಹಾಗೆ ಹೇಳುತ್ತ ಭ್ರಮೆಯ ಸೃಷ್ಟಿಸುವ ವೈದಿಕ ಸಾಹಿತ್ಯದಿಂದ ಪ್ರಭಾವಿತರಾದ ದ್ವಿಜರು ಯಜ್ಞಕ್ಕೆ ಬಲಿ ಕೊಟ್ಟ ಹೋತವನ್ನು ತಿಂದು ಉಪದೇಶ ಮಾಡುವವರು. ಇಂಥವರೇ ಹೊಲೆಯರು. (ಮನುಸ್ಮೃತಿಯ ಒತ್ತಡದಿಂದಾಗಿ ಹೊಲಗೇರಿಯಲ್ಲಿ ಉಳಿದವರು ಹೊಲೆಯರಲ್ಲ) ಹೀಗೆ ಬಸವಣ್ಣನವರು ತಮ್ಮ ಕಾಲದ ವಾಸ್ತವವನ್ನು ವಚನದಲ್ಲಿ ದಾಖಲಿಸಿದ್ದಾರೆ. ಇಂಥ ವಿತಂಡವಾದಿಗಳ ಜೊತೆ ವಾಗ್ವಾದ ಮಾಡಿ ಗೆಲ್ಲುವುದು ಕೂಡ ವ್ಯರ್ಥ ಎಂದು ಸೂಚಿಸಿದ್ದಾರೆ. "ಏನಯ್ಯಾ ವಿಪ್ರರು ನುಡಿದಂತೆ ನಡೆಯರು. ತಮಗೊಂದು ಬಟ್ಟೆ (ದಾರಿ) ಶಾಸ್ತ್ರಕ್ಕೊಂದು ಬಟ್ಟೆ" ಎಂದು ಬೇಸರ ವ್ಯಕ್ತಪಡಿಸಿದ ಬಸವಣ್ಣನವರು "ವಿಪ್ರರು ಕೀಳು ನೋಡಾ ಜಗವೆಲ್ಲ ಅರಿಯಲು" ಎಂದು ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಬಸವಣ್ಣನವರು ಅದರ ನಿಜಸ್ವರೂಪವನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ.

"ವೇದಂಗಳ ಹಿಂದೆ ಹರಿಯದಿರು.
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು.
ಪುರಾಣಂಗಳ ಹಿಂದೆ ಬಳಸದಿರು, ಬಳಸದಿರು.
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು.
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು."

-ಆದಯ್ಯ

ವೇದಾಗಮಗಳ ಸಂಸ್ಕೃತಿಯು ಶಬ್ದಜಾಲಗಳ ಸಂಸ್ಕೃತಿಯೇ ಆಗಿದೆ. ಈ ಶಬ್ದಜಾಲಗಳಲ್ಲಿ ಅಸಮಾನತೆ, ಜಾತಿ, ಅಸ್ಪೃಶ್ಯತೆ ಮತ್ತು ಅರ್ಧಜಗತ್ತನ್ನು ಪ್ರತಿನಿಧಿಸುವ ಹೆಣ್ಣಿನ ವ್ಯಕ್ತಿತ್ವವನ್ನು ಹಿಡಿದಿಡಲಾಗಿದೆ. ಕಾಯಕಜೀವಿಗಳು ಈ ಶಬ್ದಜಾಲಗಳಿಗೆ ಸಿಲುಕಿ ಬಳಲಬಾರದು. ವೇದ, ಶಾಸ್ತ್ರ ಪುರಾಣ, ಆಗಮಗಳಿಗೆ ಮೋಹಗೊಂಡು ತಮ್ಮತನವನ್ನು ಕಳೆದುಕೊಳ್ಳಬಾರದು ಎಂಬುದು ಆದಯ್ಯನವರ ಆಶಯವಾಗಿದೆ.

"ವೇದದವರನೊಲ್ಲದೆ ನಮ್ಮ ಮಾದಾರ ಚನ್ನಯ್ಯಂಗೊಲಿದ.
ಶಾಸ್ತ್ರದವರನೊಲ್ಲದೆ ಶಿವರಾತ್ರಿಯ ಸಂಕಣ್ಣಂಗೊಲಿದ.
ಆಗಮದವರನೊಲ್ಲದೆ ತೆಲುಗು ಜೊಮ್ಮಯ್ಯಂಗೊಲಿದ,
ಪುರಾಣಕರ್ಮಿಗಳೆಂಬ ವಿಶಿಷ್ಟಬ್ರಹ್ಮರನೊಲ್ಲದೆ ಉದ್ಭಟಯ್ಯಂಗೊಲಿದ
ಅಣ್ಣಾ ಕೇಳಾ ಸೋಜಿಗವ:
ದಾಸ ದುಗ್ಗಳೆಯರಿಗೊಲಿದ
ಮುಕ್ಕಣ್ಣ ಸೊಡ್ಡಳ, ಹಾರುವಣ್ಣಗಳಿಗೆ ಹೇಸಿ ಕದವನಿಕ್ಕಿಗೊಂಡನು.

-ಸೊಡ್ಡಳ ಬಾಚರಸ

ದೇವರು ಕೂಡ ದುಡಿಯುವವರ, ಹಿಂದುಳಿದವರ, ಅಸ್ಪೃಶ್ಯರ ಮತ್ತು ಮಹಿಳೆಯರ ಪರವಾಗಿ ಇದ್ದಾನೆ. ದೇವರು ಯಾರನ್ನು ತಿರಸ್ಕರಿಸುವನು ಮತ್ತು ಯಾರನ್ನು ಪುರಸ್ಕರಿಸುವನು ಎಂಬುದನ್ನು ಸೊಡ್ಡಳ ಬಾಚರಸರು ಸ್ಪಷ್ಟಪಡಿಸಿದ್ದಾರೆ. ಹೀಗೆ ವಚನಕಾರರು ಶೋಷಣೆಗೊಳಗಾದ ವರ್ಗದಲ್ಲಿ ಆತ್ಮಸ್ಥೈರ್ಯ ತುಂಬುತ್ತ ಶೋಷಕವರ್ಗ ಸಿಬ್ಬಿರಗಾಗುವಂತೆ ಮಾಡಿದರು. ದುಡಿಯುವ ವರ್ಗಕ್ಕೆ ಈ ಸೋಜಿಗದ ವಿಷಯವನ್ನು ಉತ್ಸಾಹದಿಂದ ಉಸುರಿದರು.

ಈ ಚುನಾವಣೆಯಲ್ಲಿ ರಾಜ್ಯದ ಪ್ರಭಾವಿ ಸಮುದಾಯವಾದ ಲಿಂಗಾಯತರು ವೈದಿಕರ ಸಿದ್ಧಾಂತವನ್ನೇ ನಂಬಿರುವ ಬಿಜೆಪಿಯನ್ನು ಬೆಂಬಲಿಸುವ ಸೂಚನೆಗಳಿವೆ. ಈ ಹಿನ್ನೆಲೆಯಲ್ಲಿ ಲಿಂಗಾಯತರಿಗೆ ಪ್ರಮುಖರಾಗಿರುವ ಬಸವಣ್ಣ ಮತ್ತು ಇತರ ಶರಣರು ಹೇಗೆ ವೈದಿಕರನ್ನು ವಿರೋಧಿಸಿದ್ದರು ಎಂಬುದನ್ನು ತೋರಿಸುವ ಲೇಖನ ಇಲ್ಲಿದೆ.

"ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ,
ಸಕಲ ವೇದ ಶಾಸ್ತ್ರವೆಂಬ ನೇಣ ಕಟ್ಟಿ ಹಿಡಿದು ತೂಗಿ
ಜೋಗುಳವಾಡುತ್ತಾ ಇದ್ದಾಳೆ ಭ್ರಾಂತಿ ಎಂಬ ತಾಯಿ.
ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು."

-ಅಲ್ಲಮಪ್ರಭು


ಅಜ್ಞಾನವೆಂಬ ತೊಟ್ಟಿಲಲ್ಲಿ ಜ್ಞಾನವನ್ನು ಮಲಗಿಸುವುದರ ಮೂಲಕ ಅದನ್ನು ಹಾಗೇ ನಿಷ್ಕ್ರಿಯಗೊಳಿಸಿ ಇಡಲಾಗಿದೆ. ಸಕಲವೇದಶಾಸ್ತ್ರಗಳು ಈ ಅಜ್ಞಾನದ ತೊಟ್ಟಿಲನ್ನು ಗಟ್ಟಿಯಾಗಿ ಹಿಡಿದುಕೊಂಡಿವೆ. ಭ್ರಾಂತಿ ಎಂಬ ತಾಯಿ ವಾಸ್ತವವನ್ನು ಮರೆಸುವ ಜೋಗುಳವಾಡುತ್ತ ಆ ಶಿಶುರೂಪಿ ಜ್ಞಾನವನ್ನು ಮಲಗಿಸುತ್ತಲೇ ಇದ್ದಾಳೆ. ವೇದಶಾಸ್ತ್ರಗಳನ್ನು ನಿಷ್ಕ್ರಿಯ ಮಾಡುವುದರ ಮೂಲಕ ಅಜ್ಞಾನವನ್ನು ಹೋಗಲಾಡಿಸಿ ಭ್ರಾಂತಿಯಿಂದ ಹೊರಗೆ ಬಂದನಂತರವೇ ಸರ್ವಸಮತ್ವದ ನಿಜಾದ್ವೈತದಿಂದ ಕೂಡಿದ ಜ್ಞಾನವೆಂಬ ಗುಹೇಶ್ವರನ ಕಾಣಲು ಸಾಧ್ಯ ಎಂಬುದನ್ನು ಅಲ್ಲಮಪ್ರಭುಗಳು ಮಾರ್ಮಿಕವಾಗಿ ನುಡಿದಿದ್ದಾರೆ.

ಯಾರು ಹಿರಿಯರು?

ಬಸವಣ್ಣನವರ ಯಾರು ಹಿರಿಯರು ಎಂಬ ಪ್ರಶ್ನೆಯಲ್ಲಿ ಸಾಮಾಜಿಕ ನ್ಯಾಯ ಅಡಗಿದೆ. ಹೀಗೆ ಪ್ರಶ್ನಿಸುವ ಮೂಲಕ ಅವರು ವಿಶ್ವದ ಬಡವರ ಪರವಾಗಿ ಧ್ವನಿ ಎತ್ತಿದ್ದಾರೆ.

"ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?
ಹಿರಿಯತನವಾವುದೆಂದಡೆ ಗುಣಜ್ಞಾನ
ಆಚಾರಧರ್ಮ ಕೂಡಲಸಂಗನ ಶರಣರು ಸಾಧಿಸಿದ ಹಿರಿಯತನ."

-ಬಸವಣ್ಣ



ಮಾನವನು ಭೂಮಿಯ ಮೇಲೆ ಬದುಕಲು ಸಾಧ್ಯವಾಗುವಂಥ ಕೆಲಸ ಕಾರ್ಯಗಳನ್ನು ಕಾಯಕಜೀವಿಗಳು ಮಾಡುತ್ತಾರೆ. ಆದರೆ ಅವರ ಜ್ಞಾನಕ್ಕೆ ಬೆಲೆ ಸಿಗುತ್ತಿಲ್ಲ. ಜ್ಞಾನವನ್ನು ಕ್ರಿಯೆಗೆ ಇಳಿಸುವವರಿಗಿಂತ ಜ್ಞಾನದ ಕುರಿತು ಮಾತನಾಡುವವರೇ ಈ ಸಮಾಜದಲ್ಲಿ ಸಕಲ ಸೌಲಭ್ಯಗಳನ್ನು ಪಡೆಯುತ್ತಾರೆ. ಸೂಕ್ಷ್ಮಮತಿಗಳಾದ ಬಸವಣ್ಣನವರು ಈ ಬೌದ್ಧಿಕ ಮತ್ತು ದೈಹಿಕ ತಾರತಮ್ಯವನ್ನು ಗಮನಿಸಿದರು. ಬೀದಿಯಲ್ಲಿ ಅದ್ಭುತವಾಗಿ ನರ್ತಿಸುತ್ತ ಜನಮನವನ್ನು ಸೂರೆಗೊಳ್ಳುವ ನರ್ತಕಿ, ಬಾಣವನ್ನು ಪ್ರಯೋಗಿಸುವ ಗುರಿಕಾರ, ವಾಕ್ಚಾತುರ್ಯದಿಂದ ಜನರನ್ನು ನಗೆಗಡಲಲ್ಲಿ ಮುಳುಗಿಸುವ ಹಾಸ್ಯಗಾರ ಮತ್ತು ದೈಹಿಕ ಕಸರತ್ತಿನೊಂದಿಗೆ ಜಾಣ್ಮೆಯನ್ನು ಪ್ರದರ್ಶಿಸುತ್ತ ಬದುಕಿನ ಸಮತೋಲನ ತತ್ತ್ವವನ್ನು ಸಾರುವ ಡೊಂಬ ಅದು ಹೇಗೆ ಕಿರಿಯರಾಗುತ್ತಾರೆ ಎಂಬುದು ಬಸವಣ್ಣನವರ ಸವಾಲಾಗಿದೆ.

ವೇದಾಗಮಗಳನ್ನು ಓದಿದವರು ಅದು ಹೇಗೆ ದೊಡ್ಡವರಾಗುತ್ತಾರೆ? ಕವಿಗಳು, ಕಾವ್ಯವನ್ನು ರಾಗಬದ್ಧವಾಗಿ ಓದುವ ಗಮಕಿಗಳು, ವ್ಯಾಖ್ಯಾನಕಾರರು ಮತ್ತು ವಾಕ್ಪಟುಗಳು ಅದು ಹೇಗೆ ದೊಡ್ಡವರಾಗುತ್ತಾರೆ? ಬದುಕುವ ಕಲೆಯನ್ನು ಕಲಿತ ಡೊಂಬರು ಮುಂತಾದವರು ಅದು ಹೇಗೆ ಸಣ್ಣವರಾಗುತ್ತಾರೆ? ಎಂಬವು ಬಸವಣ್ಣನವರು ಸಮಾಜದ ಮುಂದೆ ಇಟ್ಟ ಪ್ರಶ್ನೆಗಳಾಗಿವೆ. ಸಾತ್ವಿ... ಗುಣಜ್ಞಾನದೊಂದಿಗೆ ಶರಣರು ಆಚಾರಧರ್ಮದ ಸಾಧನೆ ಮಾಡಿದ್ದಾರೆ ಎಂದು ಬಸವಣ್ಣನವರು ಹೆಮ್ಮೆಯಿಂದ ಹೇಳುತ್ತಾರೆ.

ಅಹಿಂಸಾ ಸಮಾಜ

ಬಸವಣ್ಣನವರು ಎಲ್ಲ ಪ್ರಕಾರದ ಕಾಯಕಜೀವಿಗಳ ಜೀವನಾನುಭವದಿಂದ ಹೊಸ ಸಮತಾ ಸಿದ್ಧಾಂತವನ್ನು ರೂಪಿಸಿದರು. ಕೆಳಜಾತಿ ಮತ್ತು ಕೆಳವರ್ಗಗಳ ಬದುಕು ಅಹಿಂಸಾ ಪ್ರಧಾನವಾಗಿದೆ. ಆದರೆ ವೈದಿಕಶಾಹಿಯ ವರ್ಣಭೇದ ವರ್ಗಭೇದ ಮತ್ತು ಲಿಂಗಭೇದ ವ್ಯವಸ್ಥೆ ಹಿಂಸಾ ಪ್ರಧಾನ ಸಮಾಜವನ್ನು ರೂಪಿಸಿದೆ. ಇಂಥ ಕ್ರೂರ ವೈದಿಕ ಹಿಂಸಾ ವ್ಯವಸ್ಥೆಯನ್ನು ಕೊನೆಗಾಣಿಸುವುದರ ಬಗ್ಗೆ ಬಸವಣ್ಣನವರು ಚಿಂತಿಸಿದರು. ಎಲ್ಲ ಜಾತಿಗಳಲ್ಲಿ ಹರಿದು ಹಂಚಿಹೋಗಿರುವ ಬಡವರನ್ನು ಒಂದಾಗಿಸಿ ಶರಣಸಂಕುಲವೆಂಬ ಜಾತಿ ಮತ್ತು ವರ್ಗರಹಿತ ಸಮಾಜವನ್ನು ನಿರ್ಮಿಸುವುದರ ಮೂಲಕ ಸರ್ವವಿಧದ ಶೋಷಣೆಗಳಿಂದ ಕೂಡಿದ ಹಿಂಸಾ ವ್ಯವಸ್ಥೆಯನ್ನು ಕೊನೆಗಾಣಿಸುವುದೇ ಬಸವಣ್ಣನವರ ಪರಮಗುರಿಯಾಗಿತ್ತು.

"ಭಕ್ತಿ ಇಲ್ಲದ ಬಡವ ನಾನಯ್ಯಾ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ
ಚೆನ್ನಯ್ಯನ ಮನೆಯಲ್ಲೂ ಬೇಡಿದೆ
ದಾಸಯ್ಯನ ಮನೆಯಲ್ಲೂ ಬೇಡಿದೆ
ಎಲ್ಲ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ."

-ಬಸವಣ್ಣ

ಬಸವಣ್ಣನವರು ಇಂಥ ಭಕ್ತಿಯ ಕುರಿತು ಈ ವಚನದಲ್ಲಿ ತಿಳಿಸುತ್ತಾರೆ. ಬಸವಣ್ಣನವರು ಎಲ್ಲ ಸ್ತರದ ಜನಸಮುದಾಯಗಳ ಅನುಭವ ಮತ್ತು ಸಂಸ್ಕಾರಗಳಿಗೆ ಭಕ್ತಿ ಎಂದು ಕರೆಯುತ್ತಾರೆ. ಎಲ್ಲರ ಅನುಭವ ಮತ್ತು ಸಂಸ್ಕಾರಗಳನ್ನು ತಮ್ಮದಾಗಿಸಿಕೊಳ್ಳುವುದರ ಮೂಲಕ ಮಹಾನುಭಾವಿಯಾಗುತ್ತಾರೆ. ಹೀಗಾಗಿ ಅವರಿಗೆ ಜಗತ್ತಿನ ಎಲ್ಲ ರಹಸ್ಯಗಳು ಗೋಚರಿಸತೊಡಗುತ್ತವೆ. ಎಲ್ಲರ ಭಕ್ತಿಭಿಕ್ಷೆಯಿಂದ ಅವರ ಅನುಭವದ ಪಾತ್ರೆ ತುಂಬಿದೆ. ಅಂತೆಯೆ ಅವರಿಗೆ ಮಾನವನನ್ನು ಎಲ್ಲ ರೀತಿಯ ಬಂಧನಗಳಿಂದ ವಿಮೋಚನೆಗೊಳಿಸುವ ಮಾರ್ಗವನ್ನು ಕಂಡುಹಿಡಿಯಲು ಸಾಧ್ಯವಾಯಿತು. ಮೇಲ್ಜಾತಿಯವರ ಪುಸ್ತಕ ಜ್ಞಾನ ಮತ್ತು ಕೆಳಜಾತಿಗಳವರ ಅನುಭವಾಮೃತದಿಂದ ಅವರು ಸತ್ಯ ಮತ್ತು ಅಸತ್ಯದ ಅಂತರವನ್ನು ಕಂಡುಕೊಂಡರು. ನ್ಯಾಯ ಮತ್ತು ಅನ್ಯಾಯದ ರೀತಿಗಳನ್ನು ಗುರುತಿಸಿದರು. ಸುಲಿಗೆಯ ಮೂಲವನ್ನು ಅರಿತರು. ಹೀಗಾಗಿ ಜಾತಿ, ಮತ, ಪಂಥ, ವರ್ಗ, ವರ್ಣ, ಲಿಂಗ ಮುಂತಾದ ಭೇದಗಳಿಂದ ಮಾನವಕುಲವನ್ನು ಮೇಲಕ್ಕೆತ್ತುವ ಸಿದ್ಧಾಂತವನ್ನು ರೂಪಿಸಲು ಅವರಿಗೆ ಸಾಧ್ಯವಾಯಿತು. ಮನುಷ್ಯರನ್ನು ಮೂಢನಂಬಿಕೆಯ ಬಲೆಯಲ್ಲಿ ಸಿಲುಕಿಸುವುದರ ಮೂಲಕ ಅವರೆಂದೂ ಸ್ವತಂತ್ರವಾಗಿ ಚಿಂತನೆ ಮಾಡದ ಹಾಗೆ ನೋಡಿಕೊಳ್ಳುವ ಕರ್ಮಸಿದ್ಧಾಂತವನ್ನು ಆಮೂಲಾಗ್ರವಾಗಿ ವಿರೋಧಿಸುವ ಶಕ್ತಿಯನ್ನು ಪಡೆಯಲು ಸಾಧ್ಯವಾಯಿತು.

ಎಲ್ಲಿಯವರೆಗೆ ನಾವು ಕಾಯಕಜೀವಿಗಳ ಅನುಭವಕ್ಕೆ ಬೆಲೆ ಕೊಡುವುದಿಲ್ಲವೋ ಅಲ್ಲಿಯವರೆಗೆ ನಾಗರಿಕ ಸಮಾಜವನ್ನು ನಿರ್ಮಿಸಲು ಸಾಧ್ಯವಿಲ್ಲ ಎಂಬುದನ್ನು ಭಕ್ತಿಯ ಪರಿಕಲ್ಪನೆಯ ಮೂಲಕ ತೋರಿಸಿಕೊಟ್ಟರು. ಭಕ್ತಿ ಎಂಬ ಇಂಥ ಕ್ರಾಂತಿಕಾರಿ ಮಾನವೀಯ ಪ್ರಜ್ಞೆ ಇಲ್ಲದವನೇ ನಿಜವಾದ ಬಡವ ಎಂಬುದನ್ನು ಸೂಚಿಸಿದರು. ವೈದಿಕರ ಭಕ್ತಿ ಗುಲಾಮರನ್ನು ಸೃಷ್ಟಿಸುವಂಥದ್ದು. ಆದರೆ ಶರಣರ ಭಕ್ತಿ ಮಾನವರನ್ನು ಎಲ್ಲ ತೆರನಾದ ಗುಲಾಮಗಿರಿಯಿಂದ ವಿಮೋಚನೆಗೊಳಿಸುವಂಥದ್ದು.

ಹೀಗೆ ಬಸವಣ್ಣನವರು ಎಲ್ಲ ಜಾತಿ ಜನಾಂಗಗಳ ಅನುಭವವನ್ನು ತಮ್ಮದಾಗಿಸಿಕೊಂಡರು. ಅವರಲ್ಲೇ ಒಬ್ಬರಾಗಿ ಸಮಾಜವನ್ನು ನೋಡಿದರು. ಅಸಮಾನತೆಯ ಸಮಾಜ ಅಸಹನೀಯವೆನಿಸಿತು. ಇಂಥ ಕುರೂಪ ಸಮಾಜವನ್ನು ಸುಂದರ ಸಮಾಜವನ್ನಾಗಿಸಲು ಪಣ ತೊಟ್ಟರು. ಕೆಳಜಾತಿಗಳಿಂದ ಬಂದ ಸತ್ಪುರುಷರಾದ ಡೋಹರ ಕಕ್ಕಯ್ಯ ಮಾದಾರ ಚೆನ್ನಯ್ಯ ದಾಸಯ್ಯ ಮುಂತಾದವರ ಅನುಭವ ಬಸವಣ್ಣನವರಿಗೆ ಶ್ರೀರಕ್ಷೆಯಾಯಿತು. ಅವರ ಅನುಭವದ ಪಾತ್ರೆಯನ್ನು ತುಂಬಿಸಿದವರೇ ಇಂಥ ಕಾಯಕಜೀವಿಗಳು. ಈ ಲಕ್ಷಾಂತರ ಜನರ ಅನುಭವದಿಂದ ಒಂದು ನಾಗರಿಕತೆ ನಿರ್ಮಾಣವಾಗುವುದು. ಅವರೆಲ್ಲರ ಅನುಭವದ ಸಾರವಾದ ಅನುಭಾವದಿಂದ ಮಾನವೀಯ ಸಂಸ್ಕೃತಿ ಅರಳುವುದು. ಹೀಗೆ ನಿರ್ಮಾಣವಾದ ನಾಗರಿಕತೆಯಲ್ಲಿ ಅರಳಿದ ಸಂಸ್ಕೃತಿಯಲ್ಲಿ ವಿಶ್ವಮಾನವನ ಉದಯವಾಗುವುದು.

ಕರ್ಮಸಿದ್ಧಾಂತಕ್ಕೆ ವಿರೋಧ

ಶೋಷಣೆಯ ಮೂಲವಾದ ಕರ್ಮಸಿದ್ಧಾಂತವನ್ನು ಬಸವಣ್ಣನವರು ಕಾಯಕಸಿದ್ಧಾಂತದ ಮೂಲಕ ವಿರೋಧಿಸಿದರು. ಕರ್ಮ ಎನ್ನುವುದು ನಮ್ಮ ಮನದೊಳಗಿನ ಕತ್ತಲೆ. ಅದನ್ನು ಇಷ್ಟಲಿಂಗವೆಂಬ ನಮ್ಮೊಳಗಿನ ಅರಿವಿನ ಬೆಳಕಿನ ಮೂಲಕ ಇಲ್ಲವಾಗಿಸಬೇಕು.

"ಕಬ್ಬುನ ಪರುಷವೇಧಿಯಾದಡೇನು,
ಕಬ್ಬುನ ಹೊನ್ನಾಗದಡಾ ಪರುಷವದೇಕೊ?
ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ?
ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ
ಕರ್ಮ ಹರಿಯದೊಡಾ ಪೂಜೆಯದೇಕೊ? .

-ಬಸವಣ್ಣ

ಸಂಚಿತಕರ್ಮ, ಪ್ರಾರಬ್ಧಕರ್ಮ ಮತ್ತು ಆಗಾಮಿಕರ್ಮ ಮು ಕರ್ಮಗಳಲ್ಲಿ ಮೂರು ಪ್ರಕಾರಗಳಿವೆ. ಜನ್ಮಾಂತರಗಳಿಂದ ಸಂಗ್ರಹವಾಗುತ್ತ ಬಂದಿರುವ ಕರ್ಮಕ್ಕೆ ಸಂಚಿತಕರ್ಮ ಎಂದು ಕರೆಯುವರು. ಹಿಂದಿನ ದಲ್ಲಿ ಮಾಡಿದ ಪಾಪಕರ್ಮಕ್ಕೆ ಪ್ರಾರಬ್ಧಕರ್ಮ ಎನ್ನುವರು. ಈ ಜನ್ಮದಲ್ಲಿ ಮಾಡುವ ಪಾಪಕ್ಕೆ ಆಗಾಮಿಕರ್ಮ ದು ಹೇಳುವರು. ಭಾರತೀಯರ ಮನಸ್ಸಿನಲ್ಲಿ ಈ ರ್ಮಸಿದ್ಧಾಂತ ಆಳವಾಗಿ ಬೇರೂರಿದೆ. ಸಾಮಾಜಿಕ ನೋವಿಜ್ಞಾನಕ್ಕೆ ಇದೊಂದು ದೊಡ್ಡ ಸವಾಲಾಗಿದೆ. ನಮ್ಮ ತಮ್ಮ ಮೇಲೆ ಆಗುವ ಅನ್ಯಾಯಕ್ಕೆ ಕೂಡ 'ಇದೆಲ್ಲ ನ್ಮ ಹಣೆಬರಹ' ಎಂದು ಹೇಳುತ್ತ ನ್ಯಾಯಕ್ಕಾಗಿ ಹೋರಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತಾರೆ. ಮನುಷ್ಯನನ್ನು ನಸಿಕವಾಗಿ ದುರ್ಬಲನನ್ನಾಗಿಸಿ ಆತನ ಕ್ರಿಯಾಶಕ್ತಿಯನ್ನೇ ಶಮಾಡುವಂಥ ಕರ್ಮಸಿದ್ಧಾಂತವನ್ನು ಮಹಾನುಭಾವಿ ವಣ್ಣನವರು ನಿಷ್ಕ್ರಿಯಗೊಳಿಸಲು ಪಣತೊಟ್ಟು ಇಂಥ ನಗಳನ್ನು ಬರೆದಿದ್ದಾರೆ.

ಸರ್ವಸಮತ್ವವನ್ನು ಸಾರುವ ಇಷ್ಟಲಿಂಗದಲ್ಲಿ ಕರ್ಮವನ್ನು ಗೊಳಿಸುವ ಶಕ್ತಿ ಇದೆ. ಇಷ್ಟಲಿಂಗ ಪೂಜಕರು ರ್ಮಸಿದ್ಧಾಂತವನ್ನು ನಂಬಬಾರದು. ಮಾನವಕಲ್ಯಾಣದ ಕ್ಕೆ ಬದ್ಧರಾದವರಿಗೆ ಕರ್ಮಸಿದ್ಧಾಂತ ಬಾಧಿಸಲು ಧ್ಯವಿಲ್ಲ. ದುರ್ಬಲ ಮನಸ್ಸಿನವರ ಮೇಲೆ ಮಾತ್ರ ರ್ಮಸಿದ್ಧಾಂತ ಸವಾರಿ ಮಾಡುವುದು. ಒಂದುವೇಳೆ ಲಿಂಗ ಪೂಜೆ ಮಾಡಿಯೂ ಕರ್ಮಸಿದ್ಧಾಂತದ ಮೇಲೆ ಬಿಕೆ ಇಟ್ಟರೆ ಪೂಜೆ ಮಾಡಿ ಉಪಯೋಗವಿಲ್ಲ. ಏಕೆಂದರೆ ಲಿಂಗತತ್ತ್ವ ಮತ್ತು ಕರ್ಮಸಿದ್ಧಾಂತ ತದ್ವಿರುದ್ಧವಾಗಿವೆ. ರ್ಮಸಿದ್ಧಾಂತ ಕತ್ತಲೆಯಾದರೆ, ಇಷ್ಟಲಿಂಗ ಬೆಳಕು.

ಇಷ್ಟಲಿಂಗವನ್ನು ಕೊಡುವುದರ ಮೂಲಕ ವಣ್ಣನವರು ಶೋಷಣೆಯ ಕೇಂದ್ರವಾಗಿರುವ ಾಲಯಗಳಿಗೆ ಜನ ಹೋಗದಂತೆ ಮಾಡಿದರು. ದೇವರು ತ್ತು ಭಕ್ತರ ಮಧ್ಯೆ ಮಧ್ಯವರ್ತಿಗಳು ಇಲ್ಲದಂತೆ ಮಾಡಿದರು. ಜನ ಆರ್ಥಿಕ ಮತ್ತು ಮಾನಸಿಕ ಶೋಷಣೆಯಿಂದ ಮುಕ್ತರಾದರು. ದೇವರು ತಮ್ಮೊಳಗೇ ಇರುವುದರಿಂದ ರಿಗೆ ಎಲ್ಲ ಕಾಲವೂ ಒಳ್ಳೆಯ ಕಾಲವೇ ಆಯಿತು. ದಿನಗಳೂ ಒಳ್ಳೆಯ ದಿನಗಳೇ ಆದವು. ತಮ್ಮೊಳಗಿನ ವರು 'ಕರ್ಮಹರ' ಎಂಬ ನಂಬಿಕೆ ಅವರಲ್ಲಿ ಮೂಡಿತು. ಕಾಯಕಗಳೂ ದೇವರ ದೃಷ್ಟಿಯಲ್ಲಿ ಸಮ ಎಂಬ ವು ಮೂಡಿದಾಗ ಎಲ್ಲ ಕಾಯಕಜೀವಿಗಳು ಸಮಾನರು ಬ ಸತ್ಯವನ್ನು ಸಾರಿದರು. ಹೀಗೆ ಇಷ್ಟಲಿಂಗವು ಎಲ್ಲ ಯಕಜೀವಿಗಳನ್ನು ಒಂದುಗೂಡಿಸಿ ಸಮುದಾಯದ ಮನ್ನು ನೀಡಿತು. ವೈದಿಕರು ಸೃಷ್ಟಿಸಿದ ಎಲ್ಲ ರೀತಿಯ ರ್ಮಿಕ ಭಯ, ಮೂಢನಂಬಿಕೆ ಮತ್ತು ಮೇಲುಕೀಳು ನಗಳಿಂದ ಮುಕ್ತನಾಗುವ ಮೂಲಕ 'ಭಯವೇ ಧರ್ಮದ ಲ' ಎಂಬುದನ್ನು ಅಲ್ಲಗಳೆದು 'ದಯವೇ ಧರ್ಮದ ಲ' ಎಂಬ ಲಿಂಗತತ್ತ್ವವನ್ನು ಸಾರಿದರು. ಬದುಕಿಗೆ ದ ಈ ಶರಣರು ಸಕಲ ಜೀವಾತ್ಮರಿಗೆ ಲೇಸನೇ ಯಸುತ್ತ ಬದುಕಿ ಮಾನವಕುಲಕ್ಕೇ ಮಾರ್ಗದರ್ಶಿ ದರು.

ಕರ್ಮ ಎಂದರೆ ಕೆಲಸ. ಕರ್ಮ ಎಂದರೆ ಒಬ್ಬ ನು ಸುಖ ಮತ್ತು ದುಃಖಕ್ಕೆ ಕಾರಣವಾದ ಪೂರ್ವಜನ್ಮದ ಹೀಗೆ ಕರ್ಮವನ್ನು ಅರ್ಥೈಸುತ್ತಾರೆ. ಆದರೆ ಮನದಲ್ಲಿ 'ಕರ್ಮ' ಎಂಥಕೂಡಲೇ ಪೂರ್ವಜನ್ಮದ ಕೃತ್ಯ ಎಂಬ ವಿಚಾರವೇ ಹೊಳೆಯುತ್ತದೆ. ಜನ್ಮ ದ ತಿಥಿ. ವಾರ, ನಕ್ಷತ್ರ ಮುಂತಾದ ವಿವರಗಳನ್ನೂ ನ ಗ್ರಹಗಳ ಸ್ಥಿತಿಯನ್ನು (ಯಾವುದೇ ವೈಜ್ಞಾನಿಕ ರಗಳಿಲ್ಲದೆ) ತಿಳಿಸುವುದೇ ಜಾತಕ. ಜಾತಕ ಯುವುದೆಂದರೆ, 12 ಮನೆಗಳ ರೇಖಾಕೃತಿಯಿಂದ ಕುಂಡಲಿಯನ್ನು ತಯಾರಿಸುವುದು. ಕರ್ಮಸಿದ್ಧಾಂತವನ್ನು ಬುವವರ ಜನ್ಮಕುಂಡಲಿಯನ್ನು ವೈದಿಕರು ಜಾಲಾಡಿಸುತ್ತ ನ ಕರ್ಮ ಪರಿಹಾರ ಮಾಡುವ ಭರವಸೆ ನೀಡುತ್ತಾರೆ. ಗಳು ಅವರ ಪರವಾಗಿ ಇರುವಂತೆ ನೋಡಿಕೊಳ್ಳುವು ತಿಳಿಸುತ್ತಾರೆ. ಕರ್ಮ ಪರಿಹಾರಕ್ಕಾಗಿ ಯಜ್ಞ, ಯಾಗ, ಮತ್ತು ದಾನ ಮುಂತಾದ ಸಲಹೆಗಳನ್ನು ನೀಡುತ್ತಾರೆ. ಜನರನ್ನು ಸುಲಿದು ಬದುಕುವಂಥವರನ್ನೂ ಯುತ್ತಾರೆ. ಅಂಥವರನ್ನು ಪಾಪದಿಂದ ವಿಮೋಚನೆ ಳಿಸುವ ನಾಟಕವೇ ಇವರ ಉದ್ಯೋಗವಾಗಿರುತ್ತದೆ. ಲಿಂಗಾಯತ ಧರ್ಮ ನಿರ್ಜಾತಿ ಧರ್ಮವಾಗಿರುವು ದ ಜಾತಿ ಉಪಜಾತಿ ಭ್ರಮೆಯಿಂದ ಹೊರಬರುವುದು ವಾಗಿದೆ. ಇಲ್ಲದಿದ್ದರೆ ವೈದಿಕದ ಎಲ್ಲ ಅನಿಷ್ಟಗಳ ರೂಪವಾದ ಬ್ರಾಹ್ಮಣಿಕೆಗೆ ಬಲಿಯಾಗುತ್ತಲೇ ಬೇಕಾಗುತ್ತದೆ.

"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ
ಕುಯಿವೆ ನೋಡಯ್ಯಾ,
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ"

-ಬಸವಣ್ಣ

● ರಂಜಾನ್ ದರ್ಗಾ

ನಿನ್ನಂಥೋಳು ಬಿಜೆಪಿಲಿ ಮೂರು ದಿನ ಇರಕ್ಕಾಗಲ್ಲ

ಥುತ್ತೇರಿ

► ಯಾಹೂ

ಜ್ಞಾನಪೀಠದಿಂದ ಕೆಳಗಿಳಿದು ಕಾಂಗ್ರೆಸ್ ಪಾರ್ಟಿಯ ಪರ ಮತ ಕೇಳಿದ ಗಿರೀಶ್ ಕಾರ್ನಾಡ್ ಮತ್ತು ಅನಂತಮೂರ್ತಿಯವರ ಕ್ರಮದಿಂದ ಬೆಚ್ಚಿ ಬಿದ್ದಿರುವ ಚೆಡ್ಡಿ ಪಡೆ ತಿಮಿರಿತ್ತಿದಂತೆ ಸಿಕ್ಕಸಿಕ್ಕಲ್ಲಿ ಕೆರೆದುಕೊಂಡು ರಣಗಾಯ ಮಾಡಿಕೊಂಡವಂತಲ್ಲಾ, ತೀರಾ ತಲೆ ಕೆಟ್ಟಂತಾದ ಹಲ್ಲುಬೀರನೊಬ್ಬ "ಈ ಕೂಡಲೇ ನಮ್ಮ ಶಾಲಾ ಕಾಲೇಜು ಮತ್ತು ಸರ್ಕಲ್ಲಿನಲ್ಲಿರುವ ಸದರಿ ಜ್ಞಾನಪೀಠಸ್ಥರ ಫೋಟೋ ತೆಗೆದು ಆ ಜಾಗಕ್ಕೆ ನಮ್ಮ ಭಾವನವರಾದ ಭೈರಪ್ಪ ಸೋದರ ಮಾವನಾದ ಚಿದಾನಂದಮೂರ್ತಿ, ನನ್ನ ಮದುವೆ ಮೀಡಿಯೇಟರ್ ಆದ ಸುಮತೀಂದ್ರ ನಾಡಿಗನ ಫೋಟೊ ಹಾಕಬೇಕಾಗುತ್ತದೆ" ಎಂದನಂತಲ್ಲಾ. ಆ ಕೂಡಲೇ ಚೆಡ್ಡಿಗೆ ಹುಟ್ಟಿದ ಚೆಡ್ಡಿಗಳ್ಯಾರೋ ಕಾರ್ನಾಡ್ ಮತ್ತು ಅನಂತಮೂರ್ತಿ ಚಿತ್ರಗಳನ್ನು ಹರಿದು ಬಿಸಾಡಿದವಂತಲ್ಲಾ. ತನ್ನ ಮಾತು ಆಜ್ಞೆ ರೂಪ ಪಡೆದುಕೊಂಡು ಕೃತಿಗಿಳಿದುದ್ದಕ್ಕೆ ಕೃತಾರ್ಥಗೊಂಡ ಹಲ್ಲುಬೀರ "ಇದು ನಮ್ಮ ಮೊದಲ ಎಚ್ಚರಿಕೆ. ಎರಡನೇ ಕ್ರಿಯೆ ಎಂದರೆ ಈ ಜ್ಞಾನಪೀಠರು ಬರೆದಿರುವ ಪುಸ್ತಕಗಳ ಮೇಲಿನ ಚಿತ್ರ ಹರಿದು ಅಲ್ಲಿಗೆ ನಮ್ಮ ಬಿಜೆಪಿ ಪಾರ್ಟಿಯ ಸಾಹಿತಿಗಳ ಚಿತ್ರ ಅಂಟಿಸಬೇಕಾಗುತ್ತದೆ. ಹುಷಾರು" ಎಂದನಂತಲ್ಲಾ, ಥೂತ್ತೇರಿ!

* * * *

ನಮ್ಮ ಜ್ಞಾನಪೀಠಿಗಳು ನಿಜವಾದ ಬಂಡಾಯಗಾರರಂತೆ ಬೀದಿಗಿಳಿದು ಮೋದಿ ಮೂತಿಗೆ ಮಂಗಳಾರತಿ ಮಾಡುತ್ತಿರುವಾಗ ಬಂಡಾಯ ಸಂಘಟನೆ ಮಾಡಿ, ಸಾಹಿತ್ಯ ರಚಿಸಿ, ಸಮ್ಮೇಳನಗಳನ್ನು ಮಾಡಿ ಡಂಬಾಯದ ಠರಾವು ಪಾಸು ಮಾಡುತ್ತಿದ್ದ ಸಾಹಿತಿಗಳು ಪತ್ತೆಯಿಲ್ಲವಂತಲ್ಲಾ. ಇನ್ನು ಬಂಡಾಯದ ಮಾದರಿಗಳ ಮಾರ್ಗದರ್ಶಕರಾದ ರಬಗೂರು ಮಾರಚಂದ್ರಪ್ಪನವರು ಬೀದಿಗಿಳಿದ ಜ್ಞಾನಪೀಠಿಗಳಿಗೆ ತಿಳಿವಳಿಕೆ ಹೇಳುತ್ತಾ, "ನಿಮ್ಮ ಜ್ಞಾನ ಚುನಾವಣೆಯಲ್ಲಿ ಮತ ಕೇಳುವಷ್ಟಕ್ಕೆ ಸೀಮಿತವಾಗಬಾರದು. ಅದರಾಚೆಗೂ ಕ್ರಿಯೆಯಾಗಿ ಸಕ್ರಿಯವಾಗಿ ಸೈದ್ಧಾಂತಿಕವಾಗಿ ರಚನಾತ್ಮಕವಾಗಿ ಒಟ್ಟಾರೆ ಕರುಳಿನ ರಾಜಕೀಯವಾಗಿ ಪ್ರಕಟಗೊಂಡು ನೀವು ಗಳಿಸಿದ ವಿದ್ವತ್ತು ಕೂಡ ಸಾಕಾರಗೊಳ್ಳುವಂತಾಗಬೇಕು. ಈ ಸಂದರ್ಭದಲ್ಲಿ ನೀವು ಕಾಂಗ್ರೆಸ್ ವಕ್ತಾರರಂತೆ ವರ್ತಿಸದೆ ನಮ್ಮ ನಡೆನುಡಿಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕಾಂಗ್ರೆಸ್ ಸರಕಾರದಲ್ಲಿ ಸ್ಥಾನಮಾನಕ್ಕಾಗಿ ನಿರಂತರ ಕ್ರಿಯಾರೂಪದ ಚಟುವಟಿಕೆಯಲ್ಲಿದ್ದರೂ ನಾನು ಕಾಂಗ್ರೆಸ್ಸಿಗ ನಾಗಿ ಗುರುತಿಸಿಕೊಂಡಿಲ್ಲ. ನೀವೊಂದಿಷ್ಟು ಯಡವಟ್ಟು ಮಾಡಿಕೊಂಡರೂ ಕೂಡ ಭೈರಪ್ಪ, ಸುಮತೀಂದ್ರ, ಚಿದಾನಂದಮೂರ್ತಿ ತರಹ ಆಗುವ ಅಪಾಯವಿರು ವುದರಿಂದ ಎಚ್ಚರಿಕೆಯಾಗಿ ಪ್ರಚಾರ ಮಾಡಿ" ಎಂಬಂತೆ ಸಲಹೆ ಕೊಟ್ಟು ಕಾಂಗ್ರೆ ಮಿನಿಸ್ಟರ ಮನೆ ಕಡೆ ಹೊರಟ ರಂತಲ್ಲಾ, ಥೂತ್ತೇರಿ!

* * * *

ಮಾಲು ಸಮೇತ ಸಿಕ್ಕಿ ಬಿದ್ದ ಕಳ್ಳರ ಕೈಗೆ ಸ್ಲೇಟು ಕೊಟ್ಟು ಫೋಟೊ ಹೊಡೆಸಿ, ಪತ್ರಿಕೆಗೆ ಕೊಟ್ಟಂತೆ ಕಾಣುತ್ತಿದ್ದ ನಾಲ್ವರು ಬ್ರಾಹ್ಮಣರನ್ನು ನೋಡಿದ ಕನ್ನಡದ ಸಾಂಸ್ಕೃತಿಕ ಲೋಕ ಅಷ್ಟೇನು ಅಚ್ಚರಿಗೊಳ್ಳದೆ ಲೊಚಗರಿಯಿತಂತಲ್ಲಾ. ನಂದಿ ಮಾರ್ಕಿನ ಪತ್ರಿಕೆಯಲ್ಲಿ ಸಾಲಾಗಿ ನಿಂತವರಾರೆಂದರೆ ಸಿವಿಲ್ ಡ್ರೆಸ್ಸಿನಲ್ಲಿದ್ದ ಪುರೋಹಿತರಂತೆ ಕಾಣುತ್ತಿದ್ದ ರಾಮಾ ಜೋಯಿಸ, ಆತನ ಶಿಷ್ಯನಂತೆ ಕಾಣುತ್ತಿದ್ದ ಭೈರಪ್ಪ ಮತ್ತು ಸುಮತೀಂದ್ರ ನಾಡಿಗ. ಇವರೆಲ್ಲರಿಗೂ ಪರಿಚಾರಕನಂತಿದ್ದ ವಾಮನಮೂರ್ತಿಯಾದ ಮಹಾಬಲ. ಸದರಿ ಬ್ರಾಗಳ ಕೈಲಿದ್ದುದ್ದು ಮೋದಿ ಎಂಬ ರಕ್ಕಸನ ರಕ್ತಸಿಕ್ತ ಹಾದಿಯ ಕೈಪಿಡಿಯಂತಲ್ಲಾ. ಈ ಕೈಪಿಡಿ ಬರೆದವನು ಒಂದು ಕಾಲದಲ್ಲಿ ಲಂಕೇಶರ ನಿಷ್ಠಾವಂತ ಪರಿಚಾರಕನಂತಲ್ಲಾ. ಸದರಿ ಪರಿಚಾರಕ ಲಂಕೇಶರು ಸಾಕಿದ್ದ ಶ್ವಾನಗಳ ಜೊತೆ ಸ್ಪರ್ಧೆ ನಡೆಸುತ್ತ, ಬಾಲ ಅಲ್ಲಾಡಿಸುತ್ತ ಆರ್‌ಸಿ ಬಾಟಲ್ ಓಪನ್ ಮಾಡುವುದೇನು, ಸೋಡಾ ಬೆರೆಸುವುದೇನು, ಸಿಗರೇಟಿಗೆ ಕಡ್ಡಿ ಗೀರುವುದೇನು, ಬೈಸಿಕೊಳ್ಳುವುದೇನು!... ಇಂತಹ ಯಾವ ಕ್ರಿಯೆಯನ್ನು ಅವಮಾನವಾಗಿ ಪರಿಗಣಿಸದೆ "ನಿಮ್ಮ ಕಾಲಡಿ ಕುಳಿತಿರುವುದೇ ನನ್ನ ಬದುಕಿನ ಸೌಭಾಗ್ಯ" ಎನ್ನುತ್ತಿದ್ದನಂತಲ್ಲಾ, ಈತ ಪುರೋಹಿತಶಾಹಿಗಳು "ಆ ಲಂಕೇಶ ಹೇಗಿದ್ದಾರೆ, ನೋಡಿ ಬಾ" ಎಂದು ಕಳುಹಿಸಿ ಕೊಟ್ಟಿದ್ದ ಪುರೋಹಿತರ ಪಿಂಡವೆಂಬುದು ಈಗ ಬಯಲಾಗಿದೆಯಂತಲ್ಲಾ, ಆದರೇನು ತಮ್ಮವರ ಸಂಖ್ಯೆ ಮಾಧ್ಯಮಗಳ ತುಂಬ ಮೇಳೈಸಿರುವುದರಿಂದ ತಾನು ಯಾರಿಗೂ ಅಂಜಲ್ಲ ಎನ್ನುತ್ತಿರುವ ಈ ನರಿ ಕಂಡು ಆತನ ಹೆಂಡತಿಯೇ ನಗುತ್ತಿದ್ದಾಳಂತಲ್ಲಾ, ಥೂತ್ತೇರಿ!!

* * * *

ಬಾಡೂಟದಲ್ಲಿ ಹೊಡೆದಾಟ, ಬೀಗರೂಟದಲ್ಲಿ ಮಾರಾಮಾರಿ, ಪಾರ್ಟಿ ಮೀಟಿಂಗಿನಲ್ಲಂತೂ ಒಂದೂವರೆ ಗಂಟೆ ಯುದ್ಧ... ಇದು ಮಂಡ್ಯದ ಸಂಸ್ಕೃತಿಯಾಗಿರುವಾಗ ಊರಿಗೊಬ್ಬಳೇ ಪದ್ಮಾವತಿಯಂತಿರುವ ನಮ್ಮ ರಮ್ಯ ಬಾಡು ಬಿಕ್ಕಳ ಊರ ಗಲಾಟೆಯಲ್ಲಿ ಬೆಂಡಾಗಿ ಹೋಗಿದ್ದಾಳಂತಲ್ಲಾ, ಈ ಮಾರಾಮಾರಿಗೆ ಕಾರಣ ಇನ್ನಾವುದೂ ಇಲ್ಲ, ರೋಡ್‌ಶೋನಲ್ಲಿ ರಮ್ಯಾ ಜೊತೆ ಭುಜ ತಾಕಿಸಿಕೊಂಡು ಯಾರು ಇಲ್ಲಬೇಕು ಎಂಬುದೇ ಆಗಿದೆಯಂತಲ್ಲಾ, ಇದೇ ಸಮಯಕ್ಕಾಗಿ ಕಾಯುತ್ತಿದ್ದ ಸಕಲ ಪಾರ್ಟಿಗಳ ಸಕಾಲಬಂಧುವಾದ ಶಿವರಾಮೇಗೌಡ, ರಮ್ಯಾ ಪಕ್ಕದಲ್ಲೇ ವತ್ತರಿಸಿಕೊಂಡು ನಿಂತು ಕಾಂಗ್ರೆಗಳಿಗೆ ಆಘಾತ ಮಾಡಿದ್ದಾನಂತಲ್ಲಾ, ಇವನ್ನ ನೋಡಿದ ಮಂಡ್ಯದ ಹೈದರು "ರಮ್ಯ ಈ ಮುಸುಡಿ ಜೊತೆ ತಿರುಗಿದ್ರೆ ಆದರೆ, ಇತ್ತ ಮುಂಡಾಗಿ ಬರುವ ಓಟೆಲ್ಲಾ ಅತ್ತ ಮುಂದಾಗಿ ಹೋಗುತ್ತೆ" ಎಂದು ಉದ್ಗಾರ ತೆಗೆಯುತ್ತಿವೆಯಂತಲ್ಲಾ, ಇದೇ ಸಮಯಕ್ಕೆ ಸರಿಯಾಗಿ ರಮ್ಯ "ಅಂಕಲ್, ಕಳೆದ ಬಾರಿಗಿಂತ ಈ ಬಾರಿ ಜನ ಕಡಿಮೆ ಕಾಣ್ತಾಯಿದೆ ಯಾಕೆ?" ಎಂದು ಪ್ರಶ್ನಿಸಿದಳಂತಲ್ಲಾ, ಆಗ ಶಿವರಾಮ, "ಜನಗಳು ಹಾಲು ಕರಿಯೋ ಟೈಮಿದು. ಅದ್ಕೆ ಹಾಲು ಕರೆದು ಡೈರಿಗಾಕಕ್ಕೆ ಹೋಗ್ಯವ್ರರೆ. ನಿಧಾನಕ್ಕೆ ಬರ್ತಾರೆ. ನೀವೇನು ತಲೆ ಕೆಡಿಸಿಕೋಬೇಡಿ. ಬೇಗ ಸಿಎಂಗೇಳಿ ಪೇಮೆಂಟಿಗೆ ಆರೇಂಜ್



ಮಾಡಿ" ಎಂದನಂತಲ್ಲಾ. ಆಗ ರಮ್ಯಾ "ಹಾಲನ್ನ ಲೇಡಿಸ್ ಕರೀತರೊ? ಜಂಟ್ಸು ಕರೀತರೊ?" ಎನ್ನಲಾಗಿ ಶಿವರಾಮ "ಇಬ್ರೂ ಸೇರಿಕೊಂಡು ಕರೀತರೆ" ಎಂದನಂತಲ್ಲಾ, ಥೂತ್ತೇರಿ!!

* * * *

ಒಂದು ಕಾಲದ ಕಮ್ಯುನಿಸ್ಟ್ ಪಾರ್ಟಿಯ ನಿಷ್ಠಾವಂತ ಕಾರ್ಯಕರ್ತೆ, ಹಾಗೆಯೇ ಒಂದು ಕಾಲದ ಲಂಕೇಶರ ಗೆಳತಿ, ತತ್ವನಿಷ್ಠ ಕಾಲಮಿಷ್ಟೆಯೂ, ಬರಹಗಾರ್ತಿಯೂ ಆದ ಕೂಗು ಮಾರವ್ವ ಹೋಗಿ ಹೋಗಿ ಚೆಡ್ಡಿಗಳ ಆಲಿಂಗನಕ್ಕೆ ಬಲಿಯಾದಳಂತಲ್ಲಾ. ಈ ಸಂದರ್ಭದಲ್ಲಿ ಆಕೆಯನ್ನು ಮಾತನಾಡಿಸಿ, ಶುಭಾಷಯ ಹೇಳುವುದು ಹೆಣ್ಣು ಮಕ್ಕಳ ತಂದೆಯಾದ ನಮ್ಮ ಕರ್ತವ್ಯವಲ್ಲವೆ ಅನ್ನಿಸಿದ ಕೂಡಲೇ, ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಈ ಶತಮಾನದ ಮಾದರಿ ಹೆಣ್ಣು ಎಲ್ಲೂ ನಿಲ್ಲದೆ ಜಾರುವ ಹೆಣ್ಣು..."

"ಹಲೋ ಯಾರು?"

"ನಾನು ಕಣವ್ವ ಯಾಹೂ."

"ಅಣ್ಣಾ ಹೇಗಿದ್ದೀ?"

"ಚಿನ್ನದಂತ ತಂಗಿ ಕಳಕೊಂಡ ಅಣ್ಣನಂಗಿದ್ದಿನಿ ಕಣವ್ವ."

"ಯಾಕೆ ಏನಾಗಿತ್ತು ನಿಮ್ಮ ತಂಗಿಗೆ?"

"ಏನು ಇಲ್ಲ ಕಣವ್ವ, ಚಂದವಾಗೆ ಇದ್ಲು. ಒಳ್ಳೆ ಸಿನಿಮಾ ಆಕ್ಟರ್ ತರ ಇದ್ಲು. ಅದ್ಕೆ ಹೆದ್ರಿಕಂಡು ಜಲ್ದಿ ಮದುವೆ ಮಾಡಿದ್ರೊ. ದೇವರಂತ ಗಂಡನ್ನ ಬಿಟ್ಟು ಇನ್ಯಾರನ್ನೊ ಕಟ್ಕಂಡ್ಳು. ಹೋಗ್ಲಿ ಅಂತ ಸುಮ್ಮನಾದ್ರೊ. ಈಗ ಒಂದು ಕಚ್ಚೆಹರುಕರ ಪಾರ್ಟಿ ಸೇರಿಕೊಂಡವ್ಳೆ. ಅಲ್ಲಿಗೆ ನಮ್ಮ ಭಾಗಕ್ಕೆ ಅವಳು ತೀರಿಕೊಂಡ್ಳು ಅಂತ ಯದಿಗೆ ಕಲ್ಲಾಯ್ಕಂಡಿದೀವಿ."

"ಅವ್ರುಳನ್ನ ನನಿಗೆ ಭೇಟಿ ಮಾಡಸಣ್ಣ."

"ಬ್ಯಾಡಕಣವ್ವ. ಅವ್ರುಳು ನಿನ್ನನ್ನೂ ದಾರಿ ತಪ್ಪುಸ್ತಳೆ."

"ನಾನೂ ದಾರಿ ತಪ್ಪಿದ್ದೆ ಕಣಣ್ಣ. ಈಗ ಸರಿಯಾದ ದಾರಿಲಿದ್ದಿನಿ. ಅದಕ್ಕೆ ಅವ್ರುಳನ್ನ ಕರಕಂಡೋಗಿ ಇಟ್ಗಗತಿನಿ."

"ಅವ್ರುಳು ಇಟ್ಗಗಂಡ್ರೆ ಇರಲ್ಲ, ಬುಟ್ರೆ ಯತ್ತಗಾರ ಹೋಯ್ತಳೆ. ಒಂಥರ ನಿನ್ನಂಗೆಯ ಕಣವ್ವ. ಈಗ ಎಲ್ಲಿದ್ದಿಯವ್ವ ನೀನು?"

"ಯಡಿಯೂರಪ್ಪನತ್ರ ಇದ್ದಿನಿ."

"ಶೋಭ ಇಲ್ಲವ ಅಲ್ಲಿ?"

"ಅವರು ಚಿಕ್ಕಮಗಳೂರಲ್ಲಿ ಕ್ಯಾನ್‌ವಾಸ್ ಮಾಡ್ತಾ ಅವ್ರುರೆ."

"ಸರಿ, ನೀನು ಯಡಿಯೂರಪ್ಪನತ್ರಕೆ ಯಾಕೋದವ್ವ?"

"ಅವ್ರುರು ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡ್ತರೆ ಅದ್ಕೆ."

"ಅದ್ರೆ ಹೆಂಡ್ತಿಗೇ ರಕ್ಷಣೆ ಕೊಡಲಿಲ್ಲವಲ್ಲ ಹೇಳು."

"ಯಡಿಯೂರಪ್ಪನ ಬಗ್ಗೆ ನಿನಗೆ ಸರಿಯಾಗಿ ಗೊತ್ತಿಲ್ಲ. ಅವ್ರುರ ನಂಬಿದೋರನ್ನ ಯವಾರನ್ನ ಕೈಬಿಟ್ಟಿಲ್ಲ. ಕಂಟ್ರಾಕ್ಟರ್‌ಗಳೆಲ್ಲಾ ಕೋಟ್ಯಾಧಿಪತಿಗಳಾಗಿದ್ದರೆ. ಬಿಸಿನೆಸ್‌ನೆಲ್ಲಾ ಬಂಗ್ಲೆ ಒಳಗಿದಾರೆ, ಗೊತ್ತಾ?"

"ಓಹೊಹೊ, ಅದಕ್ಕೆ ಅಲ್ಲಿಗೋದಾ ನೀನು?"

"ಅದಕ್ಕಲ್ಲ. ನನಿಗೆ ಅಂಥಾ ಸ್ಥಿತಿ ಏನೂ ಇಲ್ಲ. ಕಾಂಗ್ರೆಸ್‌ನಲ್ಲಿ ನನ್ನನ್ನ ತಾತ್ಸಾರ ಮಾಡಿದ್ರು, ಅವಮಾನ ಮಾಡಿದ್ರು. ನನಗೆ ಭಾಷಣ ಅಂದ್ರೆ ಪ್ರಾಣ. ಆದ್ರು ನನಗೆ ಭಾಷಣ ಮಾಡಕ್ಕೆ ಅವಕಾಶನೆ ಕೊಡ್ಲಿಲ್ಲ. ಎಲ್ಲಿ ಭಾಷಣಕ್ಕೆ ಅವಕಾಶ ಕೊಡಲ್ಲೊ ಅಲ್ಲಿ ನಾನಿರಲ್ಲ. ಆದಕ್ಕೆ ಬಿಜೆಪಿಗೆ ಹೋದೆ."

"ಹೋದೆ ಅನ್ನು. ಅವರೇನು ಕರೀಲಿಲ್ಲ."

"ನಮ್ಮ ಜಾತಿಯ ಸದಾನಂದ ಗೌಡ್ರು ಕರುದ್ರು, ಹೋದೆ."

"ಸದಾನಂದಗೌಡ ನಿಮ್ಮ ಜಾತಿ ಯಾವಾಗಾದ?"

"ಅಂದ್ರೆ ಏನೇಳ್ತಾಯಿದ್ದಿ ನೀನು?"

"ಲಂಕೇಶ್ ಎದ್ರಿಗೆ ಕುತಗಂಡು ಹೆಣ್ಣು ಗಂಡು ಎರಡೇ ಜಾತಿ ಅಂದಿದ್ದೆ ನೀನು. ನಿನ್ನ ಹೆಣ್ಣು ಜಾತಿಗೆ ಸದಾನಂದ ಅದ್ಯಾವಾಗ ಬಂದ ಅಂತ?"

"ಅಂಗಲ್ಲ ನಾನೇಳಿದ್ದು, ನಾವು ಗೌಡ್ರು, ಅವರು ಗೌಡ್ರು. ಅದಕ್ಕೆ ನನ್ನನ್ನ ಹಾರ ಹಾಕಿ ಕರಕೊಂಡ್ರು."

"ನಿನ್ನ ಮಾತಿನ ದನಿ ನೋಡಿದ್ರೆ ಜಾತಿಗೆಟ್ಟು ತಿರುಗ್ತಾಯಿದ್ದ ನಿನ್ನನ್ನು ಜಾತಿಗೆ ಹಾರ ಹಾಕಿ ಕರಕೊಂಡ್ರು ಅನ್ನಂಗಿದೆಯಲ್ಲಾ."

"ಒಂಥರಾ ಅಂಗೆ ಆಯ್ತು, ಕಾಂಗ್ರೆಸ್ನಲ್ಲಿ ನಮ್ಮ ಜಾತಿಗೆ ತುಂಬ ಅನ್ಯಾಯ ಮಾಡಿದ್ರು. ಡಿ.ಬಿ. ಚಂದ್ರೇಗೌಡ, ಶ್ರೀಕಂಠಯ್ಯ ಇವರನ್ನೆಲ್ಲಾ ಬೆಳೆಯಕ್ಕೆ ಬಿಡ್ಲಿಲ್ಲ. ಅದ್ಕೆ ಅವರು ಬಿಜೆಪಿಗೊದ್ರು. ನಾನೂ ಬಂದೆ."

"ಚಂದ್ರೇಗೌಡ ತೀರ್ಥಹಳ್ಳಿ, ಶೃಂಗೇರಿ, ಚಿಕ್ಕಮಗಳೂರನ್ನ ಬಿಜೆಪಿ ಬಾಯಿಗೆ ಹಾಕಿದ ಅಂತ ಅವ್ರುರೆ ಸೇರಿಸಿಕೊಂಡ್ರು. ಇನ್ನ ಶ್ರೀಕಂಠಯ್ಯ ಹೆಣ್ಣು ಹೆಂಡದ ದೆಸೆಯಿಂದ ಯಾರಿಗೂ ಬೇಡದೋನಾಗಿದ್ದ. ಅಂಗಾಗಿ ಬಿಜೆಪಿ ದೊಡ್ಡಿಗೋದ, ಅಲ್ಲವೆ?"

"ನೀನೇನೇ ಹೇಳು, ನನ್ನಂಥ ಮೇಲ್ಜಾತಿಯವರನ್ನ ಕಾಂಗ್ರೆಸ್ಸು ಬೆಳೆಯಕ್ಕೆ ಬಿಡದೆ ತುಳಿಯುತ್ತೆ."

"ಕಾಂಗ್ರೆಸ್ಸು ಕೇವಲ ಒಬ್ಬ ಟಿ.ವಿ. ನಿರೂಪಕಿ ಕೈಗೆ ಕಾಸು ಕೊಟ್ಟು, ಟಿಕೆಟ್ ಕೊಟ್ಟು, ಗೆಲ್ಲಿಸಿ ಸಂಸದೆ ಮಾಡ್ತು. ಆವತ್ತು ಬೀದಿಲಿದ್ದ ನೀನು ಈಗ ಬಂಗ್ಲೆಲಿದ್ದಿ. ಅಷ್ಟೇ ಅಲ್ಲ, ನೀನು ಅಟ್ಟ ಹತ್ತಕ್ಕೆ ಮೆಟ್ಟಲಾದೋರನ್ನೆ ಮರೆತು ಕುಂತಿದ್ದಿ. ನೀನು ಆ ಹಾಳು ಬಿಜೆಪಿಲಿ ಮೂರು ದಿನ ಇರಕ್ಕಾಗಲ್ಲ ನೋಡ್ತಾಯಿರು. ಇದ್ರೂ ಗತಿಯಿಲ್ದೆ ಇರತಿ."

"ಬಿಜೆಪಿಲಿ ಯಡಿಯೂರಪ್ಪನಂತ ದೊಡ್ಡ ನಾಯಕರವರೆ. ದೇಶದ ಮೆಚ್ಚಿನ ಪ್ರಧಾನಿಯಾಗೊ ಮೋದಿ ಅವರೆ. ದೇಶ ರಕ್ಷಣೆಗೆ ಅಂತ ಆರೆಸ್ಸೆಸ್ಸಿದೆ. ಲಿಂಗಾಯತರು ಮತ್ತು ಒಕ್ಕಲಿಗರು ಒಂದಾದ್ರೆ ಸಿದ್ದರಾಮಯ್ಯನ ಅಹಿಂದ ಅಡಗಿಸಬಹುದು. ಮುಂದೆ ನೋಡ್ತಾಯಿರು."

"ಒಮ್ಮೆ ಸಿದ್ದರಾಮಯ್ಯ ಬೀದಿಲಿ ನಿನ್ನ ಭುಜದ ಮೇಲೆ ಕೈಹಾಕಿದಾಗ 'ಸಿದ್ದರಾಮಣ್ಣ ನೀನು ಮುಖ್ಯಮಂತ್ರಿ ಅಗಲೇಬೇಕು ಕಣಣ್ಣ ಅದನ್ನ ನಾನು ಕಣ್ಣಾರ ನೋಡಬೇಕು' ಅಂದಿದ್ದೆ?"

"ಅಂದಿದ್ದೆ ಸರಿ. ಆದ್ರೆ ಇವತ್ತಿನ ಸಿದ್ದರಾಮಣ್ಣನಿಗೆ ನನಗಿಂತ ಡಿ.ಕೆ. ಶಿವಕುಮಾರನೇ ಮುಖ್ಯ ಆಗಿದಾನೆ."

"ಆ ಕಾಂಗ್ರೆಸ್ಸಿಗೆ ದೇವೇಗೌಡನಂತ ದೈತ್ಯನನ್ನ ಎದುರುಸಕ್ಕೆ ಡಿ.ಕೆ.ಶಿ. ಅನಿವಾರ್ಯ. ಅವನೊಂಥರ ಗೂಳಿ ಕಾಳಗದಲ್ಲಿ ಗೆಲ್ಲೊ ರಾಜಕಾರಣಿ. ನಿನ್ನಂತ ನಿನ್ನನ್ನೆ ದೇವೇಗೌಡರ ಎದುರಿಗೆ ತಂದು ನಿಲ್ಲಿಸಿ ಗೆಲ್ಲಿಸಿದ. ಕಳೆದ ಚುನಾವಣೆಲಿ ರಮ್ಯಾನ್ನ ತಂದು ಮಂಡ್ಯ ಜಿಲ್ಲೇಲಿ ಕಾಂಗ್ರೆಸ್ ಸ್ಥಾಪನೆ ಮಾಡಿದ. ಅಂತ ರಾಜಕಾರಣಿ ಕಟ್ಟೆರೊ ಕಾಂಗ್ರೆಸ್ಸಿಗೆ ಬೇಕೆ ಹೊರತು, ಯಾರು ಸಿಕ್ಕಿದ್ರು 'ಥಾರ್ಟಿ ರುಪೀಸ್ ಇದಿಯಾ ಸಾರ್?' ಅಂತ ಕೇಳೊ ನಿನ್ನಂಥೋಳು ಸಿದ್ದರಾಮಯ್ಯನಿಗೆ ಇವತ್ಯಾಕೆ ಬೇಕೇಳು?"

"ನಾನು ಪಾರ್ಟಿ ರುಪೀಸ್ ಯಾವಾಗ ಕೇಳಿದ್ದೆ?"

"ನೈನ್‌ಟೀನ್ ನೈಂಟಿ ಟುನಲ್ಲಿ, ಅಂಗೆ ಕೇಳಿ ನನ್ನತ್ರನೆ ಈಸಗಂಡಿದ್ದೆ. ಥಾರ್ಟಿ ಕೇಳಿದ್ರೆ ಚಿಲ್ಲರೆ ಇಲ್ದೆ ಪಿಫ್ಟಿ ಕೊಡ್ತರೆ ಅಂತ ನಿನ್ನ ಪ್ಲಾನು. ಅವತ್ತೀಸಗಂಡ ದುಡ್ಡ ಇವತ್ತಿಗೂ ಕೊಟ್ಟಿಲ್ಲ ನೀನು."

"ಆ ಜುಜುಬಿ ಐವತ್ತು ರೂಪಾಯಿ ನೆನಪಿಟ್ಟುಕೊಂಡು ಕೇಳ್ತಿಯಲ್ಲಾ, ಎಂಥಾ ಸಣ್ಣ ಮನುಷ್ಯ ನೀನು? ಯಾವಾಗ್ಲಾದ್ರು ಸಿಕ್ಕು, ಬೇಕಿದ್ರೆ ಐದು ಸಾವಿರ ಕೊಡ್ತೀನಿ."


"ಯಾರತ್ರ ಈಸಿ ಕೊಡ್ತಿ?"

"ಸದಾನಂದ ಗೌಡನತ್ರ."

"ಥೂತ್ತೇರಿ!!!"

ಮೋದಿ ಚೀನಿ ಭಾಯಿ ಭಾಯಿ!

ಮೋದಿ ತನ್ನ ದೇಶವ್ಯಾಪಿ ಚುನಾವಣಾ ಪ್ರಚಾರದ ಭಾಗವಾಗಿ ಈಶಾನ್ಯ ಭಾರತಕ್ಕೂ ಭೇಟಿ ಕೊಟ್ಟಿದ್ದಾನೆ. ಅಲ್ಲಿ ಮಾಡಿದ ಭಾಷಣವೊಂದರಲ್ಲಿ ಆತ ಚೀನಾ ದೇಶವನ್ನು ಗುರಿಯಾಗಿಸಿ ಬೆಂಕಿ ಉಗುಳುವಂಥಾ ಮಾತುಗಳನ್ನಾಡಿದ. ಚೀನಾ ಎಲ್ಲಾದರೂ ಅರುಣಾಚಲ ಪ್ರದೇಶವನ್ನು



ನುಂಗಲೆತ್ನಿಸಿದರೆ ಅದರ ಪರಿಣಾಮ ನೆಟ್ಟಗಾಗದೆಂದು ಎಚ್ಚರಿಕೆ ನೀಡಿದ. ಅಷ್ಟೇ ಅಲ್ಲ, ಅದಕ್ಕೊಂದು ಪುಕ್ಕಟೆ ಸಲಹೆಯನ್ನೂ ಕೊಟ್ಟ. ಅದೇನೆಂದರೆ ಚೀನಾ ತನ್ನ ಸಾಮ್ರಾಜ್ಯ ವಿಸ್ತರಣೆಯ ನೀತಿಯನ್ನು ಕೈಬಿಟ್ಟು ಅಭಿವೃದ್ಧಿಯ ನೀತಿಯನ್ನು ಅಳವಡಿಸಿಕೊಳ್ಳಬೇಕು! ಇವನ ಮಾತು ಕೇಳಿದ ಚೀನೀಯರು ಬಿದ್ದುಬಿದ್ದು ನಕ್ಕರಂತೆ!! ಏಕೆಂದರೆ ಅಭಿವೃದ್ಧಿಯ ವಿಷಯದಲ್ಲಿ ಚೀನಾ ಇಂದು ಭಾರತಕ್ಕೇ ಪಾಠ ಹೇಳಿಕೊಡುವಷ್ಟು ಮುಂದುವರಿದ ದೇಶ! ವಾಸ್ತವದಲ್ಲಿ ಮೋದಿಯ ಆರ್ಥಿಕ ನೀತಿಗಳು ಚೀನೀಪರ ಆಗಿರುವ ವಿಚಾರ ಬಹುಶಃ ದೇಶದ ಬಹುಪಾಲು ಜನರಿಗೆ ತಿಳಿದಿಲ್ಲ. ಈತನಷ್ಟು ಚೀನಿಪರವಾಗಿರುವ ಮುಖ್ಯಮಂತ್ರಿ ಇನ್ಯಾವ ರಾಜ್ಯದಲ್ಲೂ ಇಲ್ಲ.

ಚೀನಾಕ್ಕೆ ಎಚ್ಚರಿಕೆ ನೀಡುವ ಇದೇ ಮೋದಿ ಗುಜರಾತಿನಲ್ಲಿ ಹೂಡಿಕೆ ಮಾಡಿರೆಂದು ಚೀನೀಯರಿಗೆ ದುಂಬಾಲು ಬೀಳುತ್ತಾ ಇರುತ್ತಾನೆ. ಗುಜರಾತಿನಲ್ಲಿ ತಮಗೆ ಹೂಡಿಕೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೋದಿಗೆ ಕೃತಜ್ಞರಾಗಿರುವ ಚೀನೀಯರು ಆತನನ್ನು ಆಗಾಗ ತಮ್ಮ ದೇಶಕ್ಕೆ ಕರೆದು ಅತಿಥಿಸತ್ಕಾರ ಮಾಡುತ್ತಾ ಇರುತ್ತಾರೆ. ಗುಜರಾತ್ ರಾಜ್ಯದ ಶಾಲಾ ವಿದ್ಯಾರ್ಥಿಗಳಿಗೆ ಚೀನೀ ಭಾಷೆ ಮ್ಯಾಂಡರಿನ್ ಕಲಿಸುವ ಏರ್ಪಾಟು ಮಾಡಲಾಗಿದ್ದು ಇದರ ಹಿಂದೆ ಗುಜರಾತಿಗಳಿಗೆ ಚೀನಾದಲ್ಲಿ ನೌಕರಿ ಕೊಡಿಸುವ ದೂರಗಾಮಿ ಉದ್ದೇಶವಿದೆ. ಇನ್ನು ಬಹುರಾಷ್ಟ್ರೀಯ ಚೀನಿ ಟೆಲಿಕಾಂ ಕಂಪೆನಿಯೊಂದಿದೆ. ಅದು ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಗೆ ಗೂಢಚಾರಿಕೆ ನಡೆಸಲು ಅನುವು ಮಾಡಿಕೊಟ್ಟಿದೆ ಎನ್ನುವ ಆರೋಪ ಎದುರಿಸುತ್ತಿದೆ. ಇಂತಹ ಸಂಶಯಾಸ್ಪದ ಟೆಲಿಕಾಂ ಕಂಪೆನಿ ಭಾರತದಲ್ಲಿ ಅದರ ಪ್ರಧಾನ ಕಚೇರಿಯೊಂದನ್ನು ತೆರೆದಿದೆ. ಎಲ್ಲಿ ಗೊತ್ತೇ? ಮೋದಿಯ ಗುಜರಾತಿನಲ್ಲಿ!!!

ಈಗ ಹೇಳಿ, ಮೋದಿಯ ಭಾಷಣಗಳು ಜನರ ಕಣ್ಣಿಗೆ ಮಣ್ಣೆರಚುವ ನಾಟಕ ಅಲ್ಲವೇ?


* * *

ಬಾಯಲ್ಲಿ ಭ್ರಷ್ಟಾಚಾರ ವಿರೋಧ, ಬಗಲಲ್ಲಿ ಭ್ರಷ್ಟರ ಕೂಟ

ಯುಪಿಎ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಬಿಜೆಪಿಯ 'ವಿಜಯ ಶಂಖನಾದ' ಮೊಳಗುತ್ತಿರುವ ಸಂದರ್ಭದಲ್ಲಿ ಗುಜರಾತಿನಿಂದಲೇ ಭ್ರಷ್ಟಾಚಾರದ ನಾತ ಅಪ್ಪಳಿಸುತ್ತಿರುವುದಕ್ಕೆ ಏನು ಹೇಳಬೇಕೊ ಗೊತ್ತಾಗುತ್ತಿಲ್ಲ. ಫೆಬ್ರವರಿ 20ರ 'ವಿಜಯ ಶಂಖನಾದ'ದಲ್ಲಿ ಮಾತನಾಡಿದ ಮೋದಿ ಯುವಜನರಿಗೆ ಉದ್ಯೋಗಾವಕಾಶ ಒದಗಿಸಲು ಅಸಮರ್ಥವಾದ ಯುಪಿಎ ಸರ್ಕಾರವನ್ನು, ಅದರ ಭ್ರಷ್ಟಾಚಾರವನ್ನು ಹಿಗ್ಗಾಮುಗ್ಗಾ ನಿಂದಿಸಿದ. ಆದರೆ ತನ್ನ ಎಲೆಯಲ್ಲಿ ಸತ್ತುಬಿದ್ದಿದ್ದ ಹೆಗ್ಗಣಗಳ ಬಗ್ಗೆ ಆತ ಕುರುಡನಾಗಿದ್ದ.

ಇತ್ತೀಚೆಗಷ್ಟೆ ಗುಜರಾತಿನ ಕೆಲವು ಮಂದಿ ಬಿಜೆಪಿಗರು ಕೋಟ್ಯಂತರ ರೂಪಾಯಿ ಗುಳುಂ ಮಾಡಿದ ಆರೋಪ ಹೊತ್ತು ಶ್ರೀಕೃಷ್ಣ ಜನ್ಮಸ್ಥಾನ ಸೇರಿದ್ದಾರೆ! ಈ ಹಗರಣದ ವಿವರಗಳು ಬಹಳ ಸ್ವಾರಸ್ಯಕರವಾಗಿವೆ. ಅದೇನೆಂದರೆ ಕಿರಿಯ ಕ್ಲರ್ಕ್, ಆರೋಗ್ಯ ಸಹಾಯಕ ಮೊದಲಾದ ದ್ವಿತೀಯ ದರ್ಜೆಯ 1200 ಸರ್ಕಾರಿ ನೌಕರಿಗಳಿಗೆ ಸಾವಿರಾರು ನಿರುದ್ಯೋಗಿ ಯುವಜನರು ಅರ್ಜಿ ಹಾಕಿದ್ದರು. ಕಲ್ಯಾಣ್ ಸಿಂಗ್ ಚಂಪಾವತ್ ಎಂಬೊಬ್ಬ ಪ್ರಭಾವಿ ಬಿಜೆಪಿಗನ ನೇತೃತ್ವದಲ್ಲಿ ನಿಸಲ್ ಶಾ, ಅನಿಲ್ ಮೇವಾಡ, ಐನೇಶ್ ಜೈಸ್ವಾಲ್ ಎಂಬವರು ಅವರಿಗೆಲ್ಲ ಕೆಲಸ ಕೊಡಿಸುವ ಭರವಸೆ ನೀಡಿದ್ದರು. ಪರೀಕ್ಷೆಗಾಗಿ ಕೋಚಿಂಗ್ ಕ್ಲಾಸ್ ನಡೆಸುವ ಹೆಸರಿನಲ್ಲಿ ಒಬ್ಬೊಬ್ಬನಿಂದ 10 ಲಕ್ಷ ರೂಪಾಯಿಗಳಷ್ಟು ದುಡ್ಡು ಪೀಕಿಸಲಾಗಿತ್ತು, ದುಡ್ಡು ಕೊಟ್ಟ ಅಭ್ಯರ್ಥಿಗಳು ತಮ್ಮ ಉತ್ತರ ಪತ್ರಿಕೆಗಳಲ್ಲಿ ವಿಶಿಷ್ಟ ಗುರುತು ಹಾಕುವಂತೆ ಹೇಳಲಾಗಿತ್ತು. ಸುಮಾರು 20 ಅಭ್ಯರ್ಥಿಗಳೀಗ ಇದನ್ನೆಲ್ಲಾ ಪೊಲೀಸರ ಮುಂದೆ ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಅಭ್ಯರ್ಥಿ/ವಿದ್ಯಾರ್ಥಿಗಳ ಸಂಕ್ಷಿಪ್ತ ಹೆಸರುಗಳೊಂದಿಗೆ ಅವರ ಕೋರ್ಸ್‌ಗಳನ್ನು ನಮೂದಿಸಿರುವ ದಿನಚರಿಗಳು ಕೂಡ ಪತ್ತೆಯಾಗಿವೆ. ಆರೋಪಿಗಳಿಂದ ಈಗಾಗಲೆ ಸುಮಾರು 1.43 ಕೋಟಿ ರೂಪಾಯಿ ವಶಪಡಿಸಿಕೊಳ್ಳಲಾಗಿದೆ. ಪೊಲೀಸರ ಪ್ರಕಾರ ಕಲ್ಯಾಣ್ ಸಿಂಗ್ ಚಂಪಾವತ್ ಇದೊಂದೇ ಅಲ್ಲ, ಇನ್ನೂ ಹಲವು ಹಗರಣಗಳಲ್ಲಿ ಭಾಗಿಯಾಗಿರುವ ಸಾಧ್ಯತೆಗಳಿವೆ. ಮೋದಿ ಆಡಳಿತದ ಹತ್ತು ವರ್ಷಗಳಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಸೇರಿದಂತೆ ಹೆಚ್ಚುಕಮ್ಮಿ ಎಲ್ಲಾ ಸರ್ಕಾರಿ ನೇಮಕಾತಿಗಳಲ್ಲಿಯೂ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎನ್ನಲಾಗಿದೆ.

ಇತ್ತೀಚಿನ ಮತ್ತೊಂದು ಬೆಳವಣಿಗೆಯಲ್ಲಿ ಮೋದಿಯ ಚುನಾವಣಾ ತಂಡದ ಸಹಸಂಚಾಲಕನಾದ ಗಣೇಶ್ ಮಾಲವೀಯ ಎಂಬಾತನೇ ಭ್ರಷ್ಟಾಚಾರದ ಆರೋಪದಲ್ಲಿ



ಸಿಬಿಐ ಬಲೆಗೆ ಬಿದ್ದಿದ್ದಾನೆ! ತಮಾಷೆ ಏನೆಂದರೆ ದೂರುದಾರನೂ ಭಾರತೀಯ ಜನತಾ ಪಕ್ಷದ ಸದಸ್ಯನೇ!! ರಾಜೇಶ್ ಬಡೋರಿಯಾ ಎಂಬ ಈತ ಮಧ್ಯಪ್ರದೇಶದಲ್ಲಿ ಬಿಜೆಪಿಯ ಸಾಂಸ್ಕೃತಿಕ ಘಟಕದ ಸಂಚಾಲಕನಾಗಿದ್ದಾನೆ. ಮಾಲವೀಯನ ಪತ್ನಿ ಪೂನಂ ರಾಯ್ ಆದಾಯ ತೆರಿಗೆ ಇಲಾಖೆಯಲ್ಲಿ ಉಪಆಯುಕ್ತ ಹುದ್ದೆಯಲ್ಲಿದ್ದಾಳೆ. ಈಕೆ ಬಡೋರಿಯಾನ ಅವ್ಯವಹಾರ ಮುಚ್ಚಿಡಲು 25 ಲಕ್ಷ ರೂಪಾಯಿ ಲಂಚ ಕೇಳಿದ್ದಾಳೆ. ಈ ಮಾಹಿತಿ ಪಡೆದ ಸಿಬಿಐ ಈಕೆಯನ್ನು ಬಲೆಗೆ ಕೆಡವಲು ಉಪಾಯ ಹೂಡಿದೆ. ಅಂತೆಯೇ ಗಂಡ, ಹೆಂಡತಿ 10 ಲಕ್ಷ ರೂಪಾಯಿ ಸ್ವೀಕರಿಸುತ್ತಿದ್ದ ವೇಳೆ ದಾಳಿ ಮಾಡಿ ಇಬ್ಬರನ್ನೂ ಬಂಧಿಸಿದೆ. ಅವರ ಮನೆಯಿಂದ ರೂ. 2.5 ಲಕ್ಷ ನಗದು, ಚಿನ್ನಾಭರಣಗಳು, ವಜ್ರದ ಆಭರಣಗಳು ಮತ್ತು ನಾಲ್ಕು ಬ್ಯಾಂಕ್ ಲಾಕರ್ ಚಾವಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇನ್ನೊಬ್ಬನತ್ತ ಬೆರಳು ತೋರಿಸುತ್ತಾ ಜನರಿಗೆ ಟೋಪಿ ಹಾಕುವುದೆಂದರೆ ಇದೇ ಅಲ್ಲವೇ?

(www.truthofgujarat.com; http://timesofindia.indiatimes.com)

ಹಾನಿಕಾರಕ ಅಭಿವೃದ್ಧಿ ಇಡೀ ಭಾರತಕ್ಕೆ ವಿಸ್ತರಿಸಬೇಕೆ?

ನರೇಂದ್ರ ಮೋದಿಯ ಹಾವಭಾವ ತುಂಬಾ ನಾಟಕೀಯವಾಗಿರುತ್ತದೆ. ಆತ ಚಿಕ್ಕಂದಿನಲ್ಲಿ ತಂದೆಯೊಂದಿಗೆ ರೈಲ್ವೇ ಕ್ಯಾಂಟೀನ್ ನಡೆಸುವುದರ ಜೊತೆಗೆ ಗುಜರಾತಿ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಲ್ಲಿ ನಟಿಸುತ್ತಿದ್ದನಂತೆ. ಹಾಗಾಗಿ ಈಗ ಆತನ ರಾಜಕೀಯ ಭಾಷಣವೂ ಅಷ್ಟೊಂದು ನಾಟಕೀಯತೆಯಿಂದ ಕೂಡಿರುತ್ತದೆ.

ಗುಜರಾತಿನಲ್ಲಿ ಕೇವಲ ಪೌರಾಣಿಕ ಮತ್ತೂ ಐತಿಹಾಸಿಕ ನಾಟಕಗಳೇ ಜನಪ್ರಿಯ. ಸಾಮಾಜಿಕ ನಾಟಕಗಳನ್ನು ಅಲ್ಲಿಯ ಜನ ಯಾಕೋ ಇಷ್ಟಪಡುವುದಿಲ್ಲ, ದಾಂಡಿಯಾ ಎಂಬ ಕೋಲಾಟ ಬಿಟ್ಟು ಬೇರೆ ಡ್ಯಾನ್ಸ್ ಗುಜರಾತಿಗಳಿಗೆ ಗೊತ್ತೇ ಇಲ್ಲ, ಗುಜರಾತಿ ಚಲನಚಿತ್ರಗಳೂ ಅಷ್ಟೇ, 15ನೇ ಶತಮಾನದ ಐತಿಹಾಸಿಕ ಹಿನ್ನೆಲೆಯುಳ್ಳ ಚಿತ್ರಗಳೇ ಹೆಚ್ಚು. ಸಮಕಾಲೀನ ವಿಚಾರ ಪ್ರಚೋದಕ ಚಲನಚಿತ್ರಗಳು ಅಲ್ಲಿ ಈವರೆಗೆ ಬಂದೇ ಇಲ್ಲ.

ಅಲ್ಲಿಯ ಸಾಹಿತ್ಯವೂ ನೆರೆಯ ಮರಾಠಿ - ಹಿಂದಿ ಅಥವಾ ದಕ್ಷಿಣದ ಭಾಷೆಗಳಿಗಿಂತ ಬಹಳೇ ಹಿಂದಿದೆ. ಕಾರಣ ವ್ಯಾಪಾರಿ ಬುದ್ಧಿಯ ಗುಜರಾತಿಗಳಿಗೆ ಸಾಹಿತ್ಯ-ಕಲೆ- ಕ್ರೀಡೆಗಳ ಬಗ್ಗೆ ಒಲವೇ ಇಲ್ಲ, ಕೇವಲ ಹಣ ಮಾಡುವುದೊಂದೇ ಅವರಿಗೆ ಗೊತ್ತಿರುವುದು. ಕ್ರಿಕೆಟಿನಲ್ಲಿ ಪಠಾಣ್ ಸಹೋದರರು ಮತ್ತು ಚಿತೇಶ್ವರ ಪೂಜಾರಾ ಹೊರತುಪಡಿಸಿ ಗುಜರಾತಿನ ಬೇರೆ ಕ್ರಿಕೆಟಿಗರು ರಾಷ್ಟ್ರೀಯ ಮಟ್ಟದಲ್ಲಿ ಮಿಂಚಿಯೇ ಇಲ್ಲ, ಬರೋಡಾ ಕ್ರಿಕೆಟ್ ಟೀಮಿನಲ್ಲಿ ಇರುವವರಲ್ಲಿ ಕಿರಣ್ ಮೋರೆಯಂತಹ ಮರಾಠಿಗರೇ ಹೆಚ್ಚು. ಆದರೂ ಆ ಒಂದು ರಾಜ್ಯಕ್ಕೆ ಮೂರು-ಮೂರು ರಣಜಿ ಟ್ರೋಫಿ ತಂಡಗಳಿರುವುದು ವಿಪರ್ಯಾಸ (ಗುಜರಾತಿಗಿಂತ ದೊಡ್ಡದಿರುವ ಕರ್ನಾಟಕಕ್ಕೆ ಒಂದೇ ರಣಜಿ ಟೀಮು!).

ವಿಚಿತ್ರವೆಂದರೆ ರಣಜಿ ಟ್ರೋಫಿಗೆ ಇಟ್ಟ ಹೆಸರು ಇಂಗ್ಲೆಂಡಿನಲ್ಲಿಯೇ ವಾಸಿಸುತ್ತಿದ್ದ ಗುಜರಾತಿನ ರಂಜಿತ್ ಸಿಂಹ ಎಂಬ ರಾಜಕುಮಾರನೊಬ್ಬನ ಹೆಸರು.

ಕೈಗಾರಿಕೆ ಒಂದನ್ನು ಹೊರತುಪಡಿಸಿ ಸಾಹಿತ್ಯ ಕಲೆ, ಕ್ರೀಡೆ, ಕೃಷಿ ಹೀಗೆ ಎಲ್ಲಾ ಕ್ಷೇತ್ರದಲ್ಲೂ ತುಂಬಾ ಹಿಂದೆ ಇರುವ ಗುಜರಾತ್ ಉಳಿದ ಭಾರತಕ್ಕೆ ಹೇಗೆ ಮಾಡಲ್ ಆಗಬಲ್ಲದು? ಕೈಗಾರಿಕೆಗಳಲ್ಲೂ ಕೇವಲ ದೊಡ್ಡ ಉದ್ಯಮಗಳು ಮಾತ್ರ ಪ್ರಗತಿಯಲ್ಲಿವೆ. ಮೋದಿ ಆಡಳಿತಾವಧಿಯಲ್ಲಿ 50 ಸಾವಿರ ಸಣ್ಣ ಕೈಗಾರಿಕೆಗಳು ಬಾಗಿಲು ಮುಚ್ಚಿದ್ದು ಹತ್ತು ಲಕ್ಷಕ್ಕೂ ಮಿಕ್ಕಿ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಈ ಸಣ್ಣ ಕೈಗಾರಿಕೆಗಳಿಗೆ ಸಾಲ ಕೊಟ್ಟ ರಾಷ್ಟ್ರೀಕೃತ ಬ್ಯಾಂಕುಗಳೂ ಭಾರೀ ನಷ್ಟ ಅನುಭವಿಸಿವೆ ಹಾಗೂ ಅನೇಕ ಸಹಕಾರಿ ಬ್ಯಾಂಕುಗಳು ಮುಳುಗಿವೆ.

ಕೆಮಿಕಲ್ ಫ್ಯಾಕ್ಟರಿಗಳಿಂದ ತುಂಬಿರುವ ಗುಜರಾತಿನ ವಲ್ಸಾಡ್ ಮತ್ತು ವಡೋದ್ರ (ಬಲ್ಸಾರ್ ಮತ್ತು ಬರೋಡಾ) ಜಿಲ್ಲೆಗಳಲ್ಲಿ ಅಂತರ್ಜಲ ಸಂಪೂರ್ಣ ವಿಷಕಾರಿಯಾಗಿದ್ದು, ಅಲ್ಲಿ ಬೆಳೆದ ಹಣ್ಣು-ತರಕಾರಿಗಳೂ ವಿಷಕಾರಿ ಆಗಿರುವುದು ಕಂಡುಬಂದಿರುವುದರಿಂದ ಸ್ವತಃ ಗುಜರಾತಿಗಳೇ ಅವುಗಳನ್ನು ತಿನ್ನುತ್ತಿಲ್ಲ, ಹಾಗಾಗಿ ಅವನ್ನೆಲ್ಲ ಗುಟ್ಟಾಗಿ ಮುಂಬೈಗೆ ಸಾಗಿಸಿ ಮಾರಾಟ ಮಾಡಲಾಗುತ್ತಿದೆ. ಇಷ್ಟಾದರೂ ಬಿಜೆಪಿಯವರು ಗುಜರಾತ್ ಮಾದರಿ ಅಭಿವೃದ್ಧಿಯನ್ನು ಭಾರತದಲ್ಲೆಲ್ಲ ಅನುಷ್ಠಾನ ಮಾಡುತ್ತಾರಂತೆ. ಇಂತಹ 'ಹಾನಿಕಾರಕ ಅಭಿವೃದ್ಧಿಯನ್ನು ಇಡೀ ಭಾರತಕ್ಕೆ ವಿಸ್ತರಿಸಬೇಕೆ?

- ವೀರಪ್ಪ ದಿ ನಾಯ್ಕ್, ಮಂಗಳೂರು



ಮಹಿಳೆಯರಿಗೆ ಪ್ರಾತಿನಿಧ್ಯ ಎಲ್ಲಿ?


ಸ್ತ್ರೀಯರಿಗೆ ಶೇ.50 ಮೀಸಲಾತಿ ಸಿಗಬೇಕೆನ್ನುವ ಕೂಗು ಇಂದು ಜಗತ್ತಿನಾದ್ಯಂತ ಕೇಳಿಬರುತ್ತಿದೆ. ಎಲ್ಲ ರಾಜಕೀಯ ಧುರೀಣರು ಸಹ ವೇದಿಕೆ-ಭಾಷಣಗಳಲ್ಲಿ ಮಹಿಳೆಗೆ ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕೆಂದು ಹೇಳುವುದು ಸಾಮಾನ್ಯವಾಗಿದೆ. ಆದರೆ ಕಾನೂನು ರೂಪಿಸಬಲ್ಲ ಸಂಸತ್‌ಗೆ ಪ್ರತಿನಿಧಿಗಳನ್ನು ಕಳುಹಿಸುವ ಮಹತ್ವದ ಘಟ್ಟವಾದ ಈ ಚುನಾವಣೆಯಲ್ಲಿ ಮಹಿಳೆಯರಿಗೆ ಭಾರಿ ಅನ್ಯಾಯವಾಗಿದೆ.

ಈ ಚುನಾವಣೆಯಲ್ಲಿ ಕಾಂಗ್ರೆಸ್-7%, ಬಿಜೆಪಿ-3%, ಆಪ್ ಮತ್ತು ಜೆಡಿಎಸ್-10% ಮತ್ತು ಬಿಎಸ್‌ಪಿ-4% ಮಾತ್ರ ಮಹಿಳೆಯರಿಗೆ ಟಿಕೆಟ್ ನೀಡಿದೆ. ಹೆಚ್ಚಿನ ರಾಷ್ಟ್ರೀಯ ಪಕ್ಷಗಳಲ್ಲಿ ಮಹಿಳೆಯರೇ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದರೂ ಸಹ ಮಹಿಳೆಯರಿಗೆ ಕನಿಷ್ಠ ಪಕ್ಷ 33% ಮೀಸಲಾತಿ ನೀಡುವ ಹಾಗೂ ಶಾಸನ ರಚಿಸುವ ಆಸಕ್ತಿ ಮಾತ್ರ ಯಾರಿಗೂ ಇಲ್ಲದಾಗಿದೆ. ಚುನಾವಣೆಯಲ್ಲಿ ಕನಿಷ್ಠ ಪಕ್ಷ ಮೀಸಲಾತಿ ನೀಡಲಾಗದ ಈ ಪಕ್ಷಗಳು ಹೇಗೆ ಮಹಿಳೆಯರ ನೋವು-ನಲಿವು, ಸಮಸ್ಯೆ-ವಿಳಿಗೆಗೆ ಸ್ಪಂದಿಸುತ್ತವೆ?


- ಕೆ.ಟಿ.ಆರ್, ಬೆಂಗಳೂರು

'ಅಭಿವೃದ್ಧಿ ಮಾಡೆಲ್' ಎಂಬ ಶೋ ಕೇಸ್ ಬೊಂಬೆ

ದಕ್ಷಿಣ ಭಾರತ, ಮಹಾರಾಷ್ಟ್ರ, ಮಧ್ಯ ಪ್ರದೇಶ ಇಲ್ಲೆಲ್ಲ ಹೆಚ್ಚಿನ ಬಟ್ಟೆ ಅಂಗಡಿಗಳು ಗುಜರಾತಿಗಳದ್ದೇ. ಇವರಲ್ಲಿ ಹೆಚ್ಚಿನವರು ಜೈನರು. ಈ ಗುಜರಾತಿಗಳ ವಿಶೇಷತೆ ಏನೆಂದರೆ - ಹೊರಗೆ ಶೋ ಕೇಸಿನಲ್ಲಿ ಕಾಣುವಂತೆ ಸುಂದರ ಬೊಂಬೆಗೆ ಉತ್ತಮ ಗುಣಮಟ್ಟದ ಬಟ್ಟೆ ತೊಡಿಸಿ, ಒಳಗೆ ಮಾರಾಟಕ್ಕೆ ಕಳಪೆ ಗುಣಮಟ್ಟದ ಬಟ್ಟೆಯ ಸ್ಟಾಕ್ ಇಡುತ್ತಾರೆ. ಗುಜರಾತಿಗಳ ಈ ಬುದ್ಧಿಯೇ ಮೋದಿಯ ಗುಜರಾತ್-ಮಾಡೆಲ್-ಅಭಿವೃದ್ಧಿ ಎಂಬ ಶೋ ಕೇಸ್ ಬೊಂಬೆಯ ಪ್ರದರ್ಶನದ ಹಿಂದೆ ಇರುವುದು.



ನಾನು ಕಳೆದ ತಿಂಗಳು ಗುಜರಾತಿನ ವಿವಿಧೆಡೆ ಕೆಲಸದ ನಿಮಿತ್ತ ತಿರುಗಾಡಿದಾಗ ಇದೇ ಶೋ ಕೇಸ್ ಪ್ರದರ್ಶನದ ಅನುಭವವಾಯಿತು. ಕೇವಲ ಗುಜರಾತಿನ ದೊಡ್ಡ ನಗರಗಳಲ್ಲಿ ಮತ್ತು ಸುತ್ತಮುತ್ತ ಅಭಿವೃದ್ಧಿ ಮಾಡಿ ಹೊರಗಿನಿಂದ ಬಂದವರಿಗೆ ಕಾಣುವಂತೆ ಅಚ್ಚುಕಟ್ಟಾಗಿ ಪ್ರದರ್ಶನಕ್ಕಿಡಲಾಗಿದೆ. ಆದರೆ ಒಳಪ್ರದೇಶದಲ್ಲಿ ಗುಜರಾತ್ ಹಾಗೂ ಬಿಹಾರಗಳಲ್ಲಿ ಭೇದವೇನೂ ಇಲ್ಲ, ಕೆಲವು ಹಳ್ಳಿಗಳಿಗೆ ಸರಿಯಾದ ರಸ್ತೆಯೂ ಇಲ್ಲ. ಕಛ್ ಪ್ರದೇಶದಲ್ಲಿ ಮಹಿಳೆಯರು ನೀರು ತರಲು ಹಲವಾರು ಮೈಲಿ ಈಗಲೂ ನಡೆಯಬೇಕು. ನಗರ ಪ್ರದೇಶದಲ್ಲಿ 24x7 ವಿದ್ಯುತ್ ಪೂರೈಕೆ ಇರುವುದು



ನಿಜ, ಆದರೆ ಹಳ್ಳಿಗಳಲ್ಲಿ 12 ಗಂಟೆ ಪವರ್ ಕಟ್ ಈಗಲೂ ಇದೇ. ನಮ್ಮ ಕರ್ನಾಟಕ ಇದಕ್ಕಿಂತ ಎಷ್ಟೋ ವಾಸಿ.

ಈ ವಾರದ 'ದಿ ವೀಕ್' (4-4-14) ಪತ್ರಿಕೆಯು ಗುಜರಾತ್ ಅಭಿವೃದ್ಧಿಯನ್ನು ಅಂಕಿ-ಸಂಖ್ಯೆಗಳೊಂದಿಗೆ ಬಟಾಬಯಲು ಮಾಡಿ ಮೋದಿಯನ್ನು ಬೆತ್ತಲೆಗೊಳಿಸಿದೆ.

ಗುಜರಾತಿನಲ್ಲಿ ಸಾರಾಯಿ ನಿಷೇಧವಿದೆ. ಗಾಂಧೀಜಿಯ ಹೆಸರಲ್ಲಿ 1948ರಿಂದಲೂ ಅಲ್ಲಿ ಪ್ರೊಹಿಬಿಷನ್ ಇದೆ. ಪ್ರೊಹಿಬಿಷನ್ ಸಹ ಅಲ್ಲಿಯ ಅಭಿವೃದ್ಧಿಯಂತೆ ಕೇವಲ ಶೋಕೇಸ್ ಪ್ರದರ್ಶನ ಮಾತ್ರ. ಕಾರಣ ಅಲ್ಲಿ ಮೂಲೆಮೂಲೆಯಲ್ಲಿ ಹಳ್ಳಿಹಳ್ಳಿಗಳಲ್ಲಿ ಸುಲಭವಾಗಿ ಸಾರಾಯಿ ದೊರೆಯುತ್ತದೆ. ಫೋನ್ ಮಾಡಿದರೆ ಸಾಕು ನೇರ ಮನೆಗೇ ಡೆಲಿವರಿ. ಗುಜರಾತಿನ ಹೈಸ್ಕೂಲಿನ ಇತಿಹಾಸ ಪುಸ್ತಕದಲ್ಲಿ ದಕ್ಷಿಣ ಭಾರತದ ಸಾಧಕರಿಗೆ ಸ್ಥಾನವೇ ಇಲ್ಲ, ಧರ್ಮ ಪ್ರವರ್ತಕರ ಪಾಠದಲ್ಲಿ ಬಸವೇಶ್ವರರ ಹೆಸರೇ ಇಲ್ಲ, ಚಾಲುಕ್ಯರ ಕಾಲದಲ್ಲಿ ಕರ್ನಾಟಕದ ತ್ರೈಲಪ ಚಕ್ರವರ್ತಿ ಗುಜರಾತಿನ 'ಮುಂಜ' ಎಂಬ ದುಷ್ಟ ರಾಜನನ್ನು ಸೋಲಿಸಿದ್ದನ್ನು ನಾವು ಓದಿದ್ದೇವೆ. ಆದರೆ ಗುಜರಾತಿನ ಶಾಲಾ ಪಠ್ಯದಲ್ಲಿ ಉಲ್ಟಾ ಬರೆಯಲಾಗಿದೆ. ದುಷ್ಟನಾಗಿದ್ದ ತೈಲಪನನ್ನು ಮುಂಜನೇ ಸೋಲಿಸಿದನಂತೆ. ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ದಕ್ಷಿಣ ಭಾರತದವರು ನಿರ್ಲಿಪ್ತರಾಗಿದ್ದರಂತೆ. ಟಿಪ್ಪು ಸುಲ್ತಾನ ಮಹಾದುಷ್ಟ ಧರ್ಮಾಂಧನಾಗಿದ್ದನಂತೆ.

ಗುಜರಾತಿನಲ್ಲಿ ಕರ್ನಾಟಕ ಮೂಲದ ಬ್ಯಾಂಕುಗಳ ಅನೇಕ ಶಾಖೆಗಳಿವೆ. ಅವುಗಳಲ್ಲಿ ಅಧಿಕಾರಿಗಳೆಲ್ಲ ಕನ್ನಡಿಗರಾದರೆ ಕ್ಲಾರ್ಕುಗಳು ಸ್ಥಳೀಯ ಗುಜರಾತಿಗಳೇ ಆಗಿದ್ದಾರೆ. ಇಂಗ್ಲಿಷ್ ಬಾರದ ಈ ಗುಜರಾತಿ ಕ್ಲಾರ್ಕುಗಳು ಕೇವಲ ಎರಡು ಗಂಟೆ ಕೆಲಸ ಮಾಡಿ ನಾಲ್ಕು ಗಂಟೆ ತಮ್ಮ ಸೈಡ್-ಬಿಸಿನೆಸ್ ಮಾಡುತ್ತಾರೆ. ಬಾಕಿ ಉಳಿದ ಕ್ಲಾರ್ಕ್

ಸಾಹಿತ್ಯ, ಸಂಗೀತದ ಮಿಲನ

‘ಮಠ’, ‘ಡೈರೆಕ್ಟರ್ಸ್ ಸ್ಪೆಷಲ್’ ಸೇರಿದಂತೆ ಒಂದಿಷ್ಟು ಚಿತ್ರಗಳಿಗೆ ಸಬ್ ಟೈಟಲ್ ಮಾಡಿಕೊಟ್ಟಿರುವ, ಮೂಲತಃ ಗಾಯಕಿ, ನಿರೂಪಕಿ, ಲೇಖಕಿ, ಅನುವಾದಕಿಯಾಗಿರುವ ಧರ್ಮಶ್ರೀ ಅಯ್ಯಂಗಾರ್ ಇಲ್ಲಿ ಮಾತಾಡಿದ್ದಾರೆ.





ಸಂದರ್ಶನ

** ನಿಮ್ಮ ಊರು, ಕುಟುಂಬ, ಶಿಕ್ಷಣದ ಹಿನ್ನೆಲೆ ಬಗ್ಗೆ ಹೇಳ್ತೀರಾ?*

ಮೈಸೂರು. ಅಪ್ಪ ಭಾಷ್ಯಂ ಅಯ್ಯಂಗಾರ್ ನಿವೃತ್ತ ಬ್ಯಾಂಕ್ ಅಧಿಕಾರಿ ಹಾಗೂ ಹವ್ಯಾಸಿ ಬರಹಗಾರರು. ಅಮ್ಮ ಪದ್ಮ ಸಂಸ್ಕೃತ ಟೀಚರ್. ತಮ್ಮ ಸಪ್ತಗಿರಿ ಫ್ಲೋರಿಡದಲ್ಲಿ ವರ್ಕ್ ಮಾಡುತ್ತಿದ್ದಾನೆ. ಎಲ್.ಕೆ.ಜಿ ಇಂದ ಸ್ನಾತಕೋತ್ತರ ಪದವಿಯವರೆಗೆ ಮೈಸೂರಿನಲ್ಲೇ ನನ್ನ ಓದು. ನಾನು ಎನ್ವಿರಾನ್ಮೆಂಟಲ್ ಇಂಜಿನಿಯರಿಂಗ್ ಪದವಿಯನ್ನು ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ಮುಗಿಸಿ ನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಎಂ.ಎ ಪದವಿಯನ್ನು ಹೊಂದಿರುತ್ತೇನೆ.

** ನೀವು ಕೆಲಕಾಲ ಅಮೆರಿಕೆಯಲ್ಲಿ ಇದ್ದಿರೆಂದು ಕೇಳಿದ್ದೇನೆ? ನಿಜವೇ?*

ನಿಜ. ನಾನು ಇಂಜಿನಿಯರಿಂಗ್ ಮುಗಿಸಿದ ಬಳಿಕ ಉದ್ಯೋಗ ಅರಸಿ ವಲಸಿಗಳಾಗಿ ಅಮೆರಿಕೆಗೆ ಹೋಗಿ ಅಲ್ಲಿ ಸುಮಾರು ಐದು ವರ್ಷಗಳ ಕಾಲ ವಾಸವಾಗಿದ್ದೆ. ಅಲ್ಲಿನ ಕೆಲ ಸ್ವಯಂಸೇವಕ ಸಂಸ್ಥೆಗಳಿಂದ ಹಿಡಿದು ಒಂದು ಪಬ್ಲಿಕ್ ಹೆಲ್ತ್ ಸಂಸ್ಥೆಯೊಂದರ ತನಕ ವಿವಿಧ ರೀತಿಯ ಅನುಭವಗಳನ್ನು ಪಡೆದು ನಂತರ ‘ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ’ ಎಂಬಂತೆ ಈಗ ಮೂರೂವರೆ ವರ್ಷಗಳ ಹಿಂದೆ ಭಾರತಕ್ಕೆ ಮರಳಿ ನನ್ನ ತಂದೆತಾಯಿಗಳೊಡನೆ ಮೈಸೂರಿನಲ್ಲಿ ನೆಲೆಸಿದ್ದೇನೆ.

** ನಿಮಗೆ ಸಾಹಿತ್ಯದ ಬಗ್ಗೆ ಒಲವು ಮೂಡಿದ್ದು ಹೇಗೆ ಮತ್ತು ಏಕೆ?*

ನನಗೆ ಬಾಲ್ಯದಿಂದಲೂ ಸ್ವಲ್ಪ ಚಂದಮಾಮ, ಟಿಂಕಲ ಮೊದಲಾದ ಕಥೆ ಹಾಗೂ ಕಾಮಿಕ್ಸ್ ಓದೋ ಹುಚ್ಚು. ನಾನು ನನ್ನ ತಮ್ಮ ಇಬ್ರೂ ಒಂದೇ ಪುಸ್ತಕಕ್ಕೆ ಜಗಳವಾಡಿಕೊಂಡೇ ಬೆಳೆದದ್ದು. ನಮ್ಮ ತಾಯಿ ಮುಂಚೆ ಮನೆಯಲ್ಲಿ ಮಕ್ಕಳ ಲೈಬ್ರರಿಯೊಂದನ್ನು ನಡೆಸುತ್ತಿದ್ದರು. ಅಲ್ಲಿಂದ ಓದೋ ಚಟ ಶುರು. ನಮ್ಮ ತಂದೆ, ತಾಯಿ ಇಬ್ಬರಿಗೂ ಸಾಹಿತ್ಯದ ಗೀಳು ಇತ್ತು. ನಮ್ಮ ತಾಯಿ ಕೂಡ ಸಂಸ್ಕೃತ ಶಿಕ್ಷಕಿ ಹಾಗೂ ನಮ್ಮ ತಂದೆ ಹವ್ಯಾಸೀ ಬರಹಗಾರರು. ಹಾಗಾಗಿ ನಮಗೆ ಅದೇ ಪ್ರೋತ್ಸಾಹ. ಮುಂದೆ ಕಾಲೇಜು ದಿನಗಳಲ್ಲಿ ಅದೇ ಬರೆಯುವ ಹವ್ಯಾಸಕ್ಕೆ ನಾಂದಿಯಾಯಿತು. ನಾನು ಮತ್ತು ನನ್ನ ತಮ್ಮ ಇಬ್ಬರೂ ಬರವಣಿಗೆಯನ್ನು ರೂಢಿಸಿಕೊಳ್ಳುತ್ತಾ ಹೋದೆವು. ಆದರೆ ಆಗ ಮುಂದೊಂದು ದಿವಸ ಅದೇ ನನ್ನ ವೃತ್ತಿಯಾಗುತ್ತದೆಂದು ನಾನು ಎಣಿಸಿರಲಿಲ್ಲ.

** ನಿಮ್ಮ ಸದ್ಯದ ವೃತ್ತಿಯೇನು? ನೀವು ಈವರೆಗೂ ಏನೇನು ಬರೆದಿದ್ದೀರಿ. ನೀವು ಅನುವಾದಕರೆಂದೂ ಕೇಳಿಪಟ್ಟಿದ್ದೇನೆ. ಏನೇನು ಅನುವಾದ ಮಾಡಿದ್ದೀರಿ?*

ಸದ್ಯಕ್ಕೆ ಮೈಸೂರು ಮೂಲದ ಜಾಹೀರಾತು ಸಂಸ್ಥೆಯೊಂದರಲ್ಲಿ ಕಾಪಿ ರೈಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾನು ಕಾಲೇಜು ದಿನಗಳಲ್ಲಿ ಹವ್ಯಾಸಕ್ಕೆಂದು ಬರೆಯುತ್ತಿದ್ದ ಕಾಲದಲ್ಲಿ ನಮ್ಮಪ್ಪ ಅಮ್ಮನ ಪ್ರೋತ್ಸಾಹದಿಂದ ನನ್ನ ತಮ್ಮನ ಮೊಟ್ಟಮೊದಲ ಕವನಸಂಕಲನವಾದ ‘pun ನೀರ್’ ಎಂಬ ಪುಸ್ತಕವನ್ನು ಪ್ರಕಟಿಸಿದ್ದೆವು. ನಂತರದ ದಿನಗಳಲ್ಲಿ ಕೇವಲ ಹವ್ಯಾಸಕ್ಕಷ್ಟೇ ಸೀಮಿತವಾಗಿದ್ದ ನನ್ನ ಬರವಣಿಗೆಯನ್ನು ವೃತ್ತಿಯಾಗಿ ಮಾಡಿಕೊಂಡದ್ದು ನಾನು ಅಮೆರಿಕದಿಂದ ಭಾರತಕ್ಕೆ ಮರಳಿ ಬಂದಮೇಲೆ. ಉದಯವಾಣಿ, ವಿಜಯ ಕರ್ನಾಟಕದಲ್ಲಿ ಈವರೆಗೆ ನನ್ನ ಕೆಲವು ಸಣ್ಣ ಕಥೆಗಳು ಮತ್ತು ಲೇಖನಗಳು ಪ್ರಕಟವಾಗಿವೆ. ಅನುವಾದಕಿಯಾಗಿ ನಾನು ವೃತ್ತಿ ಶುರುಮಾಡಿದ್ದು ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಬ್ರೋಷರುಗಳು ಮತ್ತು ವೈದ್ಯಕೀಯ ಮಾಹಿತಿಯನ್ನು ಅನುವಾದ ಮಾಡುವುದರ ಮೂಲಕ. ಜೊತೆಗೆ ಲೀಗಲ್ ಡಾಕ್ಯುಮೆಂಟ್ಸ್ ಅನುವಾದ ಸಹ ಮಾಡುತ್ತೇನೆ. ಕಳೆದ ವರ್ಷ ಬೆಂಗಳೂರಿನ ರಂಗರಾಜ ಚಕ್ರವರ್ತಿಯವರ ‘ಕಾಫಿ ಬ್ರೇಕ್’ ಪ್ರಬಂಧ ಸಂಕಲನವನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದೇನೆ ಮತ್ತು ಆ ಪುಸ್ತಕವನ್ನು ‘ವಟಕುಟೀರ’ ಸಂಸ್ಥೆ ಪ್ರಕಟಿಸಿರುತ್ತದೆ. ಹಾಗೆಯೇ, ತಮಿಳಿನಿಂದ ಕನ್ನಡಕ್ಕೆ ಕೆಲವು ಚಲನಚಿತ್ರಗಳ ಸ್ಕ್ರಿಪ್ಟ್ ಅನುವಾದ ಮತ್ತು ಇತರ ಅನುವಾದಗಳನ್ನೂ ಮಾಡಿದ್ದೇನೆ. ಜೊತೆಗೆ ಕೆಲವು ಕನ್ನಡ ಚಲನಚಿತ್ರಗಳಿಗೆ ಇಂಗ್ಲಿಷ್ ಸಬ್ ಟೈಟಲ್‌ಗಳನ್ನೂ ಮಾಡಿದ್ದೇನೆ. ಕನ್ನಡದಿಂದ ಇಂಗ್ಲಿಷಿಗೆ, ಇಂಗ್ಲಿಷಿನಿಂದ ಕನ್ನಡಕ್ಕೆ, ಹಿಂದಿಯಿಂದ ಕನ್ನಡಕ್ಕೆ, ಸಂಸ್ಕೃತದಿಂದ ಕನ್ನಡಕ್ಕೆ ಹಾಗೂ ತಮಿಳಿನಿಂದ ಕನ್ನಡಕ್ಕೆ ಅನುವಾದಿಸಬಲ್ಲೆ.

** ಈ ಸಬ್ ಟೈಟಲ್ ಕಡೆಗೆ ಆಸಕ್ತಿ ಹೇಗೆ? ಈವರೆಗೆ ಯಾವ ಯಾವ ಚಿತ್ರಗಳಿಗೆ ಸಬ್ ಟೈಟಲ್ ಮಾಡಿದ್ದೀರಿ?*

ಈ ಸಬ್ ಟೈಟಲ್ ಅವಕಾಶ ಮೊಟ್ಟಮೊದಲು ಬಂದದ್ದು ನಾನು ಅಮೆರಿಕದಲ್ಲಿ ಇದ್ದಾಗ ಸಂದೀಪ್ ಮಲಾನಿ ಅವರ ‘ಜೋ ಜೋ ಲಾಲಿ’ ಎಂಬ ಕಿರು ಚಿತ್ರಕ್ಕೆ. ಒಂದು ವಿಭಿನ್ನವಾದ ಅನುಭವ. ಮಾಡೇಬಿಡೋಣವೆಂದು ಮಾಡಿಕೊಟ್ಟದ್ದು. ನಂತರದ ದಿನಗಳಲ್ಲಿ ಗುರುಪ್ರಸಾದ್ ಅವರ ‘ಮಠ’ ತಯಾರಿಕಾ ಹಂತದಲ್ಲಿದ್ದ ಕನ್ನಡದ ಮೊಟ್ಟಮೊದಲ ಅನಿಮೇಷನ್ ಚಿತ್ರ ‘ಇದು ಬೊಂಬೆಯಾಟವಯ್ಯಾ’ ಚಿತ್ರಕ್ಕೆ ಇಂಗ್ಲಿಷ್ ಸಬ್ ಟೈಟಲ್ ಮಾಡುವ ಅವಕಾಶ ಸಿಕ್ಕಿತು. ಅದಾದನಂತರ ಕಳೆದ ವರ್ಷ ಬಿಡುಗಡೆಯಾದ ಅದೇ ಗುರುಪ್ರಸಾದ್ ನಿರ್ದೇಶನದ ‘ಡೈರೆಕ್ಟರ್ಸ್ ಸ್ಪೆಷಲ್’ ಚಿತ್ರಕ್ಕೂ ಇಂಗ್ಲಿಷ್ ಸಬ್ ಟೈಟಲ್ ಮಾಡಿದ್ದೇನೆ.

** ಈ ಸಬ್ ಟೈಟಲ್ ಮಾಡುವಾಗಿನ ಸವಾಲುಗಳು ಹೇಗಿದ್ದವು?*

ಹೇಳಬೇಕೆಂದರೆ ಮೂರೂ ಚಿತ್ರಗಳು ಬೇರೆ ಬೇರೆ ಪ್ರಕಾರದ ಚಿತ್ರಗಳು. ಎಲ್ಲವೂ ಭಿನ್ನ ಭಿನ್ನ ಅನುಭವ ಕೊಟ್ಟಂಥವು. ಒಂದು ಕಿರುಚಿತ್ರಕ್ಕೆ ಮಾಡುವುದಕ್ಕೂ, ಅನಿಮೇಷನ್‌ಗೆ ಮಾಡುವುದಕ್ಕೂ ಮತ್ತು ರೆಗ್ಯುಲರ್ ಫೀಚರ್ ಫಿಲಮ್‌ಗೆ ಮಾಡುವುದಕ್ಕೂ ಅಜಗಜಾಂತರ ವ್ಯತ್ಯಾಸಗಳಿದ್ದವು. ಮುಖ್ಯವಾಗಿ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ, ಅದರಲ್ಲೂ ಒಂದು ವಿದೇಶೀ ಭಾಷೆಗೆ ನಮ್ಮ ಭಾಷೆಯ ಸೊಗಡನ್ನು ದೃಶ್ಯಕ್ಕೆ ತಕ್ಕಂತೆ ಅನುವಾದಿಸುವುದು ನಿಜಕ್ಕೂ ಸವಾಲಿನ ಕೆಲಸವೇ. ಪಾತ್ರದ ಧ್ವನಿಗೆ ಮತ್ತು ನಿರ್ದೇಶಕನ ಮೂಲ ಆಶಯಕ್ಕೆ ಭಂಗ ಬಾರದಂತೆ ಅನುವಾದಿಸುವ ಜವಾಬ್ದಾರಿ ಸಬ್ ಟೈಟಲ್ ಮಾಡುವವರ ಮೇಲಿರುತ್ತದೆ. ಆ ಒಂದು ಅನುಭವ ನಿಜಕ್ಕೂ ನನ್ನೊಳಗಿನ ಅನುವಾದದ ಆಯಾಮವನ್ನು ಪೋಷಿಸಿದಂತವು.

** ಅನುವಾದದ ಹಲವು ಪ್ರಕಾರಗಳನ್ನು ನಿಭಾಯಿಸಿದ್ದೀರಿ. ಅದರ ಬಗ್ಗೆ ನಿಮ್ಮ ಅಭಿಪ್ರಾಯ?*

ಒಂದೊಂದು ಮಾಧ್ಯಮಕ್ಕೂ ತನ್ನದೇ ಆದ ಅಂತರ್ಗತ ಭಾವವೊಂದಿರುತ್ತದೆ. ಆ ಭಾವವನ್ನರಿತು ಅನುವಾದ ಮಾಡುವುದಕ್ಕೆ ಆಯಾ ಮನಸ್ಥಿತಿಗೆ ಒಗ್ಗಿಕೊಂಡಾಗಲಷ್ಟೇ ಅದು ಸಾಧ್ಯವೆಂಬುದು ನನ್ನ ಅಭಿಪ್ರಾಯ. ವೈದ್ಯಕೀಯ, ಕಾನೂನು ಪತ್ರಗಳು ಮುಂತಾದವುಗಳನ್ನು ಅನುವಾದಿಸುವಾಗ ಪಾರಿಭಾಷಿಕ ಶಬ್ದಗಳ ಬಗ್ಗೆ ಸರಿಯಾದ ಮಾಹಿತಿ ಹೊಂದಬೇಕಾಗಿರುತ್ತದೆ. ಕಾವ್ಯಗಳನ್ನು, ಕಥೆಗಳನ್ನು ಅನುವಾದಿಸುವಾಗ ಶಬ್ದಗಳಿಗಿಂತ ಭಾವ ಮುಖ್ಯವಾಗುತ್ತದೆ. ಇನ್ನು ಚಲನಚಿತ್ರದ ವಿಚಾರದಲ್ಲಿ ದೃಶ್ಯ ಮಾಧ್ಯಮದ ಬಗ್ಗೆ ಪರಿಕಲ್ಪನೆ ಬೇಕಾಗುತ್ತದೆ. ಹೀಗೆ ಪ್ರತಿಯೊಂದೂ ಬೇರೆ ಬೇರೆ ಆಯಾಮಗಳು ಮತ್ತು ಮಜಲುಗಳು. ಅವು ನೀಡುವ ಅನುಭವವೂ ಅಷ್ಟೇ ವಿಭಿನ್ನ. ಒಬ್ಬ ಅನುವಾದಕ/ಕಿ ಸಮರ್ಥರಾಗುವುದಕ್ಕೆ ಈ ರೀತಿಯ ವಿಭಿನ್ನ ಮಜಲುಗಳು ಅತ್ಯವಶ್ಯ ಎಂಬುದು ನನ್ನ ಅಭಿಪ್ರಾಯ.

** ನೀವು ಹಾಡುಗಾರ್ತಿ ಮತ್ತು ಕಾರ್ಯಕ್ರಮ ನಿರೂಪಕಿ ಕೂಡ... ಅದರ ಬಗ್ಗೆ ಹೇಳಿ.*

ನಾನು ಬಾಲ್ಯದಲ್ಲಿ ಕೆಲಕಾಲ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡುತ್ತಿದ್ದೆ. ನಂತರ ಸಿ.ಅಶ್ವತ್ಥರ ಕೆಲವು ಭಾವಗೀತೆ ಶಿಬಿರಗಳಲ್ಲಿ ಲಘುಸಂಗೀತ ಪ್ರಕಾರವನ್ನು ಅಭ್ಯಸಿಸಿದ್ದೆ. ನಂತರ ಕಾಲೇಜು ದಿನಗಳಲ್ಲಿ ಕೆಲಕಾಲ ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತವನ್ನು ವೀರಭದ್ರಯ್ಯ ಹಿರೇಮಠ್ರ ಬಳಿ ಮೈಸೂರಿನಲ್ಲಿ ಅಭ್ಯಸಿಸಿದ್ದೆ. ನಂತರ ಅಮೆರಿಕೆಯಲ್ಲಿದ್ದಾಗ ಅಲ್ಲಿ ನಡೆಯುತ್ತಿದ್ದ ಕನ್ನಡದ ಸಮಾವೇಶಗಳಲ್ಲಿ ಹಾಡುತ್ತಿದ್ದೆ ಮತ್ತು ಕಾರ್ಯಕ್ರಮ ನಿರೂಪಿಸುತ್ತಿದ್ದೆ. 2010ರಲ್ಲಿ ನಡೆದ ‘ಅಕ್ಕ’ ಸಮ್ಮೇಳನದಲ್ಲಿ ನಿರೂಪಕಿಯಾಗಿ ಕಾರ್ಯ ನಿರ್ವಹಿಸಿದ್ದೆ. ಸಂಗೀತ ನನ್ನ ನೆಚ್ಚಿನ ಹವ್ಯಾಸ.

** ನಿಮ್ಮ ಮೇಲೆ ಪ್ರಭಾವ ಬೀರಿರುವ ಸಾಹಿತಿಗಳು ಯಾರು?*

ಪ್ರಭಾವ ಎಂದಲ್ಲದಿದ್ದರೂ ನಾನು ಬಹಳವಾಗಿ ಮೆಚ್ಚುವ ಸಾಹಿತಿಗಳು ಭೈರಪ್ಪನವರು. ನಾನು ಬಹಳವಾಗಿ ಮೆಚ್ಚುವ ಸಾಹಿತ್ಯ ಪ್ರಕಾರವಾದ ಸಣ್ಣ ಕಥಾಪ್ರಕಾರದಲ್ಲಿ ನನ್ನ ಮೇಲೆ ಪ್ರಭಾವ ಬೀರಿರುವ ಲೇಖಕರು ಓ ಹೆನ್ರಿ, ಆಸ್ಕರ್ ವೈಲ್ಡ್, ಜಯಂತ್ ಕಾಯ್ಕಿಣಿ, ವಸುಧೇಂದ್ರ, ನಾಗತಿಹಳ್ಳಿ ಚಂದ್ರಶೇಖರ್ ಮುಂತಾದವರು. ಇದರ ಜೊತೆಗೆ ನನ್ನ ಸಾರ್ವಕಾಲಿಕ ಮೆಚ್ಚಿನ ಲೇಖಕರು ಮಿಲನ್ ಕುಂದೇರಾ, ಆರ್.ಕೆ.ನಾರಾಯಣ್ ಹಾಗೂ ತೇಜಸ್ವಿ. ಭಾಷೆಯ ವಿಚಾರದಲ್ಲಿ ನನ್ನ ಮೇಲೆ ಬಹಳವಾಗಿ ಪ್ರಭಾವ ಬೀರಿ ಚಿಂತನೆಗೆ ಹಚ್ಚುವುದೆಂದರೆ ಸಾರ್ವಕಾಲಿಕವಾದ ನಮ್ಮ ಪ್ರಾಚೀನ ಕಾವ್ಯಗಳು..

** ನಿಮ್ಮ ಮುಂದಿನ ಯೋಜನೆಗಳು?*

ಸದ್ಯದಲ್ಲೇ ನನ್ನ ಕೆಲವು ಪ್ರಕಟಿತ ಮತ್ತು ಅಪ್ರಕಟಿತ ಕಥೆಗಳ ಕಥಾಸಂಕಲನವೊಂದನ್ನು ಹೊರತರುವ ಆಶಯವಿದೆ. ನನ್ನ ಒಂದಷ್ಟು ನೆಚ್ಚಿನ ಬರಹಗಾರರ ಸಣ್ಣ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿ ಹೊರತರುವ ಆಸೆ. ಹಾಗೆಯೇ ಸಂಸ್ಕೃತ ಭಾಷೆಯ ಒಂದಿಷ್ಟು ಕೃತಿಗಳನ್ನೂ ಕನ್ನಡಕ್ಕೆ ತರುವ ಆಸೆಯಿದೆ. ಜೊತೆಗೆ ಹಾಡುಗಾರಿಕೆಯನ್ನೂ ಕ್ರಮವಾಗಿ ಮುಂದುವರಿಸುವತ್ತ ಯೋಚಿಸಬೇಕಿದೆ. ಆ ನಿಟ್ಟಿನಲ್ಲಿ ಕಾರ್ಯನಿರತಳಾಗಿದ್ದೇನೆ.



ಸಂದರ್ಶಕ: ಹೃದಯಶಿವ

ಕೆಲಸಗಳನ್ನು ಅಧಿಕಾರಿಗಳೇ ಮುಗಿಸಬೇಕಾಗುತ್ತದೆ. ಬ್ಯಾಂಕುಗಳು ಸಿಬಿಎಸ್ ಆದ ಮೇಲೆ ಕ್ಲಾರ್ಕುಗಳಿಗೆ ಎಲ್ಲಾ ತರದ ಕಂಪ್ಯೂಟರ್ ಜ್ಞಾನ ಬೇಕಾಗುತ್ತದೆ. ಆದರೆ ಗುಜರಾತಿ ಕ್ಲಾರ್ಕುಗಳಿಗೆ ಎಷ್ಟು ಕಲಿಸಿದರೂ ಸಿಬಿಎಸ್ ಜ್ಞಾನ ಬರುವುದಿಲ್ಲ. ಆದರೆ ಆಫೀಸಿನಲ್ಲಿ ಕುಳಿತೇ ಮೊಬೈಲ್ ಮೂಲಕ ಆನ್-ಲೈನ್ ಷೇರುಪೇಟೆಯ ಟ್ರೇಡಿಂಗ್ ಮಾಡುವುದನ್ನು ಮಾತ್ರ ತಕ್ಷಣ ಕಲಿತುಕೊಳ್ಳುತ್ತಾರೆ.

ಅಡ್ವಾನಿಯವರು ಸ್ವಿಸ್ ಬ್ಯಾಂಕಿನಲ್ಲಿ ಇರುವ ಭಾರತೀಯರ ಕಾಳಧನ ಹಿಂದೆ ತರುವ ಬಗ್ಗೆ ಹಠ ಮಾಡಿದ ಮೇಲೆ ಎಲ್ಲ ಗುಜರಾತಿ ಉದ್ಯಮಿಗಳು ಅಡ್ವಾನಿಯ ಹೆಸರು ಎತ್ತಿದರೆ ಸಾಕು ಉರಿದುಬೀಳುತ್ತಾರೆ. ಗುಜರಾತಿನಲ್ಲಿ ಲಂಚವಿಲ್ಲದ ಸರಕಾರಿ ಕಚೇರಿಗಳೇ ಇಲ್ಲ. ಗುಜರಾತ್ ಮೂಲದ ರಾಷ್ಟ್ರೀಕೃತ ಸೆಂಟ್ರಲ್ ಬ್ಯಾಂಕ್, ಬರೋಡಾ ಬ್ಯಾಂಕುಗಳಲ್ಲೂ ವಿಪರೀತ ಭ್ರಷ್ಟಾಚಾರವಿದೆ. ಪೋಸ್ಟ್ ಆಫೀಸಿನಲ್ಲೂ ಲಂಚ ಇರುವ ಏಕೈಕ ರಾಜ್ಯವೆಂದರೆ ಗುಜರಾತ್ ಮಾತ್ರ. ಇದುವೇ ಗುಜರಾತ್ ಮಾಡಲ್! ಇಂತಹ ಅಪ್ಪಟ ವ್ಯಾಪಾರಿ ಬುದ್ಧಿಯ ಗುಜರಾತಿಗಳ ಕೈಗೆ ಮೋದಿಯ ಮುಖಾಂತರ ಇಡೀ ಭಾರತ ಸಿಕ್ಕರೆ ಏನಾಗಬಹುದು ಊಹಿಸಿ!

- ಅಭಿಷೇಕ್ ಎ. ಪಟವಾಳ್, ಸುಳ್ಯ

ನಾರಾಯಣಾಚಾರ್ಯನದ್ದು ಮದ್ದಿಲ್ಲದ ಕಾಯಿಲೆ

ಅದೇನು ದುರಂತವೋ? ವೈಜ್ಞಾನಿಕವಾಗಿ ದಿನದಿನಕ್ಕೆ ನಾವು ಮುಂದುವರೆಯುತ್ತಿದ್ದರೂ ತಮ್ಮ ಹಳೆಯ ಚಾಳಿಗಳಿಂದ ಕಳಚಿಕೊಳ್ಳಲು ಇಷ್ಟಪಡದ ಕೆಲ ಜಿಗುಟು ಮನಸ್ಸುಗಳು ಮೌಢ್ಯಗಳನ್ನು ಸದಾ ಜೀವಂತವಿರಿಸಿಕೊಳ್ಳಲು ಪಣತೊಟ್ಟಂತೆ ಕಾರ್ಯಪ್ರವೃತ್ತರಾಗುತ್ತಲೇ ಇದ್ದಾರೆ. ಜೀನ್, ಕ್ರೋಮೋಸೋಮ್ ಇತ್ಯಾದಿಗಳೆಲ್ಲ ಇಂದಿನ ವೈಜ್ಞಾನಿಕ ಯುಗದಲ್ಲಿ ಮಾಮೂಲಿ ಶಬ್ದಗಳೆನಿಸಿಬಿಟ್ಟಿವೆ. ವಿಶ್ವದಲ್ಲಿ ಪಸರಿಸಿದ ಮಾನವರೆಲ್ಲರ ಮೂಲ ಒಂದೇ ಎನ್ನುವುದು ಯಾವತ್ತೋ ಸಾಬೀತಾಗಿ ಹೋದ ಸಂಗತಿಯಾದರೂ ಇದನ್ನು ಒಪ್ಪುವ ಮನಸ್ಥಿತಿ ಕೆಲವರಿಗಿದ್ದಂತಿಲ್ಲ. ಅಂತವರಲ್ಲಿ ಈ ‘ಬ್ರಾಹ್ಮಣ್ಯ’ದ ನಂಜನ್ನು ಮೈತುಂಬಾ ಏರಿಸಿಕೊಂಡಿರುವ ನಾರಾಯಣಾಚಾರ್ಯನೂ ಒಬ್ಬ.

ಎಲ್ಲೋ ಧಾರವಾಡದ ರೈಲುಹಳಿಗಳ ಮಧ್ಯೆ ತನ್ನಷ್ಟಕ್ಕೇ ತಾನು ಜಾತ್ಯತೀತರನ್ನು ಬೈದುಕೊಂಡಿರುತ್ತಿದ್ದ ಈತನನ್ನು ಕರೆತಂದು ಪತ್ರಿಕಾರಂಗಕ್ಕೆ ಪರಿಚಯಿಸಿದ್ದು ಎಸ್.ಕೆ.ಗುಲ್ವಾಡಿ ಸಂತೋಷಕುಮಾರ. ತರಂಗದ ಬಳಿಕ ಕರ್ಮವೀರದಲ್ಲೂ ಈತನ ‘ಸಾತ್ವಿಕನಿಗೆ’ ಲೇಖನ ಮಾಲೆ ಮುಂದುವರೆದಿತ್ತು. ಕರ್ಮವೀರದ ಇಂತಹ ಒಂದು ಲೇಖನದಲ್ಲಿ ಶಂಬೂಕನನ್ನು ಶ್ರೀರಾಮ ಕೊಂದಿದ್ದು ಅತ್ಯಂತ ನ್ಯಾಯಸಮ್ಮತವೇ ಆಗಿತ್ತು ಎಂದು ಈ ಪ್ರಾಣಿ ತನ್ನ ಮಾಮೂಲಿ ಶೈಲಿಯ ಜಿಗುಟು ವಿತಂಡವಾದವನ್ನು ಮಂಡಿಸಿ ಬರೆದಿತ್ತು. ಆ ಬಳಿಕ ಹೊಸದಿಗಂತ - ಕನ್ನಡಪ್ರಭದಂತಹ ಸನಾತನವಾಣಿ ಗಳಲ್ಲೂ ಈತನ ಬ್ರಾಹ್ಮಣ ಭಾಜಾಭಜಂತ್ರಿ ಜೋರಾಗಿ ನಡೆದಿತ್ತು.

ಈತನ ಬ್ರಾಹ್ಮಣ ಶ್ರೇಷ್ಠತೆಯ ವ್ಯಸನ ಎಂಥಾ ಅತಿರೇಕದ್ದೆಂದರೆ ಈತನ ಲೇಖನವನ್ನು ಓದುವ ಸಹೃದಯಿ ಬ್ರಾಹ್ಮಣರೇ ಈ ಅತಿರೇಕಕ್ಕೆ ಮುಜುಗರಪಟ್ಟು ಈತನನ್ನು ಬೈದುಕೊಳ್ಳುವುದಿದೆ. ಬ್ರಾಹ್ಮಣರೇ ಶ್ರೇಷ್ಠರು, ಇತರರನ್ನು ಬ್ರಾಹ್ಮಣರ ಮಟ್ಟಕ್ಕೆ ಯಾವತ್ತಿಗೂ ಕಲ್ಪಿಸಿಕೊಳ್ಳಲಾಗದು ಎಂಬುದೇ ಈತನ ಮೂಲ ಚಿಂತನೆ. ಈ ಸಿದ್ಧಾಂತವೇ ಈತನ ವಿವಾದಿತ ‘ವಾಲ್ಮೀಕಿ ಯಾರು?’ ಎಂಬಂತಹ ಕೃತಿಗಳಿಗೆ ಪ್ರೇರಣೆ.

ಶಿವರಾಮ ಕಾರಂತ ಹಾಗು ಕೋಟ ಲಕ್ಷ್ಮಿನಾರಾಯಣ ಕಾರಂತರೆಂಬ ಸಮಾಜಮುಖಿ ಚಿಂತಕರ ಸಹೋದರ ಡಿ. ವಾಸುದೇವ ಕಾರಂತ (‘ದೇವರು ಯಾಕೆ?’ ಕೃತಿಯ ಲೇಖಕ) ರಿಂದ ಹಿಡಿದು ಈ ನಾರಾಯಣಾಚಾರ್ಯನವರೆಗೆ ಇಂತಹ ‘ಬ್ರಾಹ್ಮಣ್ಯದ ನಶೆ’ಯಲ್ಲಿರುವವರು ಯಾವತ್ತಿಗೂ ಇದ್ದೇ ಇರುತ್ತಾರೆ. ಇವರಿಗೆಲ್ಲ ಭಾರತದ ಪ್ರಥಮ ಪ್ರಧಾನಿ ಸ್ವಯಂ ಕಾಶ್ಮೀರೀ ಪಂಡಿತ್ ಕುಟುಂಬಕ್ಕೆ ಸೇರಿದ್ದರೂ ಸೆಕ್ಯುಲರ್ ತತ್ವಕ್ಕೆ ಹೆಚ್ಚು ಮಹತ್ವ ನೀಡಿದ ನೆಹರೂರವರನ್ನು ಕಂಡರೆ ಇನ್ನಿಲ್ಲದ ಆಕ್ರೋಶ. (ಸೆಕ್ಯುಲರ್ ಹೆಸರಲ್ಲಿ ಸನಾತನ ಪರಂಪರೆಗೆ ಕೊಡಲಿ ಪೆಟ್ಟು ಕೊಟ್ಟು ಸಾವಿರಾರು ವರ್ಷಗಳ ಕಾಲ ಬೆವರು ಸುರಿಸದೇ ಬಿಟ್ಟಿಯಾಗಿ ಸಿಗುತ್ತಿದ್ದ ಸುಖ ಸಮ್ಮಾನಗಳಿಗೆಲ್ಲ ಅಡ್ಡಗಾಲಿಟ್ಟವನೆಂಬ ಕೋಪ ಇವರಿಗೆ)

ವರ್ಷಗಳ ಹಿಂದೆ ಕರಾವಳಿಯಲ್ಲಿ (ಮಂಗಳೂರು ಕುಂದಾಪುರ) ನಡೆದ ವಿಪ್ರ ಸಮ್ಮೇಳನದಲ್ಲಿ ಕೆ.ಪಿ.ಪುತ್ತೂರಾಯ ಎನ್ನುವ ನಾರಾಯಣಾಚಾರ್ಯನಂತದ್ದೇ ಮನೋರೋಗವುಳ್ಳ ಆಸಾಮಿಯೊಬ್ಬ ಬ್ರಾಹ್ಮಣೇತರರನ್ನು ಅತ್ಯಂತ ಕೆಟ್ಟದ್ದಾಗಿ ನೋಡುವ ಇಂಥದ್ದೇ ಕೀಳು ಅಭಿಪ್ರಾಯಗಳನ್ನು ಬಹಿರಂಗ(ಲೋಕಲ್ ಟಿವಿಯಲ್ಲಿ ಲೈವ್ ಇತ್ತು)ವಾಗಿ ತನ್ನ ಭಾಷಣದಲ್ಲಿ ಹೇಳಿದ್ದರೂ ಯಾರೂ ಈ ಬಗ್ಗೆ ಕುಟಿಪಿಟಿಕ್ ಎಂದಿರಲಿಲ್ಲ. ಇಂತಹ ಕಾರಣಕ್ಕೇ ಇವರು ‘ವಾಲ್ಮೀಕಿ ಯಾರು?’ ಎಂದು ಇವತ್ತು ಪ್ರಶ್ನಿಸಿದರೆ ನಾಳೆ ಮತ್ತೊಬ್ಬ ‘ಅಂಬೇಡ್ಕರ್ ಯಾರು?’ ಎಂಬ ಬೃಹತ್ ಗ್ರಂಥ ಬರೆದರೂ ಅಚ್ಚರಿಯೇನೂ ಇರದು.

- ಶಶಿ ಪುತ್ತೂರು, ದಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 23-04-2014 RNI No. KARKAN2005/14648

ಛಾಯಾಗ್ರಾಹಕ ವಿ.ಕೆ.ಮೂರ್ತಿ ಇನ್ನಿಲ್ಲ



ದಾದಾ ಸಾಹೇಬ್ ಫಾಲ್ಕೆ ಪುರಸ್ಕೃತ ವಿಜೇತ ಛಾಯಾಗ್ರಾಹಕ ವಿ.ಕೆ.ಮೂರ್ತಿ ತಮ್ಮ 91ನೇ ವಯಸಿನಲ್ಲಿ ತೀರಿಕೊಂಡಿದ್ದಾರೆ. ಮೈಸೂರಿನಲ್ಲಿ ಜನಿಸಿದ ವಿ.ಕೆ.ಮೂರ್ತಿ ಜಯಚಾಮ ರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸಿನಿಮಾಟೋಗ್ರಫಿಯಲ್ಲಿ ಡಿಪ್ಲೊಮಾ ಮಾಡಿ ನಂತರ ಉದ್ಯೋಗ ಅರಸಿಕೊಂಡು ಮುಂಬೈಗೆ ಹೊರಟರು. ಒಂದಿಷ್ಟು ಕಾಲ ವಿವಿಧ ಛಾಯಾಗ್ರಾಹಕರ ಜೊತೆ ಸಹಾಯಕ ಛಾಯಾಗ್ರಾಹಕರಾಗಿ ಅನುಭವ ಪಡೆದು ಆನಂತರ ಗುರುದತ್ ಎಂಬ ಕ್ಯಾಮೆರಾ ಮ್ಯಾನ್ ಕಂ ಡೈರೆಕ್ಟರ್ ಜೊತೆಗೂಡಿ ಅನೇಕ ಸಿನಿಮಾಗಳಲ್ಲಿ ಕೆಲಸ ಮಾಡಿದರು. ಹಾಗೇನೆ, ಇತರ ನಿರ್ದೇಶಕರ ಜೊತೆ ಸಾಕಷ್ಟು ಚಿತ್ರಗಳಿಗೆ ಛಾಯಾಗ್ರಾಹಕರಾಗಿ ದುಡಿದು ಭಾರತದ ಸರ್ವಶ್ರೇಷ್ಠ ಕ್ಯಾಮೆರಾಮ್ಯಾನ್‌ಗಳಲ್ಲಿ ಒಬ್ಬರೆನಿಸಿಕೊಂಡರು.

ಮೂರ್ತಿ ಅವರ ಛಾಯಾಗ್ರಹಣದ ಕೈ ಚಳಕ ಇರುವ ಕೆಲವು ಚಿತ್ರಗಳೆಂದರೆ 'ಜಾಲ್', 'ಪ್ಯಾಸಾ', 'ಕಾಗಜ್ ಕೆ ಫೂಲ್', 'ಸಾಹಿಬ್ ಬಿವಿ ಔರ್ ಗುಲಾಂ', 'ಜಿದ್ದಿ', 'ಲವ್ ಇನ್ ಟೋಕಿಯ', 'ಸೂರಜ್', 'ಘುಂಗ್ರು', 'ನಾಸ್ತಿಕ್', 'ದೀದರ್' ಇತ್ಯಾದಿ. ಸಿನಿಮಾಗಳ ಜೊತೆಗೆ ಇವರು ಅನೇಕ ಜನಪ್ರಿಯ ಧಾರಾವಾಹಿಗಳಿಗೂ ಕ್ಯಾಮರಾ ವರ್ಕ್ ಮಾಡಿದ್ದಾರೆ. 'ಭಾರತ್ ಏಕ್ ಖೋಜ್' ಅವುಗಳ ಪೈಕಿ ಪ್ರಮುಖ ಧಾರಾವಾಹಿ. ಇನ್ನು ಕನ್ನಡದ ಮಟ್ಟಿಗೆ ಮೂರ್ತಿ ಛಾಯಾಗ್ರಾಹಕರಾಗಿ ಕೆಲಸ ಮಾಡಿದ ಸಿನಿಮಾ ಎಂದರೆ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ಹೂವುಹಣ್ಣು' ಚಿತ್ರ. ಫಿಲಂ ಫೇರ್ ಅವಾರ್ಡ್ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿರುವ ಇವರ ಪ್ರಭಾವದಿಂದ ಅದೆಷ್ಟೋ ಕ್ಯಾಮೆರಾಮ್ಯಾನ್‌ಗಳು ದೇಶದಾದ್ಯಂತ ಹುಟ್ಟಿಕೊಂಡಿದ್ದಾರೆ ಎಂದರೆ ತಪ್ಪಾಗಲಾರದು.

ಬಿ.ಸಿ.ಪಾಟೀಲ್ ಈಗ ತಿಪ್ಪೇರುದ್ರಸ್ವಾಮಿ

ಐತಿಹಾಸಿಕ ಪುರುಷ ನಾಯಕನಹಟ್ಟಿ ಶ್ರೀ ತಿಪ್ಪೇರುದ್ರಸ್ವಾಮಿಯವರನ್ನು ಕುರಿತಾದ ಸಿನಿಮಾವೊಂದು 'ಶ್ರೀ ಗುರು ತಿಪ್ಪೇರುದ್ರಸ್ವಾಮಿ' ಎಂಬ ಟೈಟಲ್ ಇಟ್ಟುಕೊಂಡು ಶುರುವಾಗಿದೆ. ತಿಪ್ಪೇರುದ್ರ ಸ್ವಾಮಿ ಪಾತ್ರದಲ್ಲಿ ಬಿ.ಸಿ.ಪಾಟೀಲ್ ನಟಿಸುತ್ತಿದ್ದಾರೆ. ತಿಪ್ಪೇರುದ್ರಸ್ವಾಮಿ ತರಹದ ದಂತಕತೆಯ ಪಾತ್ರದಲ್ಲಿ ನಟಿಸುತ್ತಿರುವುದು ಅವರಿಗೆ ನಿಜಕ್ಕೂ ಹೆಮ್ಮೆ ನೀಡಿದೆಯಂತೆ. ಒಟ್ಟು ಮೂವತ್ತು ದಿನಗಳ ಕಾಲ ಚಿತ್ರೀಕರಣಗೊಳ್ಳಲಿರುವ ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ಬರೆದು ಬಿ.ಶಿವಾನಂದ್ ನಿರ್ದೇಶಿಸುತ್ತಿದ್ದಾರೆ. ನಿರ್ಮಾಣದ ಹೊಣೆ ಮ್ಯಾಥ್ಯೂ ರಾಜನ್ ಹಾಗೂ ಅರುಣ್ ಗಂಗಾಧರ್ ಅವರದ್ದಾದರೆ, ಅರುಣ್ ದೇವಸ್ಯ ದಿಶಾ ಪೂವಯ್ಯ ಮೂಗು ಸುರೇಶ್ ಮತ್ತು ಇತರರು ತಾರಾಬಳಗದಲ್ಲಿದ್ದಾರೆ. ಸಂಗೀತ ಎ.ಟಿ.ರವೀಶ್ ಅವರದ್ದು.



ಮಂಜು ದೊಡ್ಡಮನಿ ಎಂಬ ಚಿತ್ರಸಾಹಿತಿ




'ಮಂಜು ಕರಗುವ ಮುನ್ನ' ಹಾಗೂ 'ಖಾಲಿ ಪುಟದ ಕವನ' ಎಂಬೆರಡು ಕವನಸಂಕಲನಗಳನ್ನು ಈಗಾಗಲೇ ಹೊರತಂದಿರುವ ಉತ್ಸಾಹಿ ಯುವಕವಿ ಮಂಜು ದೊಡ್ಡಮನಿ 'ಸವಾರಿ-2' ಎನ್ನುವ ಚಿತ್ರಕ್ಕೆ ಒಂದು ಗೀತೆ ಬರೆಯುವ ಮೂಲಕ ಚಿತ್ರಸಾಹಿತಿಗಳ ಲಿಸ್ಟಿಗೆ ಹೊಸದಾಗಿ ಸೇರ್ಪಡೆಯಾಗಿದ್ದಾರೆ. ದಾವಣಗೆರೆ ಮೂಲದ ಇವರು ಬೆಂಗಳೂರಿನ ಖಾಸಗಿ ಸಂಸ್ಥೆಯೊಂದರಲ್ಲಿ ಉದ್ಯೋಗಿಯಾಗಿದ್ದು ಮೊದಲಿನಿಂದಲೂ ಸಿನಿಮಾಗಳಿಗೆ ಹಾಡು ಬರೆಯಬೇಕು ಎಂಬ ಆಸೆಯುಳ್ಳವರಾಗಿದ್ದರು. ಅನೇಕ ಕಡೆ ಅವಕಾಶಕ್ಕಾಗಿ ಪ್ರಯತ್ನಿಸಿದ್ದೂ ಉಂಟು. ಚಿತ್ರಸಾಹಿತಿಯಾಗಬೇಕೆಂಬ ಅವರ ಆಸೆ ಇದೀಗ ನೆರವೇರಿದೆ. "ಮೋಟು ಬೀಡಿ ಹಚ್ಕೊಂಡು, ಲುಂಗಿ ಟೈಟು ಮಾಡ್ಕೊಂಡು, ನಾಲ್ಕು ಸ್ಟೆಪ್ ಹಾಕೋಣ..." ಎಂದು ಆರಂಭವಾಗುವ ಈ ಗೀತೆಗೆ ಮಣಿಕಾಂತ್ ಕದ್ರಿ ಸಂಗೀತ ನೀಡಿದ್ದು ಪುನೀತ್ ರಾಜಕುಮಾರ್ ಹಾಡಿದ್ದಾರೆ. ಮಂಜು ದೊಡ್ಡಮನಿ ಇನ್ನೂ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಗಟ್ಟಿ ಚಿತ್ರಗೀತೆಗಳನ್ನು ಬರೆಯಲಿ, ಆ ಮೂಲಕ ಚಿತ್ರಸಾಹಿತ್ಯ ಕ್ಷೇತ್ರದಲ್ಲಿ ಹೊಸನೀರು ಹರಿಯಲಿ ಎಂದು ಈ ಮೂಲಕ ಹಾರೈಕೆ.



ಮರ್ಯಾದೆ ನಾಗರಾಜ್ ಹರ್ಷಿಕಾ ಪೂಣಚ್ಚ

ಆಕ್ರಮಣ ಆಡಿಯೋ ಔಟ್

ಕನ್ನಡದ ಚೊಚ್ಚಲ 3-ಡಿ ಹಾರರ್ ಸಿನಿಮಾ 'ಆಕ್ರಮಣ'ದ ಆಡಿಯೋ ಸಿಡಿ ಬಿಡುಗಡೆಯಾಗಿದೆ. ಪ್ರಶಾಂತ್ ಕುಮಾರ್ ನಿರ್ದೇಶನದ ಈ ಚಿತ್ರ ಈಗಾಗಲೇ ಸೆನ್ಸಾರ್ ಆಗಿದ್ದು ಸದ್ಯದಲ್ಲೇ ಬಿಡುಗಡೆಯಾಗಲಿದೆ. ಸತೀಶ್ ಆರ್ಯನ್ ಸಂಗೀತ ನೀಡಿರುವ 'ಆಕ್ರಮಣ'ದ ಸಿಡಿಗಳನ್ನೂ



ನಿರ್ದೇಶಕರುಗಳಾದ ಉಪೇಂದ್ರ ಹಾಗೂ ನಾಗಣ್ಣ ಬಿಡುಗಡೆ ಮಾಡಿದ್ದು ಯುವಕರ ತಂಡಕ್ಕೆ ಶುಭ ಕೋರಿದ್ದಾರೆ. ಈ ಮೊದಲು ಉಪೇಂದ್ರ ಅಭಿನಯದ ಫ್ಲಾಪ್ ಸಿನಿಮಾ 'ಕಠಾರಿವೀರ ಸುರಸುಂದರಾಂಗಿ'ಗೆ 3-ಡಿ ತಂತ್ರಜ್ಞಾನ ಅಳವಡಿಸಲಾಗಿದ್ದು ಆ ಚಿತ್ರಕ್ಕೆ ಸಹ-ನಿರ್ದೇಶಕರಾಗಿ ಕೆಲಸ ಮಾಡಿದ ಪ್ರಶಾಂತ್ ಕುಮಾರ್ ಆ ಮೂಲಕ 3-ಡಿ ತಂತ್ರಜ್ಞಾನದ ಬಗ್ಗೆ ಸಾಧ್ಯವಾದಷ್ಟು ತಿಳಿದುಕೊಂಡು ತಾವೂ ಅಂಥದೊಂದು ತಂತ್ರಜ್ಞಾನವಿರುವ ಸಿನಿಮಾ ಮಾಡಬೇಕೆಂದು ತೀರ್ಮಾನಿಸಿ ಈ 'ಆಕ್ರಮಣ' ಎಂಬ ಹಾರರ್ ಸಿನಿಮಾ ಮಾಡಿದ್ದಾರೆ. ಅವರ ಉತ್ಸಾಹಕ್ಕೆ ಜೈ.

ಬಹುಮುಖ ಪ್ರತಿಭೆ



ಕವಯತ್ರಿ ಪ್ರತಿಭಾ ನಂದಕುಮಾರ್ ಈಗ ಚಿತ್ರ ನಿರ್ದೇಶಕಿಯಾಗುತ್ತಿದ್ದಾರೆ. 'ಭೋಲೆ ಶಂಕರ' ಎಂದು ಕರೆಯಲ್ಪಡುವ ಈ ಚಿತ್ರವು ಉಷಾರಾವ್ ಅವರ ಸಣ್ಣಕಥೆಯನ್ನು ಆಧರಿಸಿದ್ದು, ಈ ಚಿತ್ರವನ್ನು ಯೋಗರಾಜ ಭಟ್ ಹಾಗೂ ಎಂ.ಎನ್.ಕುಮಾರ್ ಜಂಟಿಯಾಗಿ ನಿರ್ಮಿಸುತ್ತಿದ್ದಾರೆ. ಈಗಾಗಲೇ ತಮಿಳು ಚಿತ್ರನಿರ್ದೇಶಕ ಕೆ.ವಿ.ಆನಂದ್ ಅವರ ಬಳಿ ಸಹಾಯಕಿಯಾಗಿ ಕೆಲಸ ಮಾಡುವ ಮುಖೇನ ಸಿನಿಮಾ ನಿರ್ದೇಶನದ ಬಗ್ಗೆ ಒಂದಿಷ್ಟು ಅನುಭವ ಪಡೆದುಕೊಂಡಿರುವ ಪ್ರತಿಭಾ ಅವರಿಗೆ ತಮಿಳಿನಲ್ಲಿ ಒಂದು ಸಿನಿಮಾ ನಿರ್ದೇಶಿಸಬೇಕು ಎಂಬ ಇಂಗಿತ ಇತ್ತಂತೆ. ಆದರೀಗ ಆ ಇಂಗಿತ ಯೋಗರಾಜ್ ಭಟ್ ಸಹಕಾರದಿಂದ ಕನ್ನಡದಲ್ಲಿ ನೆರವೇರುತ್ತಿದೆ. ಈ ಚಿತ್ರಕ್ಕೆ ಹರಿಕೃಷ್ಣ ಹಾಡುಗಳಿದ್ದು ಜೂನ್ ಒಂದರಂದು 'ಭೋಲೆ ಶಂಕರ' ಸೆಟ್ಟೇರಲಿದೆ. ನಟನಟಿಯರು ಬಹುಪಾಲು ಹೊಸಬರಿರುತ್ತಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com